
ಸಂಪುಟ 23 ಸಂಚಿಕೆ 50
ಡಿಸೆಂಬರ್ 16, 2001 ಬೆಲೆ ರೂ. 3.00

ಐಕ್ಯರಂಗ


ದುಡಿವ ಜನರ ಪ್ರಾಣಮಿತ್ರ



ಗುಲ್ಬರ್ಗಾ ರೈತ ಚಳುವಳಿ ದೌರ್ಜನ್ಯಕ್ಕಿಳಿದ ಸರ್ಕಾರ

ದಮನಿತರ ಧ್ವನಿಯಾದ ಮಹಿಳಾ ಸಮ್ಮೇಳನ






ಅಯೋಧ್ಯ
ಸಂಘ ಪರಿವಾರದ ದುಷ್ಟ ಯೋಜನೆ

ಅಂಥ್ರಾಕ್ಸ್ ಭೂತ
ಪೇಟೆಂಟ್ ಪಿಶಾಚಿ

ರಾಷ್ಟ್ರೀಯ ರಂಗ ಅಧಿಕಾರಕ್ಕೆ

ಕಳೆದ ಸಂಚಿಕೆಯಲ್ಲಿ ಎಡ ಮತ್ತು ಜಾತ್ಯಾತೀತ ಪಕ್ಷಗಳ ವೇದಿಕೆ ರಚನೆ, ಸಫ್ದರ್ ಹಶ್ಮಿ ಕಗ್ಗೊಲೆ, ಸಂಸತ್ ಸದಸ್ಯರ ಸಾಮೂಹಿಕ ರಾಜೀನಾಮೆ, ಮತ್ತೆ ಭಾರತ್ ಬಂದ್, ಈ ಬಗ್ಗೆ ಓದಿರುವಿರಿ.
ರಾಷ್ಟ್ರೀಯ ರಂಗಕ್ಕೆ ಜನಾದೇಶ, ಪ್ರಧಾನಿಯಾಗಿ ವಿ.ಪಿ. ಸಿಂಗ್, ಯಾಸರ್ ಅರಾಫತ್ ಭಾರತ ಭೇಟಿ, ಹಿರಿಯ ನೇತಾರರಾದ ಸರೋಜ್ ದಾ ಮತ್ತು ಬಿ.ಟಿ.ಆರ್. ಅಗಲಿಕೆ ಮತ್ತು ಆನಂದ ಮಾರ್ಗಿಗಳ ಭಯೋತ್ಪಾದನೆ ಈ ಬಗ್ಗೆ ಓದಿ.

ಮಾಸದ ನೆನಪುಗಳು
(ಒಂದು ರಾಜಕೀಯ ಆತ್ಮಕಥನ)



ಜ್ಯೋತಿಬಸು ಆತ್ಮಕಥನ

ಕನ್ನಡಕ್ಕೆ: ವಿಶ್ವಕುಂದಾಪುರ

ಧಾರವಾಹಿ: 82

ಬೊಫೋರ್ಸ್ ಪ್ರಕರಣ ಕುರಿತು ಹೆಚ್ಚೆಚ್ಚು ದಾಖಲೆ ಪತ್ರಗಳು ಪತ್ರಿಕೆಗಳಲ್ಲಿ ಪ್ರಕಟವಾಗತೊಡಗಿದವು. ಹಾಗೂ ರಾಜ್ಯಸಭೆಯಲ್ಲಿ ಎರಡು ತಿದ್ದುಪಡಿ ಮಸೂದೆಗಳು ಅಂಗೀಕಾರವಾಗುವುದನ್ನು ಪ್ರತಿಪಕ್ಷಗಳು ಯಶಸ್ವಿಯಾಗಿ ತಡೆದವು. ಗಾಬರಿಗೊಂಡ ರಾಜೀವ್‌ಗಾಂಧಿ ತರಾತುರಿಯಲ್ಲಿ ಚುನಾವಣೆಗಳನ್ನು ಘೋಷಿಸಿದರು. ಪ್ರತಿಪಕ್ಷಗಳು ಒಮ್ಮತದ ಅಭ್ಯರ್ಥಿಯನ್ನು ಕಣಕ್ಕಿಳಿಸುವುದನ್ನು ತಡೆಯಲು ಅವರು ಈ ತಂತ್ರ ಹೂಡಿದರು. 1989 ರ ನವೆಂಬರ್ 22, 24 ಮತ್ತು 26 ರಂದು 9ನೇ ಲೋಕಸಭೆಗೆ ಮೂರು ಹಂತಗಳಲ್ಲಿ ಮತದಾನ ನಡೆಯಿತು. ಯಾವುದೇ ನ್ಯಾಯಸಮ್ಮತ ಪ್ರಜಾಸತ್ತಾತ್ಮಕ ಹಾಗೂ ರಾಷ್ಟ್ರೀಯ ಪ್ರಶ್ನೆಗಳನ್ನು ಎತ್ತುವುದರಿಂದ ಚುನಾವಣೆಗಳನ್ನು ಗೆಲ್ಲಲು ಸಾಧ್ಯವಿಲ್ಲ ಎಂಬುದನ್ನು ಅರಿತ ಕಾಂಗ್ರೆಸ್ ಪಕ್ಷ ಕೋಮುವಾದದ ಮೊರೆ ಹೊಕ್ಕಿತು.



ಪ್ರಧಾನಿಯಾಗಿ ವಿ.ಪಿ.ಸಿಂಗ್

ಎಡರಂಗ ಮೂರು ಅಂಶಗಳ ಕಾರ್ಯಕ್ರಮ ಹೊಂದಿತ್ತು. ಎಡ ಪಕ್ಷಗಳ ಬೆಂಬಲದೊಂದಿಗೆ ಕೇಂದ್ರದಲ್ಲಿ ಒಂದು ಪ್ರಜಾಸತ್ತಾತ್ಮಕ ಹಾಗೂ ಜಾತ್ಯಾತೀತ ಸರಕಾರವನ್ನು ಪ್ರತಿಷ್ಠಾಪಿಸುವುದು, ಕೋಮುವಾದಿ ಶಕ್ತಿಗಳನ್ನು ಜನತೆಯಿಂದ ಪ್ರತ್ಯೇಕಿಸುವುದು ಹಾಗೂ ಲೋಕಸಭೆಯಲ್ಲಿ ಎಡಶಕ್ತಿಗಳ ಬಲ ಮತ್ತು ಪ್ರಭಾವವನ್ನು ಹೆಚ್ಚಿಸುವುದು.

ಜನರು ಕಾಂಗ್ರೆಸ್ಸನ್ನು ಸಾರಾಸಾಗಟು ತಿರಸ್ಕರಿಸಿದರು. ಕಾಂಗ್ರೆಸ್ ಸ್ಪರ್ಧಿಸಿದ 510 ರಲ್ಲಿ ಕೇವಲ 197 ಕ್ಷೇತ್ರಗಳಲ್ಲಿ ಗೆದ್ದಿತು. ಅದು ಶೇ 39.5 ಮತಗಳನ್ನು ಪಡೆಯಿತು. ದಕ್ಷಿಣ ರಾಜ್ಯಗಳಾದ ಕೇರಳ, ತಮಿಳುನಾಡು, ಆಂಧ್ರಪ್ರದೇಶ ಮತ್ತು ಕರ್ನಾಟಕಗಳಿಂದಲೇ ಅದು 107 ಸ್ಥಾನಗಳನ್ನು ಪಡೆಯಿತು. ಜನತಾದಳ 142 ಸ್ಥಾನಗಳಲ್ಲಿ ಜಯಶಾಲಿಯಾಯಿತು. ಬಿಜೆಪಿಗೆ ಕೇವಲ 2 ಸ್ಥಾನಗಳಿದ್ದದ್ದು ಈ ಬಾರಿ 86 ಸ್ಥಾನಗಳನ್ನು ಗೆದ್ದಿತು. ಇದು ಅಪಾಯಕಾರಿ ಬೆಳವಣಿಗೆಯಾಗಿತ್ತು. ಪ್ರತಿಪಕ್ಷಗಳು ಈ ವಿಷಯದ ಬಗ್ಗೆ ಜಾಗ್ರತವಾಗಿದಿದ್ದರೆ ಬಿಜೆಪಿಯು ಈ ಬೆಳವಣಿಗೆಯನ್ನು ತಡೆಯಬಹುದಿತ್ತು. ನಾಲ್ಕು ಎಡಪಕ್ಷಗಳು 52 ಕ್ಷೇತ್ರಗಳಲ್ಲಿ ಗೆದ್ದವು. ಸಿಪಿಐ(ಎಂ) -33, ಸಿಪಿಐ-12, ಆರ್‌ಎಸ್‌ಪಿ-4 ಮತ್ತು ಫಾರ್ವರ್ಡ್‌ಬ್ಲಾಕ್ -3

ಪಶ್ಚಿಮ ಬಂಗಾಳದಲ್ಲಿ ಕಾಂಗ್ರೆಸ್ಸನ್ನು ಅದರ ಹಿಂದಿನ ಸಾಂಕೇತಿಕ ಸ್ಥಾನಕ್ಕೆ ತಳ್ಳುವಲ್ಲಿ ನಾವು ಯಶಸ್ವಿಯಾದೆವು. ಲೋಕಸಭೆ ಚುನಾವಣೆಯಲ್ಲಿ 18 ವರ್ಷ ತುಂಬಿದವರು ಮತದಾನ ಮಾಡುತ್ತಿರುವುದು ಕೂಡ ಅದೇ ಪ್ರಥಮವಾಗಿತ್ತು. ರಾಜ್ಯದ 4.4 ಕೋಟಿ ಮತದಾರರಲ್ಲಿ 25 ಲಕ್ಷಕ್ಕೂ ಹೆಚ್ಚಿನವರು 18-25 ವಯೋಗುಂಪಿನವರು. 1987 ಕ್ಕಿಂತ ಹೆಚ್ಚು ಅಂದರೆ ಶೇಕಡ 78.87 ಮತದಾರರು ಮತ ಚಲಾಯಿಸಿದರು. 40 ರ ಪೈಕಿ 36 ಸ್ಥಾನಗಳಲ್ಲಿ ರಂಗ ಗೆದ್ದಿತು. ಕಾಂಗ್ರೆಸ್ ಪಕ್ಷ ಕಲ್ಕತ್ತಾ (ವಾಯುವ್ಯ) ಕ್ಷೇತ್ರದಲ್ಲಿ ನಾವು ಬೆಂಬಲಿಸಿದ್ದ ಜನತಾದಳವನ್ನು ಸೋಲಿಸಿತು. ಕಾಂಗ್ರೆಸ್ ಕೇವಲ ನಾಲ್ಕರಲ್ಲಿ ಜಯಶಾಲಿಯಾಯಿತು. ಕಾಂಗ್ರೆಸ್‌ನ ಮಿತ್ರಪಕ್ಷ ಜಿಎಸ್‌ಎಲ್‌ಎಫ್ ಡಾರ್ಜಿಲಿಂಗ್ ಕ್ಷೇತ್ರವನ್ನು ತನ್ನ ಮಡಿಲಿಗೆ ಹಾಕಿಕೊಂಡಿತು. 1984 ರಲ್ಲಿ ಕಾಂಗ್ರೆಸ್‌ಗೆ 16 ಸ್ಥಾನ ಸಿಗಲು ಅನುಕಂಪದ ಅಲೆಯೇ ಕಾರಣ ಎಂಬುದು ಈಗ ಸ್ಪಷ್ಟವಾಯಿತು. ಎಡರಂಗ-ಜನತಾ ಕೂಟ ಶೇ 51.11 ಮತಗಳನ್ನು ಪಡೆಯಿತು. 1984 ರಲ್ಲಿ ನಮಗೆ ಶೇ 48.43 ಮತ ಲಭ್ಯವಾಗಿತ್ತು. ಕಾಂಗ್ರೆಸ್‌ನ ಪಾಲು ಶೇ 48.43 ರಿಂದ 43.08 ಕ್ಕೆ ಇಳಿಯಿತು. ಅದರಲ್ಲೂ ಬೆಟ್ಟ ಪ್ರದೇಶಗಳಲ್ಲಿ ಜಿಎಸ್‌ಎಲ್‌ಎಫ್ ಬೆಂಬಲದೊಂದಿಗೆ.

ವಿ.ಪಿ.ಸಿಂಗ್ ಪ್ರಧಾನಿ

ಕಾಂಗ್ರೆಸ್ ಪ್ರತಿಪಕ್ಷದಲ್ಲಿ ಕುಳಿತುಕೊಳ್ಳುತ್ತದೆ ಎಂದು ರಾಜೀವ್‌ಗಾಂಧಿ ಹೇಳಿದರು. ಇದು ಅವರ ಆಯ್ಕೆಯಾಗಿರಲಿಲ್ಲ. ಜನರು ತಮ್ಮ ತೀರ್ಪನ್ನು ಸ್ಪಷ್ಟಪಡಿಸಿದ್ದರು. ನಾವು ರಾಷ್ಟ್ರೀಯರಂಗದ ಜತೆಗಿದ್ದೆವು. ಬಿಜೆಪಿ ಕೂಡ ಮೈತ್ರಿಕೂಟವನ್ನು ಬೆಂಬಲಿಸುವ ಒತ್ತಡಕ್ಕೆ ಒಳಗಾಯಿತು. ತಾನು ಪ್ರಧಾನಿ ಆಗಬೇಕೆಂಬ ಬಯಕೆಯನ್ನು ವ್ಯಕ್ತಪಡಿಸುವ ಮೂಲಕ ಚಂದ್ರಶೇಖರ್ ಬಿಕ್ಕಟ್ಟು ಸೃಷ್ಟಿಸಿದರು. ವಿ.ಪಿ.ಸಿಂಗ್ ನಮ್ಮ ಪ್ರಧಾನಿ ಸ್ಥಾನದ ಅಭ್ಯರ್ಥಿ ಎಂದು ಬಿಂಬಿಸಿ ಚುನಾವಣೆಯಲ್ಲಿ ಹೋರಾಡಿರುವಾಗ ಚಂದ್ರಶೇಖರ್ ಹೀಗೆ ಹೇಳಿದ್ದರಿಂದ ಸಮಸ್ಯೆಯಾಯಿತು. ವಿ.ಪಿ.ಸಿಂಗ್ ಪ್ರಧಾನಿಯಾಗುವುದು ನಮ್ಮ ಬಯಕೆಯಾಗಿತ್ತು. 1989 ಡಿಸೆಂಬರ್ ಎರಡರಂದು ವಿ.ಪಿ.ಸಿಂಗ್ ಪ್ರಧಾನಿಯಾಗಿ ಪ್ರಮಾಣವಚನ ಸ್ವೀಕರಿಸಿದರು. ಎರಡನೇ ಬಾರಿಗೆ ಕೇಂದ್ರದಲ್ಲಿ ಕಾಂಗ್ರೆಸ್ಸೇತರ ಸರಕಾರ ರಚನೆಯಾಯಿತು.


ಆದರೆ ಇನ್ನೂ ಅಪಾಯವಿತ್ತು. 'ಕಾಂಗ್ರೆಸ್ಸನ್ನು ಸೋಲಿಸಿ, ಬಿಜೆಪಿಯನ್ನು ಪ್ರತ್ಯೇಕಿಸಿ' ಎಂಬ ಘೋಷಣೆಯೊಂದಿಗೆ ಚುನಾವಣೆ ಹೋರಾಟ ನಡೆಸಿದ್ದೆವು. ಘೋಷಣೆಯ ಮೊದಲ ಭಾಗ ಸಾಕಾರಗೊಂಡಿತ್ತು. ಎರಡನೆಯದು ಇನ್ನೂ ದೂರ ಉಳಿದಿತ್ತು. ಹಾಲ್ದಿಯಾ ಯೋಜನೆಗೆ 1990 ರಲ್ಲಿ ಅನುಮತಿ ನೀಡಲಾಯಿತು. ಇದು ದೇಶದ ಈಶಾನ್ಯ ಭಾಗಕ್ಕೆ ದೊಡ್ಡ ನೆರವಾಯಿತು.

ಪಶ್ಚಿಮ ಬಂಗಾಳ ಕೈಗಾರಿಕಾ ಅಭಿವೃದ್ಧಿ ನಿಗಮ 1977 ರಷ್ಟು ಹಿಂದೆಯೇ ಈ ಸಂಬಂಧ ಬಯಕೆ ಪತ್ರವನ್ನು (Letter of Intent) ಸಲ್ಲಿಸಿತ್ತು. 1981 ರ ಮಾರ್ಚ್‌ನಲ್ಲಿ ಕೇಂದ್ರಕ್ಕೆ ವಿವರವಾದ ವರದಿಯನ್ನು ನೀಡಲಾಗಿತ್ತು. ಯೋಜನೆಯ ಸ್ಥಳ ಗಡಿ ಪ್ರದೇಶದಲ್ಲಿದ್ದು ಇದರಿಂದ ಸಮಸ್ಯೆ ಉಂಟಾಗಬಹುದು ಎಂಬ ನೆಪವನ್ನು ಪ್ರಧಾನಿ ಇಂದಿರಾಗಾಂಧಿ ಮುಂದೊಡ್ಡಿದರು. ಆಕೆಗೆ ಮನವರಿಕೆ ಮಾಡಿಕೊಡಲು ನಾನು ಪ್ರಯತ್ನಿಸಿದೆ. ಬಾಂಗ್ಲಾ ದೇಶದೊಂದಿಗೆ ನಮ್ಮ ಸಂಬಂಧ ಉತ್ತಮವಾಗಿತ್ತು ಹಾಗೂ ಪಾಕಿಸ್ತಾನದ ಬಗ್ಗೆ ಹೇಳುವುದಾದರೆ ಅವರು ಪ.ಬಂಗಾಳದ ಮೇಲೆ ದಾಳಿ ಮಾಡಬೇಕಾದರೆ ಅದರ ಎಫ್ 16 ಗಳು ಮೊದಲು ದೆಹಲಿ ಹಾಗೂ ಮುಂಬಯಿಯನ್ನು ಹಾದು ಬರಬೇಕಾಗಿತ್ತು. 1980 ರಲ್ಲಿ ಈ ಯೋಜನೆಯ ವೆಚ್ಚ 428 ಕೋಟಿ ರೂಪಾಯಿ ಇದ್ದದ್ದು ಈಗ 3000 ಕೋಟಿ ರೂಪಾಯಿಗೆ ಏರಿತು! ಆದರೆ ಈಗ ಯೋಜನೆಗೆ ಹಸಿರು ನಿಶಾನೆ ತೋರಿಸಿದ್ದರಿಂದ ರಾಜ್ಯದ ಕೈಗಾರಿಕೆ ಬೆಳವಣಿಗೆಯ ಅವಕಾಶಕ್ಕೆ ಹಾದಿ ಮುಕ್ತವಾಯಿತು.


ಕಾಮ್ರೇಡ್ ಸರೋಜ್ ಮುಖರ್ಜಿ ನಿಧನ

1990 ಜನವರಿ 10 ರಂದು ಕಾಂ. ಸರೋಜ್ ಮುಖರ್ಜಿ ನಿಧನರಾದರು. ಅವರು ದೀರ್ಘಕಾಲದಿಂದ ಅಸ್ವಸ್ಥರಾಗಿದ್ದರು. ಅರ್ಧ ಶತಮಾನ ಕಾಲದ ಒಬ್ಬ ಮಿತ್ರನನ್ನು ನಾನು ಕಳೆದುಕೊಂಡೆ. ಅವರ ಪತ್ನಿ ಕಾಂ. ಕನಕಮುಖರ್ಜಿ ಪಕ್ಷದ ಕೇಂದ್ರ ಸಮಿತಿ ಸದಸ್ಯರಾದರು. ಇಂಥ ಒಂದು ಸಮರ್ಪಿತ ಕಮ್ಯುನಿಸ್ಟ್ ಕುಟುಂಬವಿರುವುದು ಬಹಳ ಅಪರೂಪ. ಅವರು ನಮ್ಮ ಪಕ್ಷದ ಸಂಘಟಕರಲ್ಲಿ ಒಬ್ಬರು. ಪ್ರಮೋದ್ ದಾಸ್ ಗುಪ್ತಾರ ನಿಧನದ ನಂತರ ಪಕ್ಷದ ರಾಜ್ಯ ಸಮಿತಿ ಕಾರ್ಯದರ್ಶಿಯಾದರು. 1985 ರಿಂದ ಪೊಲಿಟ್‌ಬ್ಯೂರೋ ಸದಸ್ಯರಾಗಿದ್ದರು.

ಸರೋಜ್ ಬಾಬು 'ಗಣಶಕ್ತಿ' ಮತ್ತು 'ಮಾರ್ಕ್ಸ್‌ವಾದಿ ಪಥ' ಈ ಎರಡೂ ಪತ್ರಿಕೆಗಳ ಸಂಪಾದಕರಾಗಿದ್ದರು. ರವೀಂದ್ರನಾಥ ಟಾಗೋರ್, ಶರಚ್ಚಂದ್ರ ಚಟರ್ಜಿ ಮತ್ತು ಭೂಪೇಂದ್ರನಾಥ ದತ್ತ ಅವರ ಜತೆ ಸರೋಜ್‌ಗೆ ಸಂಪರ್ಕ ಇತ್ತು. ವೈಯಕ್ತಿಕ ಜೀವನದಲ್ಲಿ ಶಿಸ್ತಿನ ಸಿಪಾಯಿಯಾಗಿದ್ದ ಅವರು ಪಕ್ಷದ ಕೆಲಸದಲ್ಲೂ ಅದನ್ನು ತುಂಬಾ ನಿಷ್ಠೆಯಿಂದ ಅಳವಡಿಸಿಕೊಂಡರು. ಅವರ ನಿಧನದ ನಂತರ ಕಾಂ. ಶೈಲೇನ್ ದಾಸ್ ಗುಪ್ತಾ ರಾಜ್ಯ ಕಾರ್ಯದರ್ಶಿಯಾದರು.



ಕಾಂ.ಸರೋಜ್ ಮುಖರ್ಜಿ



ಕಾಂ.ಬಿ.ಟಿ.ರಣದಿವೆ

ಅರಾಫತ್ ಆಗಮನ

ಪ್ಯಾಲೆಸ್ತೇನಿ ಹೋರಾಟಗಾರ ಯಾಸರ್ ಅರಾಫತ್ ಮಾರ್ಚ್ 28 ರಂದು ಕೊಲ್ಕತ್ತಾಕ್ಕೆ ಬಂದರು. ನೇತಾಜಿ ಒಳಾಂಗಣ ಕ್ರೀಡಾಂಗಣದಲ್ಲಿ ರಾಜ್ಯ ಸರ್ಕಾರದ ಪರವಾಗಿ ಅವರನ್ನು ಸನ್ಮಾನಿಸಿದೆವು.

ಆನಂದ ಮಾರ್ಗಿಗಳ ಭಯೋತ್ಪಾದನೆ

ಪುರುಲಿಯಾ ಜಿಲ್ಲೆಯ ಭಟ್ಕಾ ಗ್ರಾಮದಲ್ಲಿ ಆನಂದ ಮಾರ್ಗಿಗಳು ಸ್ಥಳೀಯ ಜನರೊಂದಿಗೆ ಘರ್ಷಣೆಗಿಳಿದರು. ಇಬ್ಬರು ಮಾರ್ಗಿಗಳು ಸತ್ತರು. ಆನಂದಮಾರ್ಗಿಗಳು ಜಮೀನನ್ನು ಅತಿಕ್ರಮಿಸುತ್ತಿದ್ದರು ಹಾಗೂ ಗ್ರಾಮಗಳಲ್ಲಿ ಅಸಮಾಧಾನ ಭುಗಿಲೇಳುತ್ತಿತ್ತು ಎಂಬ ವರದಿಗಳು ನನಗೆ ಸಿಕ್ಕವು. ಕಟ್ಟುನಿಟ್ಟಿನ ಕ್ರಮಗಳನ್ನು ಕೈಗೊಳ್ಳುವಂತೆ ನಾನು ಅಧಿಕಾರಿಗಳಿಗೆ ಸೂಚಿಸಿದೆ.

ಆನಂದಮಾರ್ಗ ಒಂದು ಸಾಮಾನ್ಯ ಸಂಘಟನೆಯೆಂದು ಭಾವಿಸಬೇಕಿಲ್ಲ. ಅದು ಅಂತರ್ರಾಷ್ಟ್ರೀಯ ಸಂಪರ್ಕಗಳಿರುವ ಒಂದು ಭಯೋತ್ಪಾದಕ ಸಂಘಟನೆ. ಅದು ಕಟ್ಟಾ ಕಮ್ಯುನಿಸ್ಟ್ ವಿರೋಧಿಯೂ ಹೌದು. ಪುರುಲಿಯಾದಲ್ಲಿರುವ ಅದರ ಕೇಂದ್ರ ಕಚೇರಿಯಿಂದ 1989 ಮಾರ್ಚ್ 15 ರಂದು ಅತ್ಯಾಧುನಿಕ ಶಸ್ತ್ರಾಸ್ತ್ರಗಳನ್ನು ವಶಪಡಿಸಿಕೊಳ್ಳಲಾಯಿತು. ***ಇತರರ ಭಾವನೆಗಳಿಗೆ ನೋವಾಗದಂತೆ ಧರ್ಮವನ್ನು ಆಚರಿಸುವ ವಿಚಾರದಲ್ಲಿ ನಮ್ಮ ಅಭ್ಯಂತರವೇನೂ ಇಲ್ಲ. ಆದರೆ ಇತರರ ಧರ್ಮದಲ್ಲಿ ಹಸ್ತಕ್ಷೇಪ ಮಾಡಲು ರಾಜ್ಯ ಸರಕಾರ ಅವಕಾಶ ನೀಡುವುದಿಲ್ಲ. ಇದು ನಮ್ಮ ಧೋರಣೆ. ಕೋಮುಸೌಹಾರ್ದ ವಿಚಾರದಲ್ಲಿ ನಮ್ಮ ರಾಜ್ಯ ಸದಾ ಮುಂಚೂಣಿಯಲ್ಲಿದೆ. ಆ ದಾಖಲೆಗೆ ಕಳಂಕವಾಗುವುದು ನಮಗೆ ಇಷ್ಟವಿಲ್ಲ.***

ಕಾಮ್ರೇಡ್ ಬಿ.ಟಿ.ಆರ್ ನಿಧನ

ಸಿಪಿಐ(ಎಂ) ಪೊಲಿಟ್‌ಬ್ಯೂರೋ ಸದಸ್ಯ ಹಾಗೂ ಸಿಐಟಿಯು ಅಧ್ಯಕ್ಷ ಕಾಮ್ರೇಡ್ ಬಿ.ಟಿ.ರಣದಿವೆ 1990 ಏಪ್ರಿಲ್ 6 ರಂದು ನಿಧನರಾದರು. ಅವರೊಬ್ಬ ಮಹಾನ್ ಸಿದ್ಧಾಂತಿಯಾಗಿದ್ದರು. ಸ್ವಾತಂತ್ರ್ಯಪೂರ್ವ ಮುಂಬಯಿಯ ಕಾರ್ಮಿಕ ಆಂದೋಲನದಲ್ಲಿ ಅವರು ಬಹುದೊಡ್ಡ ಪಾತ್ರ ವಹಿಸಿದ್ದರು. ಗಿರಣಿ ಕಾಮಗಾರ್ ಮಜ್ದೂರ್ ಯೂನಿಯನ್ ಸ್ಥಾಪನೆಯ ಪ್ರೇರಕ ಶಕ್ತಿಯಾಗಿದ್ದರು. ಒಂದು ಕಾಲದಲ್ಲಿ ಅದು ಏಷ್ಯಾದಲ್ಲೇ ಅತಿದೊಡ್ಡ ಕಾರ್ಮಿಕ ಸಂಘವಾಗಿತ್ತು.

ಸೈದ್ಧಾಂತಿಕ ಚರ್ಚೆಯಲ್ಲಿ ಅವರೊಬ್ಬ ಮಹಾನ್ ನೇತಾರರಾಗಿದ್ದರು. ಯುರೋಪ್ ಸೋವಿಯತ್ ಬಣ ಕುಸಿದು ಬೀಳುತ್ತಿದ್ದ ವೇಳೆ ರಣದಿವೆ ಅನುಪಸ್ಥಿತಿ ಎದ್ದು ಕಾಣುತ್ತಿತ್ತು.

(ಮುಂದುವರಿಯುವುದು)

ಕಾಂ. ಎನ್.ಕೆ. ಸುಧಾರಿಸದ ಅನಾರೋಗ್ಯ

ಸಂಗಾತಿ ಎನ್.ಕೆ.ಯವರ ಸ್ಥಿತಿ ಈ ಒಂದು ವಾರದಲ್ಲೂ ಅಷ್ಟೇನೂ ಸುಧಾರಿಸಿಲ್ಲ. ವೈದ್ಯರ ಶುಶ್ರೂಷೆ ನಡೆದಿದೆ. ಅವರು ಲಭ್ಯವಿರುವ ಎಲ್ಲಾ ಚಿಕಿತ್ಸೆಯನ್ನೂ ನೀಡುತ್ತಿದ್ದಾರೆ. ಕೋಮಾ ಸ್ಥಿತಿಯಿಂದ ಎನ್.ಕೆ. ಯವರು ಎಚ್ಚರಗೊಳ್ಳಲು ಇನ್ನಷ್ಟೂ ಕಾಲ ಕಾಯುವ ಸ್ಥಿತಿ ಇದೆ.

ಸಂ

ಗುಲ್ಬರ್ಗಾ: ರೈತ ಚಳುವಳಿ ದಮನಕ್ಕಿಳಿದ ಕೃಷ್ಣ ಖರ್ಗೆ

ವಿದ್ಯುತ್ ಕಡಿತದ ಬವಣೆಯಿಂದ ತತ್ತರಿಸಿ ಬೀದಿಗಿಳಿದ ರೈತರ ಮೇಲೆ ಪೊಲೀಸರು ಹರಿಹಾಯ್ದರು. ಲಾಠಿ, ಬೂಟು, ಬಂದೂಕುಗಳಿಂದ ಚಚ್ಚಿದರು. ರೈತರ ರ್‍ಯಾಲಿ ಮಾಡಿ ಮೊಸಳೆ ಕಣ್ಣೀರು ಸುರಿಸಿದ ಕೃಷ್ಣ ಖರ್ಗೆಯವರಿಗೆ ಕಂಗಾಲಾಗಿರುವ ನಾಡಿನ ಮಣ್ಣಿನ ಮಕ್ಕಳ ಬದುಕಿಗಿಂತ ವಿಶ್ವಬ್ಯಾಂಕ್ ಕಾರ್ಪೋರೇಟ್ ಕಂಪನಿ ಧಣಿಗಳ ಹಿತಗಳೇ ಮುಖ್ಯ ಪ್ರತಿಭಟನೆಯ ಒಂದು ಧ್ವನಿಯನ್ನು ಸಹಿಸದ 'ಸೈತಾನ ಕೃಷ್ಣ'ರ ಪೊಲೀಸರು ಡಿಸೆಂಬರ್ 3ರಂದು ಗುಲ್ಬರ್ಗಾದಲ್ಲಿ ನಡೆಸಿದ ದೌರ್ಜನ್ಯ ಎಂತಹದು?

ಕೆ. ನೀಲಾ


ರಾಕ್ಷಸೀಯ ಆಕ್ರಮಣ

ಇದೇ ಡಿಸೆಂಬರ್ 3 ಕೆಪಿಟಿಸಿಎಲ್ ಗೆ ರೈತರ ಮುತ್ತಿಗೆಯ ದಿನ. ನಾನು ಗಾಡಿಗೆ ಕಿಕ್ ಹೊಡೆದು ಕೆಪಿಟಿಸಿಎಲ್ ಕಡೆಗೆ ದೌಡಾಯಿಸಿದೆ. ರಸ್ತೆಯ ತುಂಬ ರೈತ ಸಾಗರ. ಹಲಗಿ(ತಮಟೆ) ಬಾರಿಸುತ ರೈತರು ಗಂಭೀರ ಗತ್ತಿನಲ್ಲಿ ಹೋರಾಟಕ್ಕೆ ಸ್ಫೂರ್ತಿ ತರುತ್ತಿದ್ದರು. ಘೋಷಣೆಗಳು ಅಲೆ ಅಲೆಗಳಾಗಿ ಸಾರ್ವಜನಿಕರ ಕಿವಿ ತಲುಪುತ್ತಿದ್ದವು. ಮನಸ್ಸು ತಟ್ಟುತ್ತಿದ್ದವು. ನಾನು ಅಲ್ಲಲ್ಲಿ ಜನರ ನಡುವೆ ಹೋಗಿ ನಿಂತೆ. ಜನ ಮಾತಾಡುತ್ತಿದ್ದರು. "ಇದೆಂಥಾ ಸರ್ಕಾರ್ರೀ, ದೇಶಕ್ಕೆ ಅನ್ನ ಕೊಡಾ ರೈತನ ಪಂಪ್ ಸೆಟ್‌ಗೂ ಕರೆಂಟಿನ ರೇಟ್ ದುಬಾರಿ ಮಾಡಿದ್ರ ಹ್ಯಾಂಗರೀ..."? ನಮ್ ಮನಿಗೋಳ ಕರೆಂಟ್ ಬಿಲ್‌ನೂ ಐದುನೂರು-ಆರು ನೂರು ಬರ್ಲತದ್ರೀ.. ಸಣ್ಣ ಪಗಾರನೋರು ಹ್ಯಾಂಗ್ ಕಟ್ಟಬೇಕು? ಮತ್ತೊಬ್ಬ ಯಜಮಾನ ಹೇಳ್ತಿದ್ದ, "ನಮ್ಮ ಜಿಲ್ಲೆಯವ್ರೇ ಆರ್ ಮಂದಿ ಮಿನಿಸ್ಟ್ರಹರಾ ಇವ್ರೇನು ಮಾಡ್ಲತಾರಾ? ಇವ್ರೀಗಿ ಚಿಂತಿ ಯಾಕಿಲ್ಲ..."?

ಉತ್ತರದ ಹೂಡುಕಾಟದಲ್ಲಿ

ಎಷ್ಟೊಂದು ಅಭಿಪ್ರಾಯಗಳು! ಎಷ್ಟೊಂದು ಆತಂಕಗಳು!! ಜನರು ಪ್ರಶ್ನೆಗಳಿಗೆ ಉತ್ತರದ ಹುಡುಕಾಟದಲ್ಲಿದ್ದರು. ಕರ್ನಾಟಕ ಪ್ರಾಂತ ರೈತ ಸಂಘ, ಕರ್ನಾಟಕ ರಾಜ್ಯರೈತ ಸಂಘ ಮತ್ತು ಪಂಪ್ ಸೆಟ್ ಬಳಕೆದಾರರ ಹೋರಾಟ ಸಮಿತಿಯಿಂದ ಕಳೆದ ಮೂರು ದಿನಗಳಿಂದ ಕೆಪಿಟಿಸಿಎಲ್ ಮುಂದೆ ಧರಣಿ ಸತ್ಯಾಗ್ರಹ ನಡೆದಿತ್ತು. ಕರ್ನಾಟಕ ಕಾಂಗ್ರೆ ಸರಕಾರ ಗದ್ದುಗೆ ಹತ್ತಿದಾಗಿನಿಂದ ಅಕ್ಷರಶ: ರೈತರ ಪರ ಕೆಲಸ ಮಾಡಲಿಲ್ಲ. ಬದಲಿಗೆ ರೈತ ವಿರೋಧಿಯಾಗಿ ನಡೆದುಕೊಂಡಿದೆ. ಒಟ್ಟು ಕೃಷಿ ಕ್ಷೇತ್ರವೇ ಹಲವಾರು ಸಮಸ್ಯೆಗಳಿಂದ ನಲುಗುತ್ತಿರುವಂತೆಯೇ ಪಂಪ್‌ಸೆಟ್ ಬಳಕೆದಾರರೂ ವಿದ್ಯುತ್ ಕಡಿತದಿಂದ ಮತ್ತು ವಿದ್ಯುತ್ ಬೆಲೆ ಏರಿಕೆಯಿಂದ ತತ್ತರಿಸಿ ಹೋಗಿರುವರು. ಆದ್ದರಿಂದಲೇ ವಿದ್ಯುತ್ ದರ ಇಳಿಸಬೇಕು, 24 ತಾಸು ವಿದ್ಯುತ್ ಪೂರೈಸಬೇಕೆಂದು ಒತ್ತಾಯಿಸಿ ಪಂಪ್‌ಸೆಟ್ ಬಳಕೆದಾರರು ಸರ್ಕಾರಕ್ಕೆ ಹಲವಾರು ಬಾರಿ ಮನವಿ ಮಾಡಿಕೊಂಡಿದ್ದರು. ಆಳಂದ, ಗುಲ್ಬರ್ಗ ಮತ್ತು ಅಫ್ಜಲಪುರ ತಾಲ್ಲೂಕುಗಳಲ್ಲಿ 38000 ಪಂಪ್ ಸೆಟ್‌ಗಳಿವೆ. ಸುಮಾರು ಐದು ಲಕ್ಷಕ್ಕೂ ಹೆಚ್ಚು ಕೃಷಿ-ಕೂಲಿಕಾರ್ಮಿಕರ ಜೀವನ ಇದರ ಮೇಲೆ ನಿರ್ಧಾರವಾಗಿದೆ. ಅದರಲ್ಲೂ ಹೊಸ ಮೀಟರ್ ಅಳವಡಿಕೆಯೇನಾದರೂ ಮಾಡಿದಲ್ಲಿ, ಪಂಪ್ ಸೆಟ್ ಬಳಕೆದಾರರ ಬದುಕು ಸಾಲದ ಗೂಡಾಗಲಿದೆ. ಈಗಾಗಲೇ ಸಾಲದ ಶೂಲಕ್ಕೆ ಅಸಂಖ್ಯಾತ ಜನ ರೈತರು ಬಲಿಯಾಗಿರುವರು.

ಆದರೆ ರೈತ ವಿರೋಧಿಯಾದ ಕುರುಡು ಕಾಂಗ್ರೆ ಸರಕಾರಕ್ಕೆ ರೈತರ ಗೋಳು ಮುಟ್ಟುವುದೇ ಇಲ್ಲ. ಅವರ ಕಿವುಡ ಕಿವಿಗೆ ಕೇಳಿಸುವಂತೆ ಗಟ್ಟಿಯಾಗಿ ಹೇಳಲೆಂದು ಡಿಸೆಂಬರ್.3 ರಂದು ಸಾವಿರಾರು ಜನ ರೈತರು ತಮ್ಮ ಬೇಡಿಕೆಯ ಬಾವುಟ ಎತ್ತಿ ಹಿಡಿದು ಕಲ್ಬುರ್ಗಿ ನಗರಕ್ಕೆ ಧಾವಿಸಿದರು. ಸರಕಾರಕ್ಕೆ ಕೊಟ್ಟ ಗಡುವು ಮೀರಿತ್ತು. ಆದರೂ ರೈತರು ಕೆಪಿಟಿಸಿಎಲ್ ಮುಂದೆ ಘೋಷಣೆಗಳೊಂದಿಗೆ ಕುಳಿತ್ತಿದ್ದರು. ರೈತರಿಗಿರುವಷ್ಟು ತಾಳ್ಮೆಯ ಶಕ್ತಿ ಯಾರಿಗಿದೆ? ರೈತರು ತಾಳ್ಮೆಯಿಂದಲೇ ಕಾಯುತ್ತಿದ್ದರು. ರೈತ ಸಮುದಾಯವುದ್ದೇಶಿಸಿ ಮಾತನಾಡಲು ರಾಜ್ಯ ಕೃಷಿ-ಕೂಲಿಕಾರ ಸಂಘದ ಅಧ್ಯಕ್ಷರಾದ ಜಿ.ಎನ್ ನಾಗರಾಜ ಬಂದಿದ್ದರು. ಅಂತೆಯೇ ಅನೇಕ ಮುಖಂಡರೂ ಅಲ್ಲಿದ್ದರು.


ರಕ್ತಸಿಕ್ತವಾಗಿರುವ ರೈತ ಆಸ್ಪತ್ರೆಯಲ್ಲಿ


ಸರಕಾರಿ ಏಜೆಂಟರ ಕರಾಮತ್ತು

ಅಷ್ಟೊತ್ತಿಗಾಗಲೇ ಸರಕಾರ ಮತ್ತು ಸರಕಾರಿ ಏಜೆಂಟರು ಮುತ್ತಿಗೆ ಕಾರ್ಯಕ್ರಮವನ್ನು ದಿಕ್ಕೆಡಿಸಲು ಪೂರ್ವಯೋಜಿತ ಕುತಂತ್ರ ಮಾಡಿದ್ದರು. ಆ ದಿನ ನಗರ ಕೇಂದ್ರದಲ್ಲಿ ಗೃಹಮಂತ್ರಿ, ವಸತಿ ಮಂತ್ರಿ, ಬಸ್ಸುಗಳ ಮಂತ್ರಿ, ಕೈಗಾರಿಕೆಗಳ ಮಂತ್ರಿ, ಲೋಕೋಪಯೋಗಿ ಮಂತ್ರಿಗಳೆಲ್ಲ ಇದ್ದರು. ಹೀಗಾಗಿಯೇ ಮಾಸ್ಟರ್ ಪ್ಲಾನ್ ತುಂಬ ವ್ಯವಸ್ಥಿತವಾಗಿತ್ತು.

ರೈತರ ಧರಣಿ ಸ್ಥಳಕ್ಕೆ ಅಶೋಕನಗರ ಪೊಲೀಸ್ ಠಾಣೆಯ ಪಿಎಸ್ಐ ಜೇಮ್ಸ್ ಅಲ್ಲಿಗೆ ಬಂದನು. ಇಡೀ ನಗರವೇ ತನ್ನನ್ನು ಕಂಡೊಡನೆ ನಡುಗಿ ನೀರಾಗಬೇಕು ಎಂಬಂತಹ ಗತ್ತು ಆತನದು. ಪ್ರಜಾಸತ್ತಾತ್ಮಕ ಹೋರಾಟ-ಚಳುವಳಿಗಳನ್ನು ಬಗ್ಗು ಬಡಿಯಲೆಂದು ಪೊಲೀಸ್ ಇಲಾಖೆಗೆ ಸೇರಿದಂತೆ ಆತನ ಪೊಗರು. ಜೇಮ್ಸ್ ಬಂದ. ಧರಣಿ ನಿರತ ರೈತರನ್ನುದ್ದೇಶಿಸಿ ಪೊಲೀಸ್ ಭಾಷೆ ಬಳಸತೊಡಗಿದ. "ಹೋರಾಟ ಮಾಡ್ತಿರೇನ್ರಲೇ ಮಕ್ಕಳ್ರಾ...? ಮನಿಯೊಳಗ ತಿನ್ನಲಿಕ್ಕ ಅನ್ನ ಇಲ್ಲ ಸೂ..ಮಕ್ಕಳ್ರಾ , ಇಲ್ಲಿ ಝುಂಡಾ ಹಿಡ್ಕೊಂಡು ಬರ್ತೀರಿ.. ಬೂಟ್ಗಾಲ್ನಿಂದ ಒದ್ದು ಒಳಗ ಹಾಕಿದ್ರ ಗೊತ್ತಾಗ್ತದ.." ಹೀಗೆ ವಾಚಾಮಗೋಚರವಾಗಿ ಜೇಮ್ಸ್ ರೈತರ ಸಹನೆಗೆ ಪರೀಕ್ಷೆ ಒಡ್ಡತೊಡಗಿದನು. ರೈತರು-ರೈತಮುಖಂಡರು ಬಾಯಿ ಮಾತಿನಿಂದಲೆ ಖಂಡಿಸಿದರು. ಕ್ಷಮೆ ಕೇಳಲು ಹೇಳಿದರು. ಇಷ್ಟೂ ಚೂರೂ ಕೇಳಲಿಲ್ಲ. ಮತ್ತೆ ಒಂದರ್ಧ ಗಂಟೆ ಕಳೆಯಿತು. ಆಗ ನೋಡ-ನೋಡುತ್ತಿದ್ದಂತೆಯೇ ಅಪರಿಚಿತ ದುಷ್ಕರ್ಮಿಗಳು ಕಲ್ಲು ತೂರಲಾರಂಭಿಸಿದರು. ಜೇಮ್ಸ್ ಟೆಂಟಿನ ಹಿಂದೆ ತಣ್ಣಗೆ ಅಡಗಿಕೊಂಡಿದ್ದ. ಕಲ್ಲು ತೂರಾಟಕ್ಕೂ ಜೇಮ್ಸನಿಗೂ ಸಂಬಂಧವಿಲ್ಲದಿದ್ದರೆ ಜೇಮ್ಸನ ವರ್ತನೆ ಹೀಗಿರುತ್ತಿತ್ತೇ? ಕುಳಿತಿದ್ದ ರೈತರು ಭಯದಿಂದ ಓಡಲಾರಂಭಿಸಿದರು. ಅನೇಕ ರೈತರಿಗೆ ಗಾಯಗಳಾಗತೊಡಗಿದವು. ಪೊಲೀಸರು ಲಾಠಿ ಬೀಸಲಾರಂಭಿಸಿದರು. ಓಡಲು ಬಾರದ ಮುದುಕರು ಅಲ್ಲೇ ಕುಳಿತರು. ಅಷ್ಟರಲ್ಲಿ ರೈತ ಮುಖಂಡರಾದ ಮಾರುತಿ ಮಾನ್ಪಡೆ, ಸುಧಾಮ ದನ್ನಿ ಮತ್ತು ಯುವ ಮುಖಂಡ ಜಯಲಾಲ್ ತೋಟದ ಮನಿ ಸಹಿತ 50 ಕ್ಕೂ ಹೆಚ್ಚು ಜನರನ್ನು ಬಂಧಿಸಿದರು. ಅತ್ತ ವ್ಯಾನ್ ಚಲಿಸಿತು. ಇತ್ತ..

ರೈತರ ರಕ್ತ ಹರಿಯಿತು ಬೀದಿಯಲ್ಲಿ

ಇತ್ತ ರೈತರ ಮೇಲೆ ಪೊಲೀಸ್ ಧಾಳಿ ನಡೆಯತೊಡಗಿತು. ತಲೆ ಒಡೆದು ರಕ್ತದ ಮಡುವಿನಲ್ಲಿ ಬಿದ್ದ ರೈತನನ್ನು ಮತ್ತೆ ಮತ್ತೆ ಹೊಡೆದರು. ಓಡಲಾಗದ ಮುದುಕರನ್ನು ಬಗ್ಗಿಸಿ ಹೊಡದರು. ಆನೆಕಾಲಿನ ಯಜಮಾನನು ಕೈಮುಗಿದ. "ಹೊಡಿಬ್ಯಾಡ್ರಪ್ಪೋ.." ಎಂದು ಗೋಗರೆದರೂ ಇನ್ನೊಂದು ಕಾಲಿನ ಮೇಲೆ ಅಮಾನವೀಯವಾಗಿ ಥಳಿಸಿದರು. ಕಲ್ಬುರ್ಗಿ ನಗರದ ಮುಖ್ಯ ರಸ್ತೆಯು ರೈತರ ರಕ್ತದಿಂದ ತೋಯ್ದು ಹೋಯ್ತು. ಇಡೀ ಬೀದಿ ತುಂಬ ಪೋಲಿಸರು ರಣ ತಾಂಡವವಾಡುತ್ತಿದ್ದರು. ರಸ್ತೆಯು ರಣ ರಂಗವಾಗಿ ಪರಿವರ್ತನೆಯಾಯಿತು. ಪೊಲೀಸರು ಆರು ಬಾರಿ ಗಾಳಿಯಲ್ಲಿ ಗುಂಡು ಢಮಾರೆನಿಸಿದರು. "ಪೊಲೀಸ್ ರಾಜ್ಯವೆಂದರೆ ಏನು, ಪೊಲೀಸರ ಅಟ್ಟಹಾಸವೆಂದರೆ ಹೇಗಿರುತ್ತದೆ... ಎನ್ನುವ ಪ್ರಶ್ನೆಗೆ ಉತ್ತರದಂತಿತ್ತು ಈ ಘಟನೆ. ಶಬ್ದಗಳಲ್ಲಿ ಹೇಳಲಾಗದ ಬರ್ಬರ ಕಾಂಡ ನಡೆದು ಹೋಯ್ತು.


ಒಡೆದ ತಲೆಬುರುಡೆ
ಬೆನ್ನಮೇಲೆ ಲಾಠಿ [illegible]ತ್ತದ ಬಾಸುಂಡೆ

ಅನ್ನ ಕೊಟ್ಟ ರೈತನ ಎದೆಗೆ ಒದೆಯುತ್ತಿದ್ದರು ಪೊಲೀಸರು. ಅನ್ನದಾತ ಬೀದಿಯ ಮೇಲೆ ನರಳುತ್ತಿದ್ದ.

ಕುವೆಂಪು ಹೇಳಿದ್ದರು "ನೇಗಿಲ ಮೇಲೆ ನಿಂತಿದೆ ಜಗವು" ಆದರೆ ಅಂದು ಕಾಂಗ್ರೆ ಸರಕಾರ ಸಾಬೀತ ಮಾಡಿತು "ಪೊಲೀಸ್ ಗುಂಡಿನ ಮೇಲೆ ನಡೆಸುವ ಜಗವನು.." ಎಮರ್ಜೆನ್ಸಿಯ ನೆನಪು....

ಒಂದರ್ಧ ತಾಸಿನಲ್ಲಿ ಇಡೀ ರಸ್ತೆಯನ್ನು ಬಿಕೊ ಎನ್ನಿಸಿದರು ಪೊಲೀಸರು. ಆ ಗಳಿಗೆಯವರೆಗು ನಗರದಲ್ಲಿದ್ದ ಗೃಹ ಸಚಿವರು ಮತ್ತು ಅವರ ಜೊತೆಕಾರರು ಆನಂತರ ತಮ್ಮ ಕ್ಷೇತ್ರ ದರ್ಶನಾ ಪಲಾಯನ ಗೈದರು.

ಅಷ್ಟರಲ್ಲಿ ಜಿಲ್ಲಾ ಅಭಿವೃದ್ಧಿ ಹೋರಾಟ ಸಮಿತಿಯ ಅಡಿಯಲ್ಲಿ ನೂರಾರು ರೈತರು ಮತ್ತು ಮುಖಂಡರು ಮೆರವಣಿಗೆಯ ಮೂಲಕ ಜಿಲ್ಲಾಧಿಕಾರಿಗಳ ಕಚೇರಿಗೆ ಹೋಗಿದ್ದರು. ಇವೆ ಬೇಡಿಕೆಗಳಿಗಾಗಿ ಅವರೂ ಅಂದು ಹೋರಾಟ

ಮುಂದಿನ ಪುಟಕ್ಕೆ


[illegible]ರ್ಕಾರದ ಗುಂಡಾಗಿರಿ ಪ್ರತಿಭಟಿಸಿ ಗುಲ್ಬ[illegible]ದಲ್ಲಿ ಮೆರವಣಿಗೆ



ಹೊಸಕೋಟೆಯಲ್ಲಿ ರಸ್ತೆ ತಡೆ

ಸಿಪಿಐ(ಎಂ) ಖಂಡನೆ

ಈ ಬರ್ಬರ ಕೃತ್ಯವನ್ನು ಸಿಪಿಐ(ಎಂ) ರಾಜ್ಯ ಸಮಿತಿ ಉಗ್ರವಾಗಿ ಖಂಡಿಸಿ ಇಡೀ ಘಟನೆ ಪೂರ್ವಯೋಜಿತವಾಗಿದ್ದು, ಪ್ರಕರಣವನ್ನು ನ್ಯಾಯಾಂಗ ತನಿಖೆಗೆ ಒಪ್ಪಿಸಬೇಕೆಂದು ಇದಕ್ಕೆ ಕಾರಣರಾದ ಪೊಲೀಸ್ ಅಧಿಕಾರಿಗಳನ್ನು ಕೂಡಲೇ ಅಮಾನತ್ತಿನಲ್ಲಿಟ್ಟು ಕ್ರಮ ಜರುಗಿಸಬೇಕೆಂದು ಆಗ್ರಹಿಸಿದೆ. ರೈತರ ಚಳುವಳಿಯನ್ನು ದೌರ್ಜನ್ಯದಿಂದ ದಮನಿಸುವ ಕ್ರಮ ಕೈ ಬಿಟ್ಟು ವಿದ್ಯುತ್ ಪೂರ್ಣ ಸರಬರಾಜು ಧರಗಳ ಇಳಿತ ಮಾಡಬೇಕೆಂದು ಒತ್ತಾಯಿಸಿದೆ.

ಪ್ರತಿಭಟನೆಗಳು

ಈ ದೌರ್ಜನ್ಯದ ಘಟನೆ ತಿಳಿಯುತ್ತಿದ್ದಂತೆ ಮರುದಿನದಿಂದಲೇ ರಾಜ್ಯದಲ್ಲಿ ಪ್ರತಿಭಟನೆಗಳು ನಡೆದಿರುತ್ತವೆ. ಗುಲ್ಬರ್ಗದಲ್ಲಿ ಅಲ್ಲದೆ, ಬಳ್ಳಾರಿ ಜಿಲ್ಲೆಯ ಹಗರಿ ಬೊಮ್ಮನಹಳ್ಳಿ, ಹೊಸಪೇಟೆ, ಬಳ್ಳಾರಿ, ಬೆಂಗಳೂರು ಜಿಲ್ಲೆಯ ಹೊಸಕೋಟೆ, ಬೆಂಗಳೂರು ನಗರದಲ್ಲಿ ಪೊಲೀಸ್ ಮಹಾ ನಿರ್ದೇಶಕರ ಕಛೇರಿ ಎದುರು, ಇತರೆಡೆ ನೂರಾರು ಜನರು ಪ್ರತಿಭಟಿಸಿದ್ದಾರೆ.

ಕರೆ ಕೊಟ್ಟಿದ್ದರು. ಎರಡೂ ಹೋರಾಟಗಳ ಮೆರವಣಿಗೆಯು ಕೊನೆಗೆ ಕೆಪಿಟಿಸಿಎಲ್ ಮುಂದೆ ಮುತ್ತಿಗೆ ನಡೆಸಲು ತೀರ್ಮಾನಿಸಲಾಗಿತ್ತು. ಆನಂತರ ಬಂದ ಅವರು ಪುನ: ಪ್ರತಿಭಟನೆಯುನ್ನು ಮುಂದುವರಿಸಿದರು. ಕೆಪಿಟಿಸಿಎಲ್ ಗೆ ಜಡಿದಬೀಗ ಹಾಕಲು ಮುಂದಾದರು. ಅವರಲ್ಲಿ ಮಾಜಿ ಸಚಿವ ಎಸ್.ಕೆ.ಕಾಂತಾ, ಬಿ.ಆರ್.ಪಾಟೀಲ, ಪ್ರಾಂತರೈತಸಂಘದ ನಾಯಕ ಮೇಘರಾಜ ಕಠಾರೆ, ರಾಜ್ಯರೈತ ಸಂಘದ ಮುಖಂಡ ಬಸವರಾಜ ತಂಬಾಕೆ ಮುಂತಾದವರಿದ್ದರು. ಅವರನ್ನೆಲ್ಲ ಬಂಧಿಸಿ ಸಾಯಂಕಾಲ ಬಿಡುಗಡೆ ಮಾಡಲಾಯಿತು.

ಪೊಲೀಸರಿಂದ ರೈತ ಮುಖಂಡರ ಮೇಲೆ ಧಾಳಿ

ನಗರ ಡಿಸಿ.ಕಂಪೌಂಡಿನಲ್ಲಿ ನರಳುತ್ತಾ ರಕ್ತದ ಮಡುವಿನಲ್ಲಿ ಬಿದ್ದ ಮೂರು ಜನ ಗಾಯಾಳುಗಳನ್ನುಪತ್ರಿಕಾ ವರದಿಗಾರರು ಮುಂದಾಗಿ ಧ್ಯರ್ಯತುಂಬಿ ಸರಕಾರಿ ದಾವಖಾನೆಯಲ್ಲಿ ಅಡ್ಮಿಟ್ ಮಾಡಿದರು. 40 ರಿಂದ 50 ಜನ ರೈತರ ತಲೆ ಒಡೆದು ಕೈ-ಕಾಲು-ಬೆನ್ನಿಗೆ ಗಾಯಗಳಾಗಿದ್ದವು. ಮಾನವೀಯ ಜನರು ಆ ಗಾಯಾಳುಗಳನ್ನು ಆಸ್ಪತ್ರೆಗೆ ದಾಖಲಿಸಲು ಶ್ರಮಿಸಿದರು. ಆದರೆ, ಆಸ್ಪತ್ರೆಗೂ ಹೋಯ್ತು ನೋಡಿ ಪೊಲೀಸ್ ವೈರ್ ಲೆಸ್. ಗಾಯಾಳುಗಳನ್ನು ಒಳರೋಗಿಗಳಾಗಿ ದಾಖಲಿಸಿಕೊಳ್ಳಬಾರದು ಹೊರ ರೋಗಿಗಳೆಂದು ಸಣ್ಣಪುಟ್ಟಬ್ಯಾಂಡೇಜ್ ಮಾಡಿ ಕಳಿಸಲು ಪರಮಾನ್ ಹೊರಡಿಸಿದರು. ಹಾಗೆಯೇ ಆಯ್ತು. ಆದರೂ ಪಟ್ಟು ಬಿಡದ ಕಾರ್ಯಕರ್ತರು ಹಾಗೂ-ಹಿಗೂ 25-30 ಗಂಭೀರ ಗಾಯಳುಗಳನ್ನು ಒಳರೋಗಿಗಳನ್ನಾಗಿ ದಾಖಲಿಸಿದರು.

ಸಂಜೆಯ ಸೂರ್ಯ ಕತ್ತಲೆಗೆ ಸರಿದಿದ್ದ ಕತ್ತಲೆಯು ರಾಜ ಎಲ್ಲೆಡೆ ಕ್ರಮೇಣಾ ಆವರಿಸಿಕೊಳ್ಳತೊಡಗಿದನು. ಆದರೆ, ಮಧ್ಯಾಹ್ನವೇ ಬಂಧನಕ್ಕೊಳಗಾದ ಇನ್ನೂ ಐವತ್ತು ಜನ ಮತ್ತು ಮಾನ್ಪಡೆ, ಜಯಲಾಲ್ ಇವರಾರೂ ಕಾಣಿಸಲಿಲ್ಲ. ಸಹಜವೇ ಎಲ್ಲರಿಗೂ ಆತಂಕವಾಗತೊಡಗಿತು. ಅವರೆಲ್ಲರನ್ನೂ ಬಂಧಿಸಿ ಹೆಡ್ ಕ್ವಾರ್ಟರ್ ನಲ್ಲಿ ಇಟ್ಟಿರುವ ಸಂಗತಿಯು ನಂತರ ತಿಳಿಯಿತು. ಬಿ.ಆರ್.ಪಾಟೀಲ, ಎಸ್.ಕೆ.ಕಾಂತಾ, ಮೇಘರಾಜ, ವಿರುಪಾಕ್ಷಿ, ನೀಲಾ ಮತ್ತಿತರ ಸುಮಾರು 20 ಜನರ ಗುಂಪು ಹೆಡ್ ಕ್ವಾರ್ಟ್‌ಗೆ ಹೋದೆವು.

ಅಲ್ಲಿ ಇರುವುದೇನು ಪರಿಸ್ಥಿತಿ? ಬಿಗಿಯಾದ ಪೋಲೀಸ್ ಪಹರೆ ಯಾರನ್ನೂ ನೋಡಲು ಬಿಡಲಾರು. ಹಾಗೂ ಹೀಗೂ ಇಬ್ಬರು ಒಳಹೋದರು. ಆದರಲ್ಲಿ ನಡೆದ ಘಟನೆಯು ನಮ್ಮೆಲ್ಲರನ್ನು ದಂಗು ಬಡಿಸಿತು.



ಖರ್ಗೆ ನಿಷ್ಠ ಕಿರಾತಕ ಜೇಮ್ಸ್

ಹೋರಾಟದ ಸ್ಥಳದಿಂದ ಮಾನ್ಪಡೆ ಸಹಿತ 50 ಜನರನ್ನು ಬಂಧಿಸಿ ಹೆಡ್ ಕ್ವಾರ್ಟ್‌ಗೆ ಒಯ್ದ ಮೇಲೆ, ಸ್ಟೇಷನ್ ಬಜಾರ್‌ನ ಪಿಎಸ್ಐ ಅಶೋಕನು ಮಾನ್ಪಡೆಯವರೊಂದಿಗೆ ಮಾತನಾಡುತ್ತಲೇ ವಿನಾ ಕಾರಣ ಧಾಳಿ ಮಾಡಿದನು. ಕೈಯಲ್ಲಿದ್ದ ಲಾಠಿಯಿಂದ ಹಿಗ್ಗಾ ಮುಗ್ಗಾ ಬೀಸತೋಡಗಿದನು, ಉಳಿದ ರೈತಾಪಿ ಜನ ಬಿಡಿಸಲು ಬಂದರೂ ಅವರನ್ನು ಒರಟಾಗಿ ತಳ್ಳುತ್ತಾ ಕೆಲವರಿಗೆ ಹೊಡೆಯುತ್ತಾ, ಹಲ್ಲೆಮಾಡಿದನು. ಮಾನ್ಪಡೆಯವರ ಮುಂಗೈ ಮಣಿಕಟ್ಟಿಗೆ ತೀವ್ರಗಾಯವಾಯಿತು. ಮತ್ತಷ್ಟು ರೋಷತಪ:ನಾದ ಅಶೋಕನು ತನ್ನಲ್ಲಿರುವ ಪಿಸ್ತೂಲನ್ನು ಮಾನ್ಪಡೆಯರ ಹಣೆಗೆ ಹಚ್ಚಿ "ರೈತರ ಸಂಘ ಕಟ್ತಿಯೊನೊ, ಸರ್ಕಾರದ ವಿರುದ್ಧ ಚಳುವಳಿ ನಡೆಸಿದ್ರ, ನಾವು ಇದೇ ಗತಿಮಾಡಬೇಕಾಗ್ತದ. ಸೂ..ಮಗನೆ ನಿನಗೆ ಇಲ್ಲೇ ಸುಟ್ಟು ಹಾಕಿದ್ರೂನು ಯಾವನು ಕೇಳಲ್ಲ!

ಸುತ್ತ ಮುತ್ತಲಿನ ರೈತಾಪಿ ಚಳುವಳಿಗಾರರು ಎಷ್ಟೇಲ್ಲ ವಿನಂತಿಸಿದರು ಅಶೋಕ ಎಂಬ ಕಿರಾತಕ ವ್ಯಕ್ತಿ ಕಾನೂನನ್ನು ಕೈಗೆ ತೆಗೆದುಕೊಂಡು ಲಾಠಿ ಬೀಸತೊಡಗಿದನು. ರಾತ್ರೋ-ರಾತ್ರಿ ನ್ಯಾಯಧೀಶರ ಮನೆಗೆ ಒಯ್ದು ಅವರ ಮುಂದೆ ಹಾಜರು ಪಡಿಸಿ ಮಾನ್ಪಡೆ, ಜಯಲಾಲರನ್ನು ಆಸ್ಪತ್ರೆಗೆ, ಉಳಿದ ಚಳುವಳಿಗಾರರನ್ನು ಸೆಂಟ್ರಲ್ ಜೈಲಿಗೆ ಕಳುಹಿಸಿದರು. ನ್ಯಾಯಕ್ಕಾಗಿ ಹೋರಾಡುತ್ತಿರುವ ಚಳುವಳಿಗಾರರ ಮೇಲೆ ಪೊಲೀಸರು ಹಾಕಿದ ಕೇಸುಗಳು ಹೀಗಿವೆ, 147,143,148,353,323,324,336, 333, 504, 427, ಆರ್/ಡಬ್ಲ್ಯೂ 149, ಐಪಿಸಿ.

ತುರ್ತುಪರಿಸ್ಥಿತಿಯಲ್ಲಿ ಬಂಧನಕ್ಕೊಳಗಾದವರು ಹೇಳಿದರು, ಈ ಕಾಂಗ್ರೆ ರಾಜ್ಯ ತುರ್ತು ಪರಿಸ್ಥಿತಿಯು ನಾಚುವಂತೆ ವರ್ತಿಸುತ್ತಿದೆ. ಇದು ಪೊಲೀಸ್ ರಾಜ್ಯ. ಸರ್ಕಾರ ಪ್ರಜಾಪ್ರಭುತ್ವವನ್ನು ಹೊಸಕಿ ಹಾಕಲು ನಿಂತಿದೆ.

ಹೌದು ಇಡೀ ರಾಜ್ಯದ ಜನತೆಯು ಬೆಕ್ಕಸ ಬೆರಗಾದರು . ಕಲ್ಬುರ್ಗಿ ಜನ ಹಿಂದೆಂದೂ ಇಂತಹ ಪೊಲೀಸ್ ರಾಜ್ಯ ಇತ್ತೀಚಿಗೆ ಕಂಡಿರಲಿಲ್ಲ. ನಗರದ ತುಂಬ ಡಿಸೆಂಬರ್ 3 ರಂದು ಲಾಠಿ ಬೂಟುಗಳ ಮೆರವಣಿಗೆ -ಉರವಣಿಗೆ.

ಖರ್ಗೆಗೆ ಮಾತಿಗೆ ಛೀ ಎಂದ ಜನ

ಮರು ದಿನ ಖರ್ಗೆ ಪೊಲೀಸರ ಕ್ರಮವನ್ನು ಸಮರ್ಥಿಸಿಕೊಂಡರು. ಆದರೆ ಜಿಲ್ಲೆಯ ಜನತೆ ಅವರಿಗೆ ಛೀ ಎಂದಿತು. ರೈತರ ಮೇಲೆ ರಾಜ್ಯಾದ್ಯಂತ ದೌರ್ಜನ್ಯ ಮಾಡುತ್ತಿರುವ ಕಾಂಗ್ರೆ ಸಂಸ್ಕೃತಿಗೆ ಜನತೆ ಹಿಡಿ ಶಾಪಹಾಕುತ್ತಿದ್ದಾರೆ.

ನಾನು ಮರು ದಿನ ಜೈಲಿಗೆ ಹೋಗಿ ಚಳುವಳಿಕಾರರನ್ನು ಕಂಡೆ, ಅವರ ಮುಖದ ಮೇಲೆ ಉತ್ಸಾಹದ ಕಳೆ ಇತ್ತು. ಅವರು " ಇಂತಹ ನೂರಾರು ಹಲ್ಲೆಗಳು ಬರಲಿ ನಾವು ಮತ್ತೆ ಹೋರಾಟದ ಸಾಗರದಲ್ಲಿ ನದಿಗಳಾಗಿ ಸೇರುತ್ತೇವೆ" ಎಂಬಂರ್ಥದ ಮಾತು ಕೇಳಿ, ನಾನು ಮನದಲ್ಲಿಯೇ ಗಟ್ಟಿಯಾಗಿ ಇಂಕ್ವಿಲಾಬ್ ಜಿಂದಾಬಾದ್ ಹೇಳಿದೆ.

ಸಿಪಿಐ(ಎಂ) ಖಂಡನೆ

ಈ ಬರ್ಬರ ಕೃತ್ಯವನ್ನು ಸಿಪಿಐ(ಎಂ) ರಾಜ್ಯ ಸಮಿತಿ ಉಗ್ರವಾಗಿ ಖಂಡಿಸಿ ಇಡೀ ಘಟನೆ ಪೂರ್ವಯೋಜಿತವಾಗಿದ್ದು, ಪ್ರಕರಣವನ್ನು ನ್ಯಾಯಾಂಗ ತನಿಖೆಗೆ ಒಪ್ಪಿಸಬೇಕೆಂದು ಇದಕ್ಕೆ ಕಾರಣರಾದ ಪೊಲೀಸ್ ಅಧಿಕಾರಿಗಳನ್ನು ಕೂಡಲೇ ಅಮಾನತ್ತಿನಲ್ಲಿಟ್ಟು ಕ್ರಮ ಜರುಗಿಸಬೇಕೆಂದು ಆಗ್ರಹಿಸಿದೆ. ರೈತರ ಚಳುವಳಿಯನ್ನು ದೌರ್ಜನ್ಯದಿಂದ ದಮನಿಸುವ ಕ್ರಮ ಕೈ ಬಿಟ್ಟು ವಿದ್ಯುತ್ ಪೂರ್ಣ ಸರಬರಾಜು ಧರಗಳ ಇಳಿತ ಮಾಡಬೇಕೆಂದು ಒತ್ತಾಯಿಸಿದೆ.

ಡಿಸೆಂಬರ್ 10 ರಂದು ರಾಜ್ಯವ್ಯಾಪಿ ಪ್ರತಿಭಟನೆಗೆ ಕರೆ

ಈ ಘಟನೆಯುನ್ನು ಖಂಡಿಸಿ, ಹೋರಾಟಗಾರರಿಗೆ ಬೆಂಬಲಿಸಿ ರಾಜ್ಯವ್ಯಾಪಿಯಾಗಿ ಪ್ರತಿಭಟಿಸಲು ಕರ್ನಾಟಕ ಪ್ರಾಂತ ರೈತ ಸಂಘದ ರಾಜ್ಯ ಸಮಿತಿಯು ಕರೆ ನೀಡಿದೆ. ಅಂದು ಪ್ರತಿಭಟನಾ ಮೆರವಣಿಗೆ, ರಸ್ತೆ ತಡೆ ಮುಂತಾಗಿ ನಡೆಸಲಾಗುವುದು.



ದೌರ್ಜನ್ಯ ಪ್ರತಿಭಟಿಸಿದ ಧರಣಿಯಲ್ಲಿ ಬಿ.ಆರ್. ಪಾಟೀಲ್, ಎಸ್.ಕೆ.ಕಾಂತ, ...

ಜನಚಳುವಳಿ ಗೆಲ್ಲುತ್ತೆ

ಡಿಸೆಂಬರ್ 4 ರಂದು ಪಕ್ಷಬೇದ ಮರೆತು ಕಾಂಗ್ರೆ ಹೊರತು ಪಡಿಸಿ ಎಲ್ಲರು, ಕಾಂಗ್ರೆನ ಗೂಂಡಾ ರಾಜ್ಯವನ್ನು-ಪೊಲೀಸ್ ದೌರ್ಜನ್ಯವನ್ನು ರಸ್ತೆಗೆ ಬಂದು ಖಂಡಿಸಿದರು. ಜಿಲ್ಲೆಯ ಪ್ರಜಾಸತ್ತಾತ್ಮಕ ಚಳುವಳಿಯನ್ನು ಧಮನ ಮಾಡಲು ಹೊರಟಿರುವ ಗೃಹ ಮಂತ್ರಿ ಖರ್ಗೆಯವರಿಗೆ ಧಿಕ್ಕಾರ ಹೇಳಿದರು. ಲಾಠಿ ಬೂಟುಗಳಿಂದ ಜನ ಚಳುವಳಿ ನಿಲ್ಲದು ಎಂದು ಸಾರಿ ಸಾರಿ ಹೇಳಿದರು. ಅಂದು ಮಧ್ಯಾಹ್ನ ನೂರೂರು ಮಹಿಳೆಯರು, ನೂರಾರು ಪುರುಷರು ಹಣೆಗೆ ಕಪ್ಪು ಪಟ್ಟಿಕಟ್ಟಿಕೊಂಡು ಕೈಯಲ್ಲಿ ಕಪ್ಪು ಬಾವುಟ ಹಿಡಿದು ಕಲ್ಬುರ್ಗಿ ನಗರದ್ದೂದ್ದಕ್ಕೂ ಸಾಗಿ ಸಾಗಿ ಬಂದರು. ಈ ರಾಜ್ಯದ ಹೈಟೆಕ್ ಮಂತ್ರಿ ಕೃಷ್ಣರವರಿಗೆ ಜಿಲ್ಲಾಧಿಕಾರಿಗಳ ಮೂಲಕ ಆಗ್ರಹ ಪತ್ರ ಕಳುಹಿಸಿದರು. ಪೊಲೀಸ್ ರಾಜ್ಯ ಮಾಡಹೋರಟ ಗೃಹಮಂತ್ರಿ ಕ್ರಮವನ್ನು , ಲಾಠಿ ಚಾರ್ಜ ಗೋಲಿಬಾರ್ ಖಂಡಿಸಿದರು. ನ್ಯಾಯಾಂಗ ತನಿಖೆಗೆ ಒತ್ತಾಯಿಸಿದರು. ಪಿಎಸ್ಐ ಅಶೋಕ್ ಮತ್ತು ಜೇಮ್ಸ್ ರನ್ನು ಸೇವೆಯಿಂದ ಅಮಾನತು ಗೋಳಿಸಿ ಮನೆಗೆ ಕಳುಹಿಸಲು ಒತ್ತಾಯಿಸಿದರು. ರೈತರ ವಿದ್ಯುತ್ ಸಮಸ್ಯೆ ಬಗೆಹರಿಯಬೇಕು ಇಲ್ಲದಿದ್ದರೆ ಚಳುವಳಿ ನಿಲ್ಲುವುದಿಲ್ಲ ಎಂದು ಗುಡುಗಿದರು. ರೈತರ ಮೇಲೆ ಗುಂಡುಹಾರಿಸಿದ ಗುಂಡುರಾವ್ ರವರ ಬಂಡೆಗಲ್ಲಿನಂತಹ ಸರ್ಕಾರ ಉರುಳಿಹೋಗಿದೆ. ಕೃಷ್ಣ ಸರ್ಕಾರಕ್ಕೂ ಆ ಗತಿ ಬರುತ್ತದೆ ಎಂದು ಜಿ.ಎನ್ ನಾಗರಾಜ್ ಹೇಳಿದರು. ಅಂತಯೇ ಶಂಕರಕಟ್ಟಿ ಸಂಗಾವಿ, ಬಸಣ್ಣ ಸಿಂಗೆ, ಹಣಮಂತರಾವ್. ಬಿ.ಆರ್.ಪಾಟೀಲ್, ಎಸ್.ಕೆ.ಕಾಂತ, ನೀಲಾ.ಕೆ. ಮೇಘರಾಜ ಮತ್ತಿತರರು ಮಾತನಾಡಿದರು. "ಖರ್ಗೆಯವರ ಜನ ಚಳುವಳಿ ಗೆಲ್ಲುತ್ತದೆ ನೆನಪಿಡಿ" ಎಂಬ ಎಚ್ಚರಿಕೆಯ ಗಂಟೆಯು ರಸ್ತೆಯ ಮೇಲೆ ಮಾರ್ದನಿಸುತ್ತಿತ್ತು.

ಅಯೋಧ್ಯೆ : ಆರ್‌ಎಸ್‌ಎಸ್‌ನ ದುಷ್ಟಯೋಜನೆ

ಉತ್ತರ ಪ್ರದೇಶದ ಚುನಾವಣೆಗಳು ಹತ್ತಿರುವಾಗುತ್ತಿರುವಂತೆ ಬಿಜೆಪಿ ಮತ್ತು ಆರ್‌ಎಸ್‌ಎಸ್ ಗಳ ದುಷ್ಟಕೂಟವು ಮಂದಿರ ನಿರ್ಮಾಣಕ್ಕಾಗಿ ಮಾರ್ಚ್ 12 ರ ಗಡುವು ನೀಡಿದೆ. ಇದಕ್ಕೆ ಸೌಮ್ಯವಾದಿ ಪ್ರಧಾನಿ ವಾಜಪೇಯಿಯವರು, ಅಬ್ಬರಿಸುವ ಅಡ್ವಾಣಿಯವರು ಅಂಗೀಕರಿಸಿದ್ದಾರೆ. ಈ ಕೋಮುವಾದಿ ಅಜೆಂಡಾ ಹಿಮ್ಮೆಟ್ಟಿಸದೇ ಭಾರತ ಉಳಿಯಲಾರದು.

ಒಂಭತ್ತು ವರ್ಷಗಳ ಹಿಂದೆ, ಭಾರತ ಇತಿಹಾಸದಲ್ಲೇ ನಾಚಿಕೆಗೇಡಿನ ದಿನ. ಡಿಸೆಂಬರ್ 6 ರಂದು ಆರ್‌ಎಸ್‌ಎಸ್ ನೇತೃತ್ವದ ಪುಂಡರು ಅಯೋಧ್ಯೆಯ ಬಾಬ್ರಿ ಮಸೀದಿಯನ್ನು ನೆಲಕ್ಕುರುಳಿಸಿದರು. ಅಂದಿನ ಆ ಅನಾಗರೀಕ ದುರ್ಘಟನೆ ಇಂದಿಗೂ ತನ್ನ ಕಂಪನವನ್ನು ನಮ್ಮ ಸಮಾಜ ಹಾಗೂ ರಾಜಕೀಯದಲ್ಲಿ ಬೀರುತ್ತಿದೆ.

ಅಯೋಧ್ಯ ಸೆಲ್

ಉತ್ತರ ಪ್ರದೇಶದ ವಿಧಾನಸಭಾ ಚುನಾವಣೆಗಳು, ಹತ್ತಿರವಾಗುತ್ತಿರುವಂತೆ ಬಿಜೆಪಿ, ರಾಷ್ಟ್ರೀಯ ಸ್ವಯಂಸೇವಕ ಸಂಘದ ದುಷ್ಟಕೂಟವು ಮಂದಿರ ವಿಷಯವನ್ನು ಮುಂದೆ ತರಲು ಸರ್ವ ಸನ್ನದ್ಧವಾಗಿವೆ. 2002 ರ ಮಾರ್ಚ್ 12 ರೊಳಗಾಗಿ ಮಸೀದಿ ಇದ್ದ ಸ್ಥಳದಲ್ಲಿ, ಮಂದಿರ ನಿರ್ಮಿಸಲು ಇರುವ ಎಲ್ಲಾ ಅಡೆತಡೆಗಳನ್ನು ನಿವಾರಿಸಲು, ವಿಶ್ವ ಹಿಂದು ಪರಿಷತ್ ವಾಜಪೇಯಿ ಸರ್ಕಾರಕ್ಕೆ ಗಡುವು ನೀಡಿದೆ. 'ಸೌಮ್ಯವಾದಿ'ಯಾದ ವಾಜಪೇಯಿ ಕೂಡಲೇ ಪ್ರತಿಕ್ರಿಯಿಸಿದ್ದಾರೆ. ಮುಂದಿನ ಮಾರ್ಚ್ ಒಳಗಾಗಿ ಪರಿಹಾರ ಕಂಡುಹಿಡಿಯುವುದಾಗಿ, ಈ ನಿಟ್ಟಿನಲ್ಲಿ **ಅಘೋಷಿತ ವ್ಯಕ್ತಿಗಳೊಂದಿಗೆ ಮಾತುಕತೆ** ನಡೆಸಿರುವುದಾಗಿ ವಾಜಪೇಯಿಯವರು, ಸಂಘ ಪರಿವಾರಕ್ಕೆ ಖಾತ್ರಿ ನೀಡಿದ್ದಾರೆ. **ವಿಶ್ವ ಹಿಂದು ಪರಿಷತ್ ನಾಯಕರೊಂದಿಗೆ ತಮ್ಮ ನಿವಾಸದಲ್ಲಿ ಮಾತುಕತೆ ನಡೆಸಿದ ನಂತರ ವಾಜಪೇಯಿಯವರು ಪ್ರಧಾನಮಂತ್ರಿ ಕಛೇರಿಯಲ್ಲಿನ ಅಯೋಧ್ಯೆ ಸೆಲ್‌ನ್ನು (ವಿಭಾಗ) ಪುನರ್ ಸ್ಥಾಪಿಸುವುದಾಗಿ ಘೋಷಿಸಿದ್ದಾರೆ.** ಹಿಂದೆ ಮಾಜಿ ಪ್ರಧಾನಿ ನರಸಿಂಹರಾಯರ ಕಛೇರಿಯಲ್ಲಿದ್ದ, ಈ ಅಯೋಧ್ಯೆ ಸೆಲ್ 1992 ರ ಡಿಸೆಂಬರ್ 6 ರಂದು ನಾಚಿಕೆಗೇಡಿನ ಆ ಶರಣಾಗತಿಗೆ ದಾರಿ ಮಾಡಿಕೊಟ್ಟಿದ್ದು.

ವಿವಾದಿತ ಸ್ಥಳದ ಹಸ್ತಾಂತರ

ಮಂದಿರ ನಿರ್ಮಾಣದ ಯೋಜನೆಗಳನ್ನು ಪ್ರಚುರ ಪಡಿಸಲು ಅಯೋಧ್ಯೆಯಿಂದ ದೆಹಲಿಗೆ ಯಾತ್ರೆ ನಡೆಸುವುದಾಗಿ ವಿಶ್ವಹಿಂದು ಪರಿಷತ್ ಘೋಷಿಸಿದೆ. ನಿರ್ಮಾಣ ಕಾರ್ಯ ಗಳನ್ನು ಪ್ರಾರಂಭಿಸಲು ಅನುವಾಗು ವಂತೆ ವಿವಾದಿತ ಸ್ಥಳವನ್ನು ಹೊರತುಪಡಿಸಿ, ಸರ್ಕಾರ ಸ್ವಾಧೀನಪಡಿಸಿಕೊಂಡಿರುವ ಅಯೋಧ್ಯೆಯಲ್ಲಿನ ಜಾಗವನ್ನು ವಿಹೆಚ್‌ಪಿಯ ಸುಪರ್ದಿಗೆ ಒದಗಿಸಲು ಪ್ರಧಾನ ಮಂತ್ರಿಗಳನ್ನು ಆರ್‌ಎಸ್‌ಎಸ್ ಒತ್ತಾಯಿಸಿದೆ. ಬಿಜೆಪಿಯ ಚುನಾವಣಾ ಪ್ರಣಾಳಿಕೆಯಲ್ಲಿ ಮಂದಿರ ವಿಷಯ ಬರಲಿದೆ ಎಂದು ಉತ್ತರ ಪ್ರದೇಶದ ಮುಖ್ಯಮಂತ್ರಿ ಗಳಾದ ರಾಜನಾಥ್ ಸಿಂಗ್ ಪ್ರಕಟಿಸಿದ್ದಾರೆ.

ನಿಷ್ಠೆ ಸಂವಿಧಾನಕ್ಕೋ, ಸಂಘ ಪರಿವಾರಕ್ಕೋ

ಕೋರ್ಟ್ ಆಜ್ಞೆ ಉಲ್ಲಂಘಿಸಿ ವಿಹೆಚ್‌ಪಿ ನಾಯಕರು ವಿವಾದಿತ ಸ್ಥಳವನ್ನು ಅತಿಕ್ರಮಿಸಿದ ಹಾಗೂ ಅಯೋಧ್ಯೆ ವಿಷಯ ಕುರಿತ ಚರ್ಚೆಯಲ್ಲಿ ಭಾಗವಹಿಸುತ್ತಾ ರಾಮ ಮಂದಿರ ಚಳುವಳಿ ಒಂದು 'ರಾಷ್ಟ್ರೀಯ, ಸಾಂಸ್ಕೃತಿಕ' ಚಳುವಳಿಯೆಂದು ಗೃಹಸಚಿವರಾದ ಅಡ್ವಾಣಿಯವರು ಲೋಕಸಭೆಯಲ್ಲಿ ಘೋಷಿಸಿದ್ದಾರೆ. ದೇವಸ್ಥಾನ ಚಳುವಳಿಯನ್ನು ಗಾಂಧೀಜಿಯವರ ಉಪ್ಪಿನ ಸತ್ಯಾಗ್ರಹ 'ದಂಡಿಯಾತ್ರೆ'ಗೆ ಹೋಲಿಸಿದ್ದಾರೆ. ಇಂತಹ ಬಹಿರಂಗ ನಿಲುವಿನ ನಂತರ ವಾಜಪೇಯಿ ಸರ್ಕಾರದ ನಿಷ್ಠೆ ಸಂವಿಧಾನ ಮತ್ತು ಕಾನೂನಿಗೆ ಬದಲಾಗಿ ಸಂಘ ಪರಿವಾರಕ್ಕೆ ಎಂಬುದರಲ್ಲಿ ಸಂದೇಹವೇನು ಉಳಿದಿಲ್ಲ.



ಉಗ್ರವಾದಿ - ಉಧಾರವಾದಿಗಳ ತಾಳಮೇಳ

ವಾಜಪೇಯಿ ಸರ್ಕಾರ ತನ್ನ ಮಾತು ಹಾಗೂ ಕೃತಿಯಲ್ಲಿ ಸಂವಿಧಾನ ಹಾಗೂ ಕಾನೂನಿಗೆ ಬದ್ಧವಾಗಬೇಕೆಂದು ಒತ್ತಾಯಿಸುವ ಸಲುವಾಗಿ ಸಂಸತ್ತಿನಲ್ಲಿ ಪ್ರತಿಭಟನೆ ಹಾಗೂ ಚರ್ಚೆಯು ಅಗತ್ಯವಿದೆ. ಆದರೆ ಹಿಂದಿನ ಅನುಭವ ಇಷ್ಟೆ ಸಾಲದೆಂಬುದನ್ನು ಸಹಾ ತೋರುತ್ತವೆ. **ಕಾನೂನಿನ ನಿಯಮಾವಳಿಗಳಿಗೆ ಬದ್ಧರಾಗುವುದಾಗಿ ಆರ್‌ಎಸ್‌ಎಸ್-ಬಿಜೆಪಿ ಕೂಟ ತೋರಿಕೆಗಾಗಿ ಹೇಳುವಾಗಲೇ ಸರ್ಕಾರದ ಯಂತ್ರವನ್ನು ಅದು ಜಾರಿಯಾಗದಂತೆ ಬಳಸುತ್ತವೆ.**

ಕೋಮುವಾದಿ ಅಜೆಂಡಾ ಹಿಮ್ಮೆಟ್ಟಿಸಬೇಕು

ವಿಶಾಲ ಜನವಿಭಾಗಗಳನ್ನು ಅಣಿನೆರಿಸುವ ಮೂಲಕ ಬಿಜೆಪಿ ಹಾಗೂ ಆರ್‌ಎಸ್‌ಎಸ್ ನ ದುಷ್ಟಯೋಜನೆ ಯಶಸ್ವಿಯಾಗದಂತೆ ರಾಜಕೀಯವಾಗಿ ಹೋರಾಟ ನಡೆಸಬೇಕಿದೆ. ಈ ನಿಟ್ಟಿನಲ್ಲಿ ಉತ್ತರ ಪ್ರದೇಶದ ಚುನಾವಣೆ ನಿರ್ಣಾಯಕವಾದದ್ದು. ಇದೇ ಸಮಯದಲ್ಲಿ ಬಿಜೆಪಿ ಹಾಗೂ ಅದರ ನೇತೃತ್ವದ ಕೇಂದ್ರ ಸರ್ಕಾರ ಜಾರಿಗೆ ತರಲಿರುವ ಕೋಮುವಾದಿ ಅಜೆಂಡಾವನ್ನು ಹಿಮ್ಮೆಟ್ಟಿಸಲು ಪ್ರಜಾಸತ್ತಾತ್ಮಕ ಹಾಗೂ ಜಾತ್ಯಾತೀತ ಶಕ್ತಿಗಳು ಜನತೆಯ ನಡುವೆ ಎಲ್ಲಾ ಹಂತಗಳಲ್ಲೂ ಅವಿರತ ಪ್ರಚಾರ ನಡೆಸಬೇಕಿದೆ ಹಾಗೂ ಅದರ ವಿರುದ್ಧ ಹೋರಾಟಕ್ಕಿಳಿಯಬೇಕಿದೆ. ○

ಪ್ರಗತಿಪರ ಶಕ್ತಿಗಳಿಗೆ ಬಲ ತಂದ ಜೆ.ಎನ್.ಯು. ವಿದ್ಯಾರ್ಥಿ ಸಂಘದ ಚುನಾವಣೆ

ಜವಹರಲಾಲ್ ನೆಹರೂ ವಿಶ್ವವಿದ್ಯಾಲಯದ ವಿದ್ಯಾರ್ಥಿ ಸಂಘಕ್ಕೆ ಇತ್ತೀಚೆಗೆ ನಡೆದ ಚುನಾವಣೆಯಲ್ಲಿ ಎಸ್ಸೆಫೈ-ಎಐಎಸ್‌ಎಫ್ ನ ತಂಡ ಜಯಭೇರಿ ಬಾರಿಸಿದೆ. ಕೋಮುವಾದವೇ ಬಂಡವಾಳವಾದ ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್(ಎಬಿವಿಪಿ), ಎಡ ದುಸ್ಸಾಹಸವಾದಿ ನಿಲುವಿನ ಅಖಿಲ ಭಾರತ ವಿದ್ಯಾರ್ಥಿ ಸಂಘ(ಐಸಾ) ಕಾಂಗ್ರೆಸ್ ಬೆಂಬಲಿತ NSUI ಸಂಘಟನೆಗಳು ಧೂಳಿಪಟವಾಗಿವೆ.

ಸುಮಾರು ಐದಾರು ವರ್ಷಗಳ ಹಿಂದೆ ದೇಶದ ಬಹಳಷ್ಟು ಪತ್ರಿಕೆಗಳು ಜವಹರ ಲಾಲ್ ನೆಹರೂ ವಿ.ವಿ.ಯ ವಿದ್ಯಾರ್ಥಿ ಸಂಘದ ಚುನಾವಣೆಯ ಬಗೆಗೆ ಪ್ರಧಾನ ಸಂಪಾದಕೀಯ ಬರೆದು ರಾಷ್ಟ್ರವ್ಯಾಪಿ ಸುದ್ದಿ ಮಾಡಿದವು. ಎಡಪಂಥೀಯ ವಿಚಾರಧಾರೆ ಚಳುವಳಿಯ ಕೋಟೆ ಎಂದು ಪರಿಗಣಿಸಲಾದ ಜೆಎನ್‌ಯು ನಲ್ಲಿ ರಾಷ್ಟ್ರೀಯ ಸ್ವಯಂ ಸೇವಕ ಸಂಘ (ಆರ್‌ಎಸ್‌ಎಸ್)ದ ವಿದ್ಯಾರ್ಥಿ ಸಂಘಟನೆ ಎಬಿವಿಪಿ ಮೇಲುಗೈ ಸಾಧಿಸಿದೆ ಎಂಬುದು ಆಗಿನ ಸುದ್ದಿ-ಸಂಪಾದಕೀಯಗಳ ಮುಖ್ಯ ವಿಷಯವಾಗಿತ್ತು. ಇದು ಕೆಲವು ಪತ್ರಿಕೆಗಳಿಗೆ ಬಹಳ ರೋಮಾಂಚನಕಾರಿಯೂ ಆಗಿತ್ತು.

ಅದೆಂತಹ ಪ್ರಾಮುಖ್ಯತೆ?

ಜವಹರಲಾಲ್ ನೆಹರೂ ವಿಶ್ವವಿದ್ಯಾಲಯ (ಜೆಎನ್‌ಯು) ದೇಶದ ಅತ್ಯಂತ ಪ್ರತಿಷ್ಠಿತ ವಿಶ್ವ ವಿದ್ಯಾಲಯಗಳಲ್ಲಿ ಒಂದು. ಇಲ್ಲಿ ವಿದ್ಯಾರ್ಥಿ ಸಂಘದ ಚುನಾವಣೆ ಎಂದರೆ ಹಣಬಲ, ತೋಳ್ಬಲಗಳ ಪ್ರದರ್ಶನ, ಹಲವು ಹತ್ತು ಆಮಿಷಗಳ ಜಾಲ ಅಲ್ಲ, ಜಾತಿ, ಪ್ರದೇಶಗಳ, ಆಧಾರಗಳ ಧ್ರುವೀಕರಣ ಲಾಬಿಗಳೂ ಅಲ್ಲ. ದೇಶದ ಜ್ವಲಂತ ಸಮಸ್ಯೆಗಳು, ಶೈಕ್ಷಣಿಕ, ಆರ್ಥಿಕ, ರಾಜಕೀಯ ನೀತಿ-ವಿಚಾರ ಧಾರೆಗಳ ಆಧಾರದಲ್ಲಿ ಇಲ್ಲಿ ಚರ್ಚೆ. ಅಯೋಧ್ಯಾ ವಿವಾದ-ಮಂಡಲ್ ವರದಿ, ಜಾಗತೀಕರಣ-ಕಾಶ್ಮೀರ ಸಮಸ್ಯೆ, ವರ್ಣಬೇಧ ಸಮಸ್ಯೆ, ಮಹಿಳಾ ಮೀಸಲಾತಿ ಮಸೂದೆ-ಖಾಸಗಿ ವಿ.ವಿ. ಮಸೂದೆ-ಸೌಂದರ್ಯಸ್ಪರ್ಧೆ, ಮೀಸಲಾತಿ - ಜಾಗತಿಕ ಪ್ರಶ್ನೆಗಳು ಹೀಗೆ ಯಾವ ಯಾವ ವಿಷಯಗಳ ಬಗೆಗೆ ಯಾವಯಾವಸಂಘಟನೆಗಳ ನಿಲುವು ಏನು ಎಂಬುದೇ ಇಲ್ಲಿ ಮತ ಕೇಳುವವರ ಅರ್ಹತೆ.

SFI - AISF ಒಕ್ಕೂಟ ಜಯಭೇರಿ

ದೇಶದ ಅತ್ಯಂತ ಚಿಂತಕರು, ಬುದ್ಧಿಜೀವಿಗಳು, ಇತಿಹಾಸಕಾರರು, ಸಂಶೋಧಕರು, ಪ್ರಗತಿಪರರು, ದೇಶದ ವಿಶಾಲ ವಿದ್ಯಾರ್ಥಿ ಸಮುದಾಯದ ಉತ್ತಮ ಕೆನೆಪದರ, ಶಿಕ್ಷಣ ಪರವಾದ-ಜನಪರವಾದ ಚಿಂತನೆ, ಚಳುವಳಿ ಇವೆಲ್ಲಾ ಒಂದೆಡೆ ಸೇರಿದರೆ ಆಗುವುದು ಜವಹರಲಾಲ್ ನೆಹರೂ ವಿಶ್ವ ವಿದ್ಯಾಲಯ.

ವೈಚಾರಿಕ ಸಂಘರ್ಷದ ಕಣ

ಈ ದೇಶವನ್ನು ಯಾವ ದಿಕ್ಕಿನತ್ತ ಒಯ್ಯಬೇಕು ಎಂಬ ವಿಚಾರವಾಗಿ ರಾಷ್ಟ್ರದ ಆರ್ಥಿಕ-ರಾಜಕೀಯ ರಂಗದಲ್ಲಿ ನಡೆಯುತ್ತಿರುವ ಸಂಘರ್ಷದ ವೈಚಾರಿಕ-ಸೈದ್ಧಾಂತಿಕ ರೂಪವೋ ಎಂಬಂತೆ ಇಲ್ಲಿ ವಿದ್ಯಾರ್ಥಿ ಸಂಘದ ಚುನಾವಣೆಗಳು ನಡೆಯುತ್ತವೆ. ಮಂದಿರ-ಮಸೀದಿ ವಿವಾದಗಳನ್ನು ಬಡಿದೆಬ್ಬಿಸಿ ಮತಾಂಧತೆಯ ಉನ್ಮಾದ ಸೃಷ್ಟಿಸಿ ಈ ಮೂಲಕ ರಾಜಕೀಯ ಕ್ರೋಢೀಕರಣಕ್ಕೆ ದೇಶದಲ್ಲಿ ಸಂಘ ಪರಿವಾರ ಷಡ್ಯಂತ್ರ ರೂಪಿಸಿ ಗದ್ದಲವೆಬ್ಬಿಸಿದಾಗ ಇದರ ಪರಿಣಾಮ ಮುಂದಿನ ದಿನಗಳಲ್ಲಿ ಜೆಎನ್‌ಯು ವನ್ನು ತಟ್ಟಿದ್ದು ನಿಜ, ಎಐಎಸ್‌ಎ(ಐಸಾ) ತೀವ್ರಗಾಮಿ ವಿದ್ಯಾರ್ಥಿ ಸಂಘಟನೆ ಕಾಶ್ಮೀರ ಸಮಸ್ಯೆ ವಿಚಾರದಲ್ಲಿ ತೆಗೆದುಕೊಂಡ ಅವೈಜ್ಞಾನಿಕ ನಿಲುವು (ಕಾಶ್ಮೀರಕ್ಕೆ ಸ್ವಯಂ ನಿರ್ಣಯಾಧಿಕಾರ ಹಕ್ಕು ನೀಡಬೇಕೆಂಬ ಪ್ರಶ್ನೆ) ಜೆಎನ್‌ಯು ನಲ್ಲಿ ಎಸ್‌ಎಫ್‌ಐ-ಎಐಎಸ್‌ಎಫ್ ಮೈತ್ರಿಕೂಟದ ಹಿನ್ನಡೆಗೆ ಹಾಗೂ ಎಬಿವಿಪಿಯ ಮೇಲುಗೈಗೆ ಕಾರಣವಾಗಿತ್ತು.

ಏನಿದು! ಒಂದು ವಿಶ್ವವಿದ್ಯಾಲಯದ ವಿದ್ಯಾರ್ಥಿ ಸಂಘದ ಚುನಾವಣೆ ಇಷ್ಟು ಪತ್ರಿಕೆಗಳಿಗೆ ಅಷ್ಟು ಮಹತ್ವದ ಸುದ್ದಿಯೇ ಎಂದರೆ, ಜವಹರಲಾಲ್ ನೆಹರು ವಿಶ್ವವಿದ್ಯಾಲಯದ ಪ್ರಾಮುಖ್ಯತೆ ಅಂಥದ್ದು.

ಆದರೆ ಜೆಎನ್‌ಯು ವಿದ್ಯಾರ್ಥಿ ಚಳುವಳಿಯ ನೈಜ ಸತ್ವ ಏನೆಂಬುದು ಪದೇ ಪದೇ ಮನದಟ್ಟಾಗುತ್ತದೆ. ಕಾಶ್ಮೀರ ಸೇರಿದಂತೆ ಹಲವು ಪ್ರಶ್ನೆಗಳ ಬಗೆಗೆ ಎಸ್‌ಎಫ್‌ಐ-ಎಐಎಸ್‌ಎಫ್ ತೆಗೆದುಕೊಂಡ ವೈಜ್ಞಾನಿಕವಾದ ಖಚಿತ ನಿಲುವು ಮತ್ತು ಅದರ ಪ್ರಚಾರ ಮತ್ತು ಶೈಕ್ಷಣಿಕ ಸಮಸ್ಯೆಗಳ ವಿರುದ್ಧ ಹೂಡಿದ ಹೋರಾಟ ವಿ.ವಿ.ಯಲ್ಲಿ ನಡೆಸಿದ ರಾಜಕೀಯ, ಸೈದ್ಧಾಂತಿಕ ಸಂಘರ್ಷಗಳ ಪರಿಣಾಮವಾಗಿ ಎಸ್‌ಎಫ್‌ಐ- ಎಐಎಸ್‌ಎಫ್ ಮೈತ್ರಿಕೂಟ ಮತ್ತೆ ಮೇಲುಗೈ ಸಾಧಿಸಿವೆ.

ತಾತ್ಕಾಲಿಕವಾಗಿದ್ದ ಸೋಲು

ಕಳೆದ ವರ್ಷ ವಿದ್ಯಾರ್ಥಿ ಸಂಘದ ಅಧ್ಯಕ್ಷ ಸ್ಥಾನವನ್ನು ಎಸ್‌ಎಫ್‌ಐ ಒಂದೇ ಒಂದು ಮತದಿಂದ ಸೋತಿತ್ತು.

ವ್ಯಕ್ತಿಗಳು, ವ್ಯಕ್ತಿಗಳ ಪ್ರತಿಷ್ಠೆ, ವೈಯಕ್ತಿಕ ಹಿತಾಸಕ್ತಿಗಳು ಮುಖ್ಯವೋ, ವಿಚಾರ-ಸಿದ್ಧಾಂತವೋ ಎಂಬ ಪ್ರಶ್ನೆಗೂ ಈ ಚುನಾವಣೆ ಉತ್ತರ ನೀಡಿದೆ. ಕಳೆದ ವರ್ಷದ ಜೆಎನ್‌ಯು ಚುನಾವಣೆಯಲ್ಲಿ ಕೆಲವು ವ್ಯಕ್ತಿಗಳ ಪ್ರತಿಷ್ಠೆ ಪ್ರಶ್ನೆಗಳೇ ದೊಡ್ಡದಾಗಿ ಪ್ರಗತಿಪರ ವಿದ್ಯಾರ್ಥಿ ಚಳುವಳಿ ವಿರುದ್ಧ ನಡೆದ ಅಪಪ್ರಚಾರ ತಂತ್ರಗಳು ಅಪವಿತ್ರ ಮೈತ್ರಿಗಳ ಯಶಸ್ಸು ತಾತ್ಕಾಲಿಕ ಎಂದು ಸಾಬೀತಾಗಿದೆ.

ಭಿನ್ನ ಪರಂಪರೆ

ಇಲ್ಲಿ ಚುನಾವಣೆ ನಡೆಯುವ ರೀತಿಯೂ ವಿಭಿನ್ನ. ಅದ್ದೂರಿ, ಆಡಂಬರವಿಲ್ಲ. ರಾಜಕೀಯ- ವೈಚಾರಿಕತೆಯ ಪ್ರಶ್ನೆ ಬಂದರೆ ರಾಜಿ ಇಲ್ಲ. ಚರ್ಚೆಗೆ ಹಗಲು-ರಾತ್ರಿಗಳ ಪರಿವೇ ಇಲ್ಲ. ಪ್ರಜಾಸತ್ತಾತ್ಮಕ ವಾತಾವರಣ. ಅಪಹರಣ, ಬಲಾತ್ಕಾರ ಬೆದರಿಕೆಗಳಿಲ್ಲ.

ಜೆಎನ್‌ಯುನ ಪರಂಪರೆಯೇ ಅಂತಹದ್ದು. ದೇಶದಲ್ಲಿ ಎಸ್‌ಎಫ್‌ಐ ಸಂಘಟನೆ ಬೆಳೆದಂತೆ ಜೆಎನ್‌ಯುನಲ್ಲಿ ಇಂತಹ ಪರಂಪರೆಯನ್ನು ಹುಟ್ಟಿ ಹಾಕಿದ್ದು, ಇಂತಹ ಸೈದ್ಧಾಂತಿಕ, ಪ್ರಜಾಸತ್ತಾತ್ಮಕ ಸಂಸ್ಕೃತಿಯನ್ನು ರೂಪಿಸಿ, ಬೆಳೆಸಿದ್ದು ಜೆಎನ್‌ಯು ನಲ್ಲಿ ವಿದ್ಯಾರ್ಥಿ ಸಂಘಟನೆ ಚುನಾವಣೆ ಹೇಗೆ ನಡೆಯಬೇಕೆಂಬ ಒಂದು ಸಂವಿಧಾನ ರೂಪಿಸಿದ್ದು ಸಹ ಎಸ್‌ಎಫ್‌ಐ ಸಂಘಟನೆ. ಜೆಎನ್‌ಯುನಲ್ಲಿನ ಇಂತಹ ಪ್ರಜಾಸತ್ತಾತ್ಮಕ, ವಾತಾವರಣವನ್ನು ಮುರಿದಿಕ್ಕುವ ಆಡಳಿತ ವರ್ಗ ಹಲವು ಪಿತೂರಿಗಳ ವಿರುದ್ಧ ನಿರಂತರ ಹೋರಾಡುತ್ತಾ ಎಸ್‌ಎಫ್‌ಐ ವಿದ್ಯಾರ್ಥಿ ಸಮುದಾಯದ ಹಕ್ಕುಗಳನ್ನು ಕಾಪಾಡಲು ಪಣ ತೊಟ್ಟಂತೆ ಹೋರಾಡಿದೆ. ಈಗಿನ ಫಲಿತಾಂಶ ಇಂತಹ ವಾತಾವರಣ ಹಕ್ಕುಗಳಿಗಾಗಿ ಹೋರಾಡಿದ ಎಲ್ಲಾ ಸಂಗಾತಿಗಳಿಗೆ ಸಂದ ಗೌರವ.

ಎಸ್ಸೆಫ್ಫೆನ ಅಲ್ಬಿನಾ ಶಕೀಲ್ ಅವರು

ಪುಟ 10ಕ್ಕೆ



ಧ್ವಜಾರೋಹಣದಲ್ಲಿ ಅಹಲ್ಯಾ, ಬೃಂದಾ, ಶಾಮಿಲಿ

ದಮನಿತರ ಧ್ವನಿ

ಅಖಿಲ ಭಾರತ ಮಹಿಳಾ ಸ...

ಅಖಿಲ ಭಾರತ ಜನವಾದಿ ಮಹಿಳಾ ಸ...
ಸಂದರ್ಭದಲ್ಲಿ ಸೃಜನಶೀಲತೆಯ ಪ್ರತೀಕವಾಗಿ
ಆಗು ಹೋಗುಗಳತ್ತ, ಮಹಿಳಾ ಆಂದೋ...
ಹರಿಸುತ್ತಲೇ ಮಹಿಳಾ ಸಮುದಾ...
ಬವಣೆ-ಬಂಡಾಯಗಳತ್ತ ಬೆಳಕು ಚೆಲ್ಲಿ ...
ಸಮ್ಮೇಳನದ ವಿಶಿಷ್ಟತೆ. ಇಲ್ಲಿ ಹೊಸ ಚಿಗುರು...
ಚೈತನ್ಯ ಸೃಷ್ಟಿಸಿದ್ದು ಬೆಳ...
ಆದರ ಸಾರ ನೀಡಿದ್ದಾರೆ ಸಂಘಟನೆಯ ಕ...

ಕೆ.ಎಸ...

1975 ರ ಅಂತರ್‍ರಾಷ್ಟ್ರೀಯ ಮಹಿಳಾ ವರ್ಷದಿಂದ 2001 ರ ರಾಷ್ಟ್ರೀಯ ಮಹಿಳಾ ಸಬಲೀಕರಣದ ವರ್ಷದವರೆಗೆ ಮಹಿಳಾಪರವಾದ ಹಲವಾರು ಉದ್ಘೋಷಗಳು ಹೊರಬಿದ್ದಿವೆ. 'ರಾಷ್ಟ್ರೀಯ ಮಹಿಳಾ ಅಭಿವೃದ್ಧಿ ಯೋಜನೆಯ ಕಣ್ಣೋಟ' ವು ಸೇರಿದಂತೆ ಹಲವಾರು ಯೋಜನೆಗಳು ಬಂದುಹೋಗಿವೆ. ಆದರೆ ಮಹಿಳೆಯರ ಸ್ಥಿತಿ-ಗತಿಯಲ್ಲಿ ಈ ಯಾವ ಯೋಜನೆಗಳಿಂದಲೂ ಮಹತ್ತರ ಬದಲಾವಣೆ ಸಾಧ್ಯವಾಗಲಿಲ್ಲ.

ಆದರೆ, ಈ ರೀತಿಯ ಯೋಜನೆಗಳಿಗೆ ಮಾರುಹೋಗದೇ , ಮಾರಿಕೊಳ್ಳದೇ ಕಳೆದೆರಡು ದಶಕಗಳಿಂದ ನಿಜವಾದ ಮಹಿಳಾ ಪರಕಾಳಜಿಯಿಂದ ಕೆಲಸ ಮಾಡುತ್ತ, ದೇಶದ ಉದ್ದಗಲಕ್ಕೂ ಹರಡಿ ಹಬ್ಬಿ ಮಹಿಳಾ ಚಳುವಳಿಯ ಮುಂಚೂಣಿಯಲ್ಲಿ - ಧನಾತ್ಮಕ ಗುಣಾತ್ಮಕ ಅಂಶಗಳೆರಡನ್ನೂ ತನ್ನಕೆಲಸದ ಮೂಲಕ ಸಾಧಿಸಿಕೊಂಡ ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆಯ 6ನೇ ರಾಷ್ಟ್ರೀಯ ಸಮ್ಮೇಳನ ನವೆಂಬರ್ 24 ರಿಂದ 27 ರವರೆಗೆ ಆಂಧ್ರಪ್ರದೇಶದ ವಿಶಾಖಪಟ್ಟಣಂ ನ ಉಕ್ಕು ನಗರದಲ್ಲಿ ನಡೆಯಿತು.

ದಮನಿತರ ಧ್ವನಿ ಅನಾವರಣ - ಉದ್ಘಾಟನಾ ಸಮಾರಂಭ

ಮಹಿಳೆ - ಪರಿಸ್ಥಿತಿಯ ಕೈಗೊಂಬೆ, ಬಲಿಪಶು ಎಂಬ ಜನಜನಿತ ಭಾವನೆಗಳ ಬದಲು ಎಲ್ಲ ರೀತಿಯ ದೌರ್ಜನ್ಯಗಳನ್ನು ಎದುರಿಸುವ, ಧೈರ್ಯದಿಂದ ಹೋರಾಡುವ, ಎಲ್ಲ ರೀತಿಯ ತಾರತಮ್ಯಗಳನ್ನು ಧಿಕ್ಕರಿಸಿ ನಿಲ್ಲುವ, ನಿಜವಾದ ಸಾಮಾಜಿಕ ಬದಲಾವಣೆಯ ಹರಿಕಾರರು ನಾವು ಎಂಬುದನ್ನು ಸಾರುವುದು 6ನೇ ರಾಷ್ಟ್ರೀಯ ಸಮ್ಮೇಳನದ ಮುಖ್ಯ ಘೋಷಣೆಯಾಗಿತ್ತು. ಇಡೀ ಸಮ್ಮೇಳನವನ್ನು ಮುಖ್ಯವಾಗಿ 3 ಭಾಗವಾಗಿ ವಿಂಗಡಿಸಿ ಮತ್ತದರದಲ್ಲಿ ಬೇರೆ ಬೇರೆ ಅಂಶಗಳನ್ನು ಅಳವಡಿಸಲಾಗಿತ್ತು.

24ರಂದು ಸಂಘಟನೆಯ ರಾಷ್ಟ್ರೀಯ ಕಾರ್ಯಾಧ್ಯಕ್ಷೆ ಶ್ಯಾಮಲಿಗುಪ್ತರವರಿಂದ ಸಂಘಟನೆಯ ಧ್ವಜಾರೋಹಣದ ಮೂಲಕ 6ನೇ ರಾಷ್ಟ್ರೀಯ ಸಮ್ಮೇಳನ ಅನಾವರಣಗೊಂಡಿತು. 80 ರ ವಯಸ್ಸು ದಾಟಿದ್ದರೂ 20ರ ಹರೆಯದ ಸ್ಫೂರ್ತಿ, ಕೆಚ್ಚು, ಧೈರ್ಯಗಳನ್ನು ಹೊಂದಿದ ಉತ್ಸಾಹದ ಚಿಲುಮೆ ಸಂಗಾತಿ ಅಹಲ್ಯಾ ರಂಗ್ಣೇಕರ್, ಹೊರ ಕಣ್ಣು ಕಾಣಿಸದಿರುವುದು, ಹೋರಾಟದ ಬದುಕಿನಿಂದ ವಿಮುಖವಾಗಲು ಕಾರಣವಾಗಬೇಕಿಲ್ಲ. ಸದಾ ತೆರೆದುಕೊಂಡೇ ಇರುವ ಒಳಗಣ್ಣು ಸಂಘಟನಾ-ಬದ್ಧತೆ, ಹೋರಾಟದ ಮನೋಭಾವ ಸದಾ ಕಣ್ಣಿರುವವರ ಕಣ್ಣು ತೆರೆಸುವ ಸಂಗಾತಿ ಕನಕ್ ಮುಖರ್ಜಿ, ತೆಲಂಗಾಣದ ವೀರವನಿತೆ ಮಲ್ಲು ಸ್ವರಾಜ್ಯಂ, ತಾಯಿಯ ಅಂತಿಮ ದರ್ಶನವನ್ನು ಮಾಡದಿದ್ದರೂ ಪರವಾಇಲ್ಲ, ಆದರೆ ಬ್ರಿಟಿಷ್ ಸಾಮ್ರಾಜ್ಯಕ್ಕೆ ತಪ್ಪೊಪ್ಪಿಗೆ ಬರೆದುಕೊಡಲಾರೆನೆಂಬ ದಿಟ್ಟ ಉತ್ತರ ನೀಡಿದ ಅಂದಿನ ಬಾಲೆ, ಇಂದಿನ ಚೇತನ ಸಂಗಾತಿ ಪಾಪಾ ಉಮಾನಾಥ್ ಮತ್ತಿತರರ ನೇತೃತ್ವದಲ್ಲಿ ಹುತಾತ್ಮರಿಗೆ ನೀಡಿದ ಶ್ರದ್ಧಾಂಜಲಿ ಅತ್ಯಂತ ಭಾವಪೂರ್ಣವಾಗಿತ್ತು. ಸಂಘಟನೆಯ ಹುಟ್ಟಿಗೆ ಕಾರಣರಾದ, ಪ್ರತಿಹಂತದಲ್ಲಿಯೂ ಅತ್ಯಂತ ಸಕ್ರಿಯವಾಗಿ ಸಂಘಟನೆಯನ್ನು ಕಟ್ಟಿ ಬೆಳೆಸಿದ ಸಂಗಾತಿ ವಿಮಲಾ ರಣದಿವೆಯವರ ಅಗಲಿಕೆ ಎಲ್ಲರ ಮನಸ್ಸನ್ನೂ ಮುದುಡಿಸುತ್ತಿದ್ದುದು ಮೇಲ್ನೋಟಕ್ಕೆ ಕಂಡು ಬರುತ್ತಿತ್ತು. ಅಗಲಿದ ಸಂಗಾತಿಯ ನೆನಪಿಗೆ ಗೌರವ ಸೂಚನೆಗೆ ಪ್ರತೀಕವಾಗಿ ಸಭಾಂಗಣವನ್ನು 'ವಿಮಲಾ ರಣದಿವ ನಗರ' ಎಂದು ಹೆಸರಿಸಲಾಗಿತ್ತು. ಆಂಧ್ರ ಮಹಿಳಾ ಸಂಘಂನ ಜೀವನಾಡಿ, ಸಂಘಟನೆಯ ಧೀಮಂತ ನಾಯಕಿ ಮೋಟೂರು ಉದಯಂರವರ ಅನುಪಸ್ಥಿತಿ(ಅನಾರೋಗ್ಯದಿಂದಾಗಿ) ಕೂಡ ಎಲ್ಲರನ್ನೂ ಕಾಡುತ್ತಿತ್ತು. ಮೃತ್ಯುವಿನ ದವಡೆಯಲ್ಲಿ ಹೋರಾಡುತ್ತಿರುವ, ಸಂಘಟನೆಯ ಅಖಿಲ ಭಾರತ ಅಧ್ಯಕ್ಷೆ ಸುಶೀಲಾ ಗೋಪಾಲ್‌ರ ನೆನಪು ಎಲ್ಲರ ಕಣ್ಣಂಚಲ್ಲೂ ನೀರು ಜಿನುಗಿಸುತ್ತಿತ್ತು...

20 ವರ್ಷಗಳ ಹಿಂದೆ, ಪ್ರಥಮ ಸಮ್ಮೇಳನದ ಉದ್ಘಾಟಕಿಯಾಗಿದ್ದ ವೀಣಾ ಮಜುಂದಾರ್, ಈ ಸಮ್ಮೇಳನದ ಉದ್ಘಾಟನಾ ಸಮಾರಂಭದ ಮುಖ್ಯ ಅತಿಥಿಯಾಗಿದ್ದು ಸಮ್ಮೇಳನದ ವಿಶೇಷಗಳಲ್ಲೊಂದು.

ಸ್ವಾಗತ ಸಮಿತಿಯ ಅಧ್ಯಕ್ಷೆ ಮಲ್ಲು ಸ್ವರಾಜ್ಯಂರವರ ಸ್ವಾಗತ ಭಾಷಣದೊಂದಿಗ ಸಮ್ಮೇಳನ ಕಾರ್ಯಕಲಾಪಗಳು ಪ್ರಾರಂಭವಾದವು. ಅಗಲಿದ ಹಲವು ಸಂಗಾತಿಗಳಿಗೆ, ಸಂಘಟನೆಯನ್ನು ಕಟ್ಟುವಲ್ಲಿ ಪ್ರಮುಖ ಪಾತ್ರ ವಹಿಸುತ್ತಲೇ ಅಸುನೀಗಿದ ನಿಷ್ಠಾವಂತ ಕಾರ್ಯಕರ್ತರಿಗೆ, ನೈಸರ್ಗಿಕ ವಿಕೋಪ, ಕೋಮುಗಲಭೆಗಳಿಗೆ, ಭಯೋತ್ಪಾದನೆಯ ದಳ್ಳುರಿಗೆ ತುತ್ತಾದವರಿಗೆ ಭಾವಪೂರ್ಣ ಶ್ರದ್ಧಾಂಜಲಿ ಸಲ್ಲಿಸಲಾಯಿತು.

ಇಡೀ ಜಗತ್ತು ಒಂದೆಡೆ ಜಾಗತೀಕರಣದ ಕಪಿಮುಷ್ಟಿಯಲ್ಲಿ, ಇನ್ನೊಂದೆಡ ಭಯೋತ್ಪಾದನೆಯ ದಳ್ಳುರಿಯಲ್ಲಿ ತತ್ತರಿಸುತ್ತಿರುವ ಸಂದರ್ಭದಲ್ಲಿ ನಾವೆಲ್ಲರೂ ಒಟ್ಟಾಗಿ ಶ್ರಮಿಸಬೇಕಾದ ದಾರಿಯ ಕುರಿತು ಅಹಲ್ಯರಂಗ್ಣೇಕರ್ ತಮ್ಮ ಉದ್ಘಾಟನಾ ಭಾಷಣದಲ್ಲಿ ವಿವರಿಸಿದರು. ಭಾರತದ ನೆಲದಲ್ಲಿ ಹೆಚ್ಚುತ್ತಿರುವ ಮತಾಂಧತೆ, ಕೋಮುವಾದಗಳ ವಿಸ್ತೃತ ಸ್ವರೂಪವನ್ನು ವಿವರಿಸಿದ ಅವರು, ಅಫ್ಘಾನ್‌ನಲ್ಲಿ ನಡೆಯುತ್ತಿರುವ ಧಾಳಿ, ದಬ್ಬಾಳಿಕೆಗಳನ್ನು ತೀವ್ರವಾಗಿ ಖಂಡಿಸಿದರು. ಮುಂಬೈನಲ್ಲಿ ಶಿವಸೇನೆಯವರು ಕೆಲ ಪುರುಷರನ್ನು ಬೆತ್ತಲೆಗೊಳಿಸಿ ನಡೆಸಿದ ದೌರ್ಜನ್ಯದ ಘಟನೆಯನ್ನು ಅವರು ವಿವರಿಸಿ, ಅದರ ವಿರುದ್ಧ ಮಹಿಳಾ ಸಂಘಟನೆ ನಡೆಸಿದ ಹೋರಾಟವನ್ನು ನೆನಪಿಸಿದರು. ಬುರ್ಖಾ ಸಂಸ್ಕೃತಿಯ ಮೇಲೆ ಕಿಡಿಕಾರಿದ ಅವರು ಕ್ರಿಶ್ಚಿಯನ್ ಸಮುದಾಯದ ಮೇಲೆ ನಡೆದ ಧಾಳಿಗಳನ್ನು ತೀವ್ರವಾಗಿ ಖಂಡಿಸಿದರು.

ವೀಣಾ ಮುಜುಂದಾರ್‌ರವರು ಮಾತನಾಡುತ್ತಾ ಮಹಿಳಾ ಚಳುವಳಿಯು ದಾರಿಯಲ್ಲಿ ಸುಶೀಲಾ ಗೋಪಾಲನ್, ವಿಮಲಾ ರಣದಿವೆಯವರ ಜೊತೆ ತಾವು ಸವೆಸಿದ ದಾರಿಯನ್ನು ನೆನಪಿಸಿಕೊಂಡರು.

ಸಮ್ಮೇಳನದ ಪ್ರತಿನಿಧಿಗಳಿಗೆ ತಮ್ಮ ಅನುಭವ, ಸ್ಫೂರ್ತಿ ನೀಡಿದ ಕನಕಮುಖರ್ಜಿ, ಪಾಪಾ ಉಮಾನಾಥ್‌ರ ಮಾತುಗಳು ಸಂಘಟನೆಯನ್ನು ಗಟ್ಟಿಗೊಳಿಸಲು ಮತ್ತಷ್ಟು ಉತ್ತೇಜನ ನೀಡಿತು.

ಸಭೆಯಲ್ಲಿರದ ಸಂಗಾತಿ ಸುಶೀಲಾ ಗೋಪಾಲನ್‌ರವರ ಕುರಿತು ಮಾತನಾಡುವಾಗ ಇಡೀ ಪ್ರತಿನಿಧಿ ಸಭೆ ದುಃಖತಪ್ತವಾಯಿತು. ಸಾವಿನೊಡನೆ ಸೆಣಸುತ್ತಿರುವ ಧೀಮಂತ ನಾಯಕಿ ಗೆದ್ದು ಬರಲೆಂಬ ಹಾರೈಕೆ ಎಲ್ಲರ ಮನದಾಳದಿಂದ ಹೊರಬರುತ್ತಿತ್ತು. ಸಾವಿನ ದವಡೆಯಲ್ಲಿರುವ ಈ ಕ್ಷಣದಲ್ಲಿಯೂ ಸಮ್ಮೇಳನದ ವರದಿಯ ಕುರಿತು ಚರ್ಚಿಸಿ, ರಾಜ್ಯಗಳ ಕಾರ್ಯಕರ್ತರನ್ನು ಕುರಿತು ವಿಚಾರಿಸಿದ ಅವರ ಬಗ್ಗೆ ಹೇಳುವಾಗ ಎಲ್ಲರ ಕಣ್ಣಾಲಿಗಳೂ ತುಂಬಿದವು. ಮೋಟುರು ಉದಯಂ 40 ರ ದಶಕದಲ್ಲಿಯೇ ಸೈಕಲ್ ಕುರಿತು, ಯುವತಿಯರಿಗೆ ಕಲಿಸಿ, ಕರಾಟೆ ಕಲಿಯುವ ಶಾಲೆಗೆ ಬೇಡಿಕೆ ಇಟ್ಟು, ಸರ್ಕಾರದ ಜನ ವಿರೋಧಿ ನೀತಿಗಳ ವಿರುದ್ಧ ಬೀದಿಗಳಲ್ಲಿ, ಆಂಧ್ರದ ಪ್ರಚಲಿತ ಜನಪದ ಪ್ರಾಕಾರ ಬುರ್ರಕಥಾ ಮೂಲಕ ಪ್ರಚಾರ ಮಾಡುತ್ತಿದ್ದರೆಂಬುದನ್ನು ಮಲ್ಲು ಸ್ವರಾಜ್ಯಂ ಸಭೆಯ ಮುಂದಿಟ್ಟಾಗ ಪ್ರತಿನಿಧಿಗಳು ನಿಬ್ಬೆರಗಾದರು. ಇಂತಹ ಧೀಮಂತ ನಾಯಕಿಯರ ಮಾರ್ಗದರ್ಶನ, ಹೋರಾಟದ ಸ್ಫೂರ್ತಿ, ಧೈರ್ಯ, ಸ್ಥೈರ್ಯಗಳೇ ಇಂದು 'ಜನವಾದಿ' ಹೀಗೆ



ಮೆರವಣಿಗೆ ದೃಶ್ಯ

ಮತಾಂಧರ ಸವಾಲು ಸಮರ್ಥವಾ...



ಅಫ್ಘಾನ್ ನಾಡಿನಿಂದ ಬಂದ ಹೋರಾಟಗಾರ್ತಿ ಸಬೀನ

ಭಯೋತ್ಪಾದನೆಯ ವಿರುದ್ಧದ ಹ...
ಮಹಿಳೆಯರ ಧ್ವನಿಯಾಗಿ ಕೆಲಸ ಮಾ...
Afghanistan) ದ ಪ್ರತಿನಿಧಿ...
ವಿಶೇಷತೆಗಳಲ್ಲೊಂದು. ಎಂದರೆ, ವ...
ಇದೊಂದು ನಿದರ್ಶನವಾಗಿತ್ತು.
'ರಾವಾ' ದ ಕಿರುಪರಿಚಯ ನೀ...
ಸಮ್ಮೇಳನದೆದುರಿಗೆ ತೆರೆದಿಟ್ಟರು.
ಕಳೆದ 30 ವರ್ಷಗಳಿಂದ ಬಡತ...
ಮತ್ತಷ್ಟು ಜರ್ಝರಿತವಾಗಿದೆ. ಅಫ್ಘ...
ತಾಣಗಳಲ್ಲಿ ತಾವು ಕೆಲಸ ಮಾಡು...
ನಡೆಸುತ್ತಿರುವುದಾಗಿ ತಿಳಿಸಿದರು. ಸ...
ವಿರೋಧಿಗಳ ವಿರುದ್ಧ ಹೋರಾಡಿದ ವಿ...
ಸೆಣಸಿದ ಮೀನಾರ ಕನಸಿನ ಸಮಾಜ...
ಮಕ್ಕಳಿಗೆ ಚೂರು ರೊಟ್ಟಿ ಕೊಡಲ...
ಇಂದಿನ ಕಷ್ಟಕ್ಕೆ ಅಮೆರಿಕಾ ನೇರ ಹೊ...
ಭಯೋತ್ಪಾದನೆಯ ಬೀಜ ಬಿತ್ತಿದ...
ಅವರು, ಇಂದು ಅಮೆರಿಕಾದ ಮೇಲ...
ಬರ್ಬರತೆಯ ವಿರುದ್ಧ ಒಂದಿನಿತೂ ಮಾತನಾಡಲಿಲ್ಲವೇಕೆಂದು ಪ್ರಶ್ನಿಸಿದರು. ಕ...
ನಿರಾಶ್ರಿತರಾಗಿ ದೇಶಬಿಟ್ಟು ಹೋಗಿದ್ದಾರೆ ಎಂದ ಅವರು, ಇಂದು ಅಮೆರಿಕಾದ ನೆ...
ಯಾವುದೇ ರೀತಿಯಿಂದಲೂ 'ತಾಲಿಬಾನ್' ಗಿಂತ ಭಿನ್ನವಾಗಿಲ್ಲ. ರಬ್ಬಾನಿ, ಅಬ್ದುಲ...
ಮೊದಲು ಶಿಕ್ಷೆ ಅನುಭವಿಸಬೇಕು ಎಂದರು. 1992 ರ ಘಟನೆಯೊಂದನ್ನು ನೆನಪಿಸಿ...
ಪಾಕಿಸ್ತಾನ ಮತ್ತು ಇರಾಕಿನಿಂದ ಬಂದ ವಿವಿಧ ಮತಾಂಧ ಗುಂಪುಗಳು ಹೇಗೆ...
ನಾಶಪಡಿಸಿದರು. ಶಾಲೆ ಕಾಲೇಜುಗಳನ್ನು ನಾಶ ಪಡಿಸಿದರೆನ್ನುವುದನ್ನು ಎಳೆ ಎ...
ವಿವರಿಸಿದ ಅವರು, ಇವುಗಳನ್ನು ವಿರೋಧಿಸಿದ ಮಹಿಳೆಯರು ಅತ್ಯಾಚಾರದಂತಹ...
ತಮ್ಮ ಉದ್ಯೋಗ, ಶಿಕ್ಷಣ ಎಲ್ಲವನ್ನೂ ತೊರೆದು ಗೃಹಬಂಧನದಲ್ಲಿರಬೇಕಾಗಿ...
ನಡೆದಾಡದಂತಹ ನಿಷೇಧಕ್ಕೆ ಒಳಗಾಗಬೇಕಾಯಿತೆಂದರು. ಮುಂದೆ ಬರಲಿರುವ...
ಅಫ್ಘಾನ್ ಮಹಿಳೆಯರ ಅಭಿಪ್ರಾಯಗಳನ್ನು ಗಣನೆಗೆ ತೆಗೆದುಕೊಳ್ಳೇಕೆಂದರು. ಭಾ...
11 ರ ಘಟನೆಯ ಬಗ್ಗೆ ನಮ್ಮದೂ ಸಹಮತವಿಲ್ಲ,ಆದರೆ ಇಡೀ ಅಫ್ಘಾನ್ ಜನತೆ...
ಬಗ್ಗೆ ಕಟುವಾಗಿ ಟೀಕಿಸಿದ ಅವರು ಪ್ರಜಾಪ್ರಭುತ್ವ ಪುನರ್‌ಸ್ಥಾಪನೆಗಾಗಿ ಎಂತಹ

…ನಾವರಣಗೊಳಿಸಿದ
…ಳನಂ ಮಹಾ ಸಮರಕ್ಕೆ ಸಜ್ಜು

…ಗ ೨೦ರ ಹರೆಯದ ಸಂಭ್ರಮ. ಈ …ಈ ರಾಷ್ಟ್ರ ಸಮ್ಮೇಳನ ದೇಶ ವಿದೇಶಗಳ …ಂಘಟನೆಯ ಏಳು ಬೀಳುಗಳತ್ತ ಗಮನ …ಹೆಪ್ಪುಗಟ್ಟಿರುವ ನೋವು ವಿಶಾದ, …ಯ ಹೊಸ ಆಯಾಮ ನೀಡಿದ್ದು ಈ …ಬೇರು ಮೇಳೈಸಿ ಸೊಬಗು-ಬೆರಗು ಹೊಸ …ವಳಿಯ ಬಲದ ಭಿತ್ತರ.

… ರಾಜ್ಯ ಸಮಿತಿ ಪ್ರಧಾನ ಕಾರ್ಯದರ್ಶಿ …ಲ.

ಸಮರ್ಥವಾಗಿ ಬೆಳೆಯಲು ಸಾಧ್ಯವಾಯಿತೆಂಬುದನ್ನು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ.

ಸಮ್ಮೇಳನಕ್ಕೆ ಶುಭ ಕೋರಿ ಎನ್‌ಎಫ್‌ಐಡಬ್ಲ್ಯೂನ ಅಖಿಲ ಭಾರತ ಪ್ರಧಾನ ಕಾರ್ಯದರ್ಶಿ ಅಮರಜಿತ್ ಕೌರ, ಸಿಐಟಿಯು ಮತ್ತು ದುಡಿಯುವ ಮಹಿಳೆಯರ ಸಮನ್ವಯ ಸಮಿತಿಯ ಪರವಾಗಿ ಹೇಮಲತ ಮತ್ತು ಕಿಸಾನ್, ವಿದ್ಯಾರ್ಥಿ, ಯುವಜನ ಸಂಘಟನೆಗಳ ಸೌಹಾರ್ದ ಪ್ರತಿನಿಧಿಗಳು ಮಾತನಾಡಿದರು.

ದೇಶದ 3 ರಾಜ್ಯಗಳನ್ನು ಹೊರತುಪಡಿಸಿ, ಉಳಿದೆಲ್ಲ ರಾಜ್ಯಗಳಿಂದ 867 ಜನ ಪ್ರತಿನಿಧಿಗಳು ಎಲ್ಲಾ ವರ್ಗ/ಜಾತಿ/ಧರ್ಮದ ಮಹಿಳೆಯರನ್ನು ಪ್ರತಿನಿಧಿಸಿ ಪಾಲ್ಗೊಂಡಿದ್ದರು. ಸಮ್ಮೇಳನದಲ್ಲಿ 85 ಜನರ ಕೇಂದ್ರ ಸಮಿತಿಯನ್ನು ಆಯ್ಕೆ ಮಾಡಲಾಯಿತು.

ಹೀಗೆ ಪ್ರಾರಂಭದಿಂದಲೂ ಹಲವು ವಿಭಿನ್ನ ಅಂಶಗಳ ಮೂಲಕವೇ ಪ್ರಾರಂಭಗೊಂಡ ಸಮ್ಮೇಳನದ ಕಲಾಪ 27.11.01 ರಂದು ವಿಶಾಖಪಟ್ಟಣಂ ನಲ್ಲಿ ನಡೆದ ಬೃಹತ್ ಮೆರವಣಿಗೆ, ಸಾರ್ವಜನಿಕ ಸಭೆಯ ಮೂಲಕ ಮುಕ್ತಾಯಘಟ್ಟಕ್ಕೆ ಬಂತು. ನಗರದ ಬೊಳ್ಳಯ್ಯಾ ಕಾಲೇಜ್ ಆವರಣದಲ್ಲಿ ಮೈದಾನದಲ್ಲಿ ಕಿಕ್ಕಿರಿದು ತುಂಬಿದ್ದ ಜನ ಸಮುದಾಯವನ್ನು ಉದ್ದೇಶಿಸಿ ಮಲ್ಲುಸ್ವರಾಜ್ಯಂ, ಪುಣ್ಯವತಿ, ಪಾವನಿ (ಆಂಧ್ರಪ್ರದೇಶ) ಮತ್ತು ಸಂಘಟನೆಯ ನೂತನ ಅಧ್ಯಕ್ಷೆ ಸುಭಾಷಿಣಿ ಅಲಿ, ಕಾರ್ಯಾಧ್ಯಕ್ಷೆ ಶ್ಯಾಮಿಲಿ ಗುಪ್ತ, ಪ್ರಧಾನ ಕಾರ್ಯದರ್ಶಿ ಬೃಂದಾ ಕಾರಟ್, ಮುಖ್ಯ ಅತಿಥಿಯಾಗಿ ಕಾಂ. ರಾಧಾಕೃಷ್ಣ, 'ರಾವಾ' ಪ್ರತಿನಿಧಿ ಸಬೀನಾ ಬೇಗ್ ರವರು ಮಾತನಾಡಿದರು.

ಕೋಮುವಾದದ ವಿರುದ್ಧದ ಹೋರಾಟದ ಧ್ವನಿಯಾಗಿ ಮಹಾರಾಷ್ಟ್ರದ ಫರ್ವಿನ್

1993 ರಲ್ಲಿ ಮುಂಬೈಯಲ್ಲಿ ನಡೆದ ಕೋಮುಗಲಭೆಗಳ ಒಂದು ಘಟನೆಯನ್ನು ಬಿಡಿಸಿಟ್ಟ ಪರ್ವಿನ್ ಕೋಮುವಾದದ ಕರಾಳ ಸ್ವರೂಪವನ್ನು ಎದುರಿಟ್ಟರು. ನರರೂಪೀ ರಾಕ್ಷಸರು ಗುಡಿಸಲುಗಳಿಗೆ ನುಗ್ಗಿ ಮಹಿಳೆಯರು ಮಕ್ಕಳನ್ನು ಎಳೆದಾಡಿದ ಘಟನೆಗಳು ನಂತರದ ಕರ್ಫ್ಯೂ. ಆ ಸಂದರ್ಭದಲ್ಲಿ ಎಲ್ಲ ಕೋಮಿನ ಮಹಿಳೆಯರು ಒಬ್ಬರಿಗೊಬ್ಬರು ಆಸರೆಯಾಗಿದರು. ಆದರೆ



ಕರ್ಫ್ಯೂ, ರಕ್ಷಣೆ…ಗಳ ನೆದಲ್ಲಿ ಪೋಲೀಸರ ದೌರ್ಜನ್ಯ ಪ್ರಾರಂಭವಾಗುವ ಸೂಚನೆಗಳು ಕಂಡು ಬಂದಾಗ ಮಹಿಲೆಯರು ಒಂದಾಗಿ ಹೋಗಿ ಪೋಲೀಸರಿಗೆ ಇಲ್ಲಿ ಶಾಂತಿ ಇದೆ ನಿಮ್ಮ ಅವಶ್ಯಕತೆ ಇಲ್ಲವೆಂದು ಸಾಗಹಾಕಿದೆವು. ಆಗ ನಮಗೆ ಬೇಕಿದ್ದದ್ದು ಜಾತ್ಯಾತೀತ ಸಂಘಟನೆಯೊಂದರ ಬೆಂಬಲ. AIDWA ನಮ್ಮ ಬೆಂಬಲಕ್ಕೆ ಬಂತು. ನಾವೀಗ ಧೈರ್ಯದಿಂದ ಕೋಮುವಾದದ ವಿರುದ್ಧ ಹೋರಾಡುತ್ತಿದ್ದೇವೆ.

ಇವು ಮಹಿಳೆಯರು ಬಲಿಪಶುಗಳಲ್ಲ, ಪರಿಸ್ಥಿತಿಯ ಕೈಗೊಂಬೆಗಳೂ ಅಲ್ಲ. ಬದಲಿಗೆ ಸಾಮಾಜಿಕ ಬದಲಾವಣೆಯ ಹರಿಕಾರರು" ಎಂಬ ಸಮಸ್ಯೆ, ಕಾರ್ಖಾನೆ ಮುಚ್ಚುವಿಕೆಯ ಪ್ರಸ್ತಾಪದ ಜೊತೆಯೇ ಗ್ರಹಾಂ ಸ್ಟೈನ್ ಮತ್ತು ಮಕ್ಕಳ ಕಗ್ಗೊಲೆಯನ್ನು ಪ್ರಸ್ತಾಪಿಸಿದರು. ಮಣಿಪುರದ ಸಂಗಾತಿ ಮಣಿಪುರದ ಪರಿಸ್ಥಿತಿಯನ್ನು ವಿವರಿಸಿದರು. ಕರ್ನಾಟಕದ ಪ್ರತಿನಿಧಿ ರೈತರ ಸಮಸ್ಯೆಯತ್ತ, ಆತ್ಮಹತೆಯ ಮತ್ತು ಮಕ್ಕಳ ಮಾರಾಟದತ್ತ ಬೆಳಕು ಚೆಲ್ಲಿದರು. ಒಟ್ಟಿನಲ್ಲಿ ಇಡಿಯಾಗಿ ಪ್ರತಿನಿಧಿ ಸಭೆ ಜಾಗತೀಕರಣ, ಕೋಮವಾದಗಳ ವಿರುದ್ಧ ನಡೆದ ಹೋರಾಟಗಳ ವಿಶಾಲ ವರದಿಯಾಗಿತ್ತು.

ಹಿಂಸೆಯ ವಿರುದ್ಧದ ಹೋರಾಟದ ಭಾಗದಲ್ಲಿ ವಿವಿಧ ರಾಜ್ಯಗಳನ್ನು ಪ್ರತಿನಿಧಿಸಿದ 7 ಮಹಿಳೆಯರ


ಮೆರವಣಿಗೆಯಲ್ಲಿ ಮಹಿಳಾ ಸಾಂಸ್ಕೃತಿಕ ತಂಡ

ಘೋಷಣೆಗೆ ಜೀವಂತ ಸಾಕ್ಷ್ಯಗಳ 20 ವರ್ಷದ ಜನವಾದಿಯ ಸಾರ್ಥಕ ಹೆಜ್ಜೆಯ ಗುರುತುಗಳ ಒಂದು ಭಾಗ ಇದು. ನಂತರ ಅನಂತರಾಷ್ಟ್ರೀಯ -ರಾಷ್ಟ್ರೀಯ ವಿದ್ಯಮಾನಗಳ ವಿಸ್ತೃತ ವರದಿ ಮಂಡಿಸಲ್ಪಟ್ಟರೆ ಇಡೀ ಸಮ್ಮೇಳನವೇ ಬೆರಗಾಗಿ ಬಿಡುವಂತಹ, ಹೆಜ್ಜೆ ಹೆಜ್ಜೆಗೂ ಸಂಘಟನೆಯ ತ್ತವವನ್ನು ಇಡಿಯಾಗಿ ಮೈಗೂಡಿಸಿಕೊಂಡ ಪ್ರಬುದ್ಧ ಮಟ್ಟದ ಚರ್ಚೆ ಪ್ರತಿನಿಧಿಗಳಿಂದ. ಇಡೀ ವಿಶ್ವನ್ನೇ ಆವರಿಸಿಕೊಂಡ ಜಾಗತೀಕರಣದ ವಿಷವರ್ತುಲದ ವಿರುದ್ಧ ಸಂಘಟನೆಯ ಎಲ್ಲಾ ಹಂತಗಳಲ್ಲಿ ನಡೆಸಿದ ನಡೆಸುತ್ತಿರುವ ಹೋರಾಟದ ಬೃಹತ್ ಸ್ವರೂಪವನ್ನೇ ಕಣ್ಣೆದುರಿಗಿಟ್ಟರು. ಕೋಮುವಾದದ ಬೆಂಕಿ ವಿವಿಧ ರೂಪಗಳಲ್ಲಿ ಜನಮನಗಳನ್ನು ಆಕ್ರಮಿಸಿಕೊಳ್ಳುತ್ತಿರುವುದರ ವಿರುದ್ಧ ಸಂಘಟನೆ ನಿರಂತರ ಹೋರಾಟ ನಡೆಸುತ್ತಿರುವುದು ಪ್ರತಿನಿಧಿಗಳ ಚರ್ಚೆಯಲ್ಲಿ ವ್ಯಕ್ತವಾಗುತ್ತಿತ್ತು. ಅತ್ಯಂತ ಕಿರಿಯ ವಯಸ್ಸಿನ ಪ್ರತಿನಿಧಿಗಳ ಮಾತುಗಳೂ ಕೂಡ ಸಂಘಟನೆಯನ್ನು ಅಂತರ್ಗತ ಮಾಡಿಕೊಂಡ ಹಿನ್ನೆಲೆಯಲ್ಲಿಯೇ ಮೂಡಿಬರುತ್ತಿದ್ದವು.

ನಿರಂತರ ಹೋರಾಟದ ವರದಿಯಂತೆ ಹರಿದುಬಂದ ಚರ್ಚೆಯಲ್ಲಿ ಆಂಧ್ರದ ಸಂಗಾತಿಗಳು ವಿದ್ಯುತ್ ದರ ಏರಿಕೆ ವಿರುದ್ಧದ ಹೋರಾಟವನ್ನು ವಿವರಿಸಿದರೆ, ಅಸ್ಸಾಂನ ಪ್ರತಿನಿಧಿ ಜಾಗತೀಕರಣ ಹೇಗೆ ಮಹಿಳೆಯರನ್ನು ವೇಶ್ಯಾವಾಟಿಕೆಗೆ ತಳ್ಳುತ್ತಿದೆ ಎಂದು ಬಣ್ಣಿಸುತ್ತಿದ್ದರು. ಒರಿಸ್ಸಾ ಪ್ರತಿನಿಧಿ ನೀರಿನ ಅನುಭವಗಳು ಇಡೀ ಪ್ರತಿನಿಧಿ ಸಂಗಾತಿಗಳ ಹೋರಾಟದ ಹೆಜ್ಜೆಗಳನ್ನು ಗಟ್ಟಿಗೊಳಿಸುವಂತಿದ್ದವು.

1. ಭೂಮಿಯ ಹಕ್ಕಿಗಾಗಿ ಹೋರಾಟ: ಬಿಹಾರದ ರಾಮರತಿ

ಉದಾರೀಕರಣ ನೀತಿ ಉಳ್ಳವರ ಪಾಲಿಗೆ ವರವಾಗಿ ಬಂದಿತೇ ಹೊರತು ಇಲ್ಲದವರಿಗಲ್ಲ. ಸರ್ಕಾರದ ವಶದಲ್ಲಿರುವ ಏನನ್ನೂ ಬಡವರಿಗೆ ಉದಾರವಾಗಿ ಕೊಡುವ ನೀತಿ ಬರಲಿಲ್ಲ. ಇದಕ್ಕೆ ಸಾಕ್ಷಿ ಬಿಹಾರದ ಭೂಮಿ ಹೋರಾಟ. ಸರ್ಕಾರದ ಜಮೀನು ಮಾತ್ರವಲ್ಲದೆ ಬಡವರ ಜಮೀನನ್ನು ಕಬಳಿಸಿದ ಜಮೀನ್ದಾರರ ವಿರುದ್ಧ ಮಹಿಳೆಯರು ಧೀರ ಹೋರಾಟ ನಡೆಸಿದ್ದಾರೆ. ಅದರ ಗುಣಲಕ್ಷಣಕ್ಕನುಗುಣವಾಗಿ ಸರ್ಕಾರ ಉಳ್ಳವರ ಪರವಾಗಿ ನಡೆದುಕೊಂಡಿದೆ. ಪ್ರದರ್ಶನ ನಡೆಸುತ್ತಿದ್ದ ಮಹಿಳೆಯರ ಮೇಲೆ ಗೋಲಿಬಾರ್ ನಡೆದು ರಾಂಪುರಿ ಪ್ರಾಣತೆತ್ತರು. ಇನ್ನೋರ್ವರ ಕಾಲು ಕತ್ತರಿಸಲಾಗಿದೆ. ಆದರೆ ಮಹಿಳೆಯರ ಧೈರ್ಯ ಕುಗ್ಗಲಿಲ್ಲ. ಬದಲಿಗೆ ಇನ್ನೂ ತೀವ್ರತರದ ಹೋರಾಟ ನಡೆದು ಕೊನೆಗೂ ಭೂಮಿ ಹಂಚಬೇಕಾಯಿತು. ಜಂಟಿ ಪಟ್ಟಾ ನೀಡಲೇಬೇಕೆಂದು ಒತ್ತಾಯಿಸಿ ಪಡೆಯಲಾಯಿತು.

ಅಸ್ಸಾಂನಲ್ಲಿ ನಿರಂತರವಾಗಿ ನಡೆಯುತ್ತಿರುವ ಉಗ್ರವಾದಿ ಚಟುವಟಿಕೆಗಳನ್ನು ಎದುರಿಸಿ ಮಹಿಳೆಯರು ಸೆಣಸುತ್ತಿದ್ದಾರೆ. ಒಂದು ಕಿರು

ಮುಂದಿನ ಪುಟಕ್ಕೆ

…ಎದುರಿಸುತ್ತಿರುವ ಹೋರಾಟಗಾರರು

…ಟ ನಡೆಸುತ್ತಿರುವ ಪ್ರತಿಕ್ಷಣವನ್ನೂ ಆಂತಕದಲ್ಲಿಯೇ ಕಳೆಯುತ್ತಿರುವ ಅಫ್ಘಾನ್ …ತ್ತಿರುವ 'ರಾವಾ'(Revalutionory Association of Women of …ಸಮ್ಮೇಳನದ ಸೌಹಾರ್ದ ಪ್ರತಿನಿಧಿಯಾಗಿ ಪಾಲ್ಗೊಂಡಿದ್ದು ಈ ಸಮ್ಮೇಳನದ …ಕೇವಲ ಬಲಿಪಶು ಅಲ್ಲ, ಸಮರ್ಥವಾಗಿ ಪರಿಸ್ಥಿತಿಯನ್ನು ಎದುರಿಸಬಲ್ಲಳೆಂಬುದಕ್ಕೆ

…ಬೀನಾ ಕಬೀರ್ ಅಫ್ಘಾನಿನ ಮಹಿಳೆಯ ಮತ್ತು ಅಲ್ಲಿಯ ಜನರ ಪರಿಸ್ಥಿತಿಯನ್ನು

…ರಿದ್ರ್ಯಗಳಿಂದ ನರಳುತ್ತಿರುವ ಅಫ್ಘಾನ್ 'ತಾಲಿಬಾನ್' ಮತಾಂಧರ ಆಳ್ವಿಕೆಯಲ್ಲಿ …ಳೆಯರ ಹಕ್ಕುಗಳಿಗಾ 'ರಾವಾ' ಹೋರಾಡುತ್ತಿದೆ. ಪಾಕಿಸ್ತಾನದಲ್ಲಿರುವ ನಿರಾಶ್ರಿತರ …ವುದಾಗಿ ತಿಳಿಸಿ ಮತಾಂಧತೆಯ ವಿರುದ್ಧ ಪ್ರಾಣದಆಸೆ ತೊರೆದು ಹೋರಾಟ …ಯ ಸ್ಥಾಪಕಿ 'ಮೀನಾ' ರ ಕುರಿತು ಹೇಳುತ್ತಾ ಮಹಿಳೆಯರ ಹಾಗೂ ಪ್ರಜಾಪ್ರಭುತ್ವ …, ಮೂಲಭೂತ ವಾದಿಗಳಿಂದ ಕೊಲ್ಲಲ್ಪಟ್ಟರು. ಶೋಷಿತ ಮಹಿಳೆಯರ ಪ್ರತಿನಿಧಿಯಾಗಿ …ರ್ಮಾಣಕ್ಕಾಗಿ 'ರಾವಾ' ಕೆಲಸ ಮಾಡುತ್ತಿದೆ ಎಂದರು.

…ಗುತ್ತಿರುವ ಅಫ್ಘಾನ್ ಮಹಿಳೆಯರ ಬದುಕನ್ನು ಬಿಚ್ಚಿಟ್ಟ ಸಬೀನ ಅಫ್ಘಾನಿನ ಜನರ …ಂದು ತಿಳಿಸಿದರು. ಸ್ವಹಿತ ಸಾಧನೆಗಾಗಿ ಬಿನ್ ಲಾಡೆನ್‌ರಂತವರನ್ನು ಹುಟ್ಟುಹಾಕಿ, …ರಿಕಾಕ್ಕೆ ಭಯೋತ್ಪಾದನೆಯ ಬಿಸಿ ತಟ್ಟಿದ್ದು ಸೆಪ್ಟೆಂಬರ್11, 2001 ರಂದು ಎಂದ …ವ ಧಾಳಿಯನ್ನು ಖಂಡಿಸುತ್ತಿರುವ ರಾಷ್ಟ್ರಗಳು ಇದುವರೆಗೆ ಅಫ್ಘಾನಿನಲ್ಲಿ ನಡೆಯುತ್ತಿದ್ದ …0 ವರ್ಷಗಳಿಂದ ಯುದ್ಧ ನಡೆಯುತ್ತಿದೆ. 1979 ರಿಂದೀಚೆಗೆ 6 ಮಿಲಿಯನ್ ಜನ …ಂದಿಗೆ ತಾಲಿಬಾನ್ ವಿರುದ್ಧ ಯುದ್ಧ ಮಾಡುತ್ತಿರುವ ನಾರ್ದನ್ ಅಲಯನ್ಸ್ ಕೂಡ … ಕೂಡ ಮೂಲಭೂತವಾದಿಗಳೇ ಎಂದ ಅವರು ಈ ಜನ ತಮ್ಮ ಅಪರಾಧಗಳಿಗೆ …ವ ಮೂಲಕ ಅಫ್ಘಾನ್‌ನಲ್ಲಿ ಮತಾಂಧತೆಯ ಪ್ರಾರಂಭವನ್ನು ಅವರು ಬಿಡಿಸಿಟ್ಟರು. …ಳೆಯರಿಗೆ ಉಡುಪು ಸಂಹಿತೆಯನ್ನು ಜಾರಿಗೆ ತಂದರು. ಸುದ್ದಿ ಮಾಧ್ಯಮಗಳನ್ನು …ಗಿ ಬಿಡಿಸಿಟ್ಟರು. ಮಾನವೀಯ ಹಕ್ಕುಗಳ ಸಂಪೂರ್ಣ ಉಲ್ಲಂಘನೆಯಾಗಿದ್ದನ್ನು …ವೀ ಕೃತ್ಯಕ್ಕೆ ಒಳಗಾಗಬೇಕಾಯಿತೆಂದರು. ತಾಲಿಬಾನ್ ಆಡಳಿತದಲ್ಲಿ ಮಹಿಳೆಯರು … ಒಬ್ಬ ಗಂಡಸಿನ ಜೊತೆ ಇಲ್ಲದೇ ಮಹಿಳೆ ಬುರ್ಖಾ ಧರಿಸಿ ಕೂಡ ಹೊರಗೆ …ರ ರಚನೆಯ ಸಂದರ್ಭದಲ್ಲಿ ವಿಶ್ವಸಂಸ್ಥೆ ದೇಶದ ಜನಸಂಖ್ಯೆಯ ಶೇ 50 ಇರುವ …ಪ್ರಜಾಪ್ರಭುತ್ವ ಸಂಘಟನೆಗಳು ತಮಗೆ ಒತ್ತಾಸೆಯಾಗಿ ನಿಲ್ಲಬೇಕೆಂದರು. ಸೆಪ್ಟೆಂಬರ್ … ಕಾರಣವೆಂಬ ಅಭಿಪ್ರಾಯವನ್ನು ಜಾಗತೀಕ ಮಟ್ಟದಲ್ಲಿ ಅಮೆರಿಕಾ ಹರಡುತ್ತಿರುವ …ಯನ್ನೂ ತೆರಲು ನಾವು ಸಿದ್ಧ ಎಂದರು.

7ನೇ ಪುಟದಿಂದ

ಪರಿಚಯ ನೀಡಿದವರು ಸುಭದ್ರ.

ಬುಡಕಟ್ಟು ಮಹಿಳೆಯರಿಗೆ ಆಸ್ತಿ ಹಕ್ಕಿಲ್ಲ. ಆಸ್ತಿ ಹಕ್ಕಿಗಾಗಿ ಹೋರಾಟ ನಡೆದಿದೆ. ಅದನ್ನು ಹತ್ತಿಕ್ಕಲು ತೀವ್ರಧಾಳಿ ನಡೆದಿದೆ. ಮಹಿಳೆಯರನ್ನು ಸಂಘಟಿಸಿದ ತಪ್ಪಿಗಾಗಿ - 'ಬಾನಾಮತಿ' ಮಾಡುವಳೆಂಬ ಆರೋಪ ಹೊರಿಸಿ ಸಾಯಹೊಡೆಯಲಾಯಿತು. ಅಂತಹ ಸಂದರ್ಭದಲ್ಲಿ ನೆರವಿಗೆ ಬಂದ AIDWA ಯಿಂದಾಗಿ ಬದುಕುಳಿಯಲು ಸಾಧ್ಯವಾಯಿತೆಂದು ವಿವರಿಸಿದಾಗ ಕಲ್ಲೆದೆಯೂ ಜಲ್ಲೆಂದಿತು.



ಬಹಿರಂಗ ಸಭೆ ದೃಶ್ಯ

ಇವು ಉಗ್ರರ ಜಮೀನ್ದಾರರ ಹಿಂಸೆಗಳಾದರೆ - ಕೌಟುಂಬಿಕ ವಲಯದಲ್ಲಿ ನಡೆಯುತ್ತಿರುವ ಹಿಂಸೆಗಳ ಒಂದು ಚಿತ್ರವಾಗಿ ತಮಿಳ್ನಾಡಿನ ಅಳಗಮ್ಮ ಪ್ರತಿನಿಧಿಗಳ ಮುಂದೆ ತಂದರು. ಅಳಗಮ್ಮ ಆಕೆಯ ಗಂಡನಿಗೆ ಎರಡನೇ ಹೆಂಡತಿ. ಮದುವೆಯಾಗಿ ಮಗುವೂ ಆದ ಮೇಲೆ ಇವರಿಗೆ ಇದ್ದ ಜಮೀನನ್ನು ಗಂಡನ ಮೊದಲ ಹೆಂಡತಿಗೆ ಕೊಡಬೇಕೆಂಬ ಒತ್ತಡ ತದ ತಿರಸ್ಕರಿಸಿದ ಆಕೆಯ ಮೇಲೆ ದೌರ್ಜನ್ಯ ದಬ್ಬಾಳಿಕೆಗಳು ಪ್ರಾರಂಭವಾದವು. ತಾಳಲಾರದೇ ಕೋರ್ಟಿಗೆ ಹೋದಾಗ ಜಾತಿ ಪಂಚಾಯ್ತಿ ಸೇರಿಸಿ ಗಂಡನನ್ನು ವಿರೋಧಿಸಿದ್ದು ಅಪರಾಧ, ಪ್ರಸಂಗವನ್ನು ಊರ ಹೊರಗೆ ತೆಗೆದುಕೊಂಡು ಹೋಗುವ ಮೂಲಕ ಕುಲಕ್ಕೆ ಅವಮಾನ ಆಗಿದೆ ಎಂಬಿತ್ಯಾದಿ ಆರೋಪದೊಂದಿಗೆ ಆಸ್ತಿಯನ್ನು ಹಿಂದಿರುಗಿಸುವಂತೆ ಸೂಚಿಸಲಾಯಿತು. ತಪ್ಪಿದಲ್ಲಿ 51000 ದಂಡ ಕೇಳಲಾಯ್ತು. ಒಪ್ಪದೇ ಪೋಲಿಸರ ನೆರವಿಗೆ ಮತ್ತೆ ಹೋದಾಗ ನೆರವಿನ ಬದಲು ಬೈಗಳು ಸಿಕ್ಕಿತು. ಇತ್ತ ನ್ಯಾಯ ಪಂಚಾಯ್ತಿ ದಂಡ ಕೊಡಲು ತಪ್ಪಿದರೆ ಉರುಳು ಸೇವೆ ಮಾಡಬೇಕು. ಒಂದು ಉರುಳು ಸೇವೆಗೆ 1000 ದಂಡದ ಹಣ ಕಡಿಮೆ ಮಾಡಲಾಗುತ್ತದೆ ಎಂದಿತು. 47 ಬಾರಿ ಉರುಳುಸೇವೆ ಮಾಡಿದಳು. ಕೊನೆಯ 4000 ಕ್ಕೆ ಮತ್ತೊಮ್ಮೆ ಪೋಲೀಸರ ನೆರವಿಗೆ ಹೋದಾಗ ಅಲ್ಲಿ ಆಕೆಯ ಮೇಲೆ ಅತ್ಯಾಚಾರ ನಡೆಯಿತು. AIDWA ದ ನೆರವಿನಿಂದ ಹೋರಾಟ ನಡೆದಿದೆ.

ಈ ನೆಲೆಗಳಲ್ಲಿ ನಡೆಯುವ ಹಿಂಸೆಗಳ ಸ್ವರೂಪ ಇದಾದರೆ - ಜನಪರವಾದ ಧೋರಣೆಯ ಸರ್ಕಾರವಿದ್ದಾಗ ಕೂಡ ಮಹಿಳೆಯರ ಮೇಲೆ ಎಂತಹ ಭೀಕರ ಸ್ವರೂಪದ ಹಿಂಸೆ ಜರುಗಬಹುದು ಖಯ್ಯಾತಂ ಬೇಗಂರ ಅನುಭವದಿಂದ ತಿಳಿದುಬಂತು. ಕಳೆದ ಕೆಲವು ವರ್ಷಗಳಿಂದ ಪ.ಬಂಗಾಳದಲ್ಲಿ ರಾಜಕೀಯ ಹಿಂಸೆ ತೀವ್ರವಾಗಿ ನಡೆಯುತ್ತಿದೆ. ಎಡರಂಗ ಸರ್ಕಾರವನ್ನು ಕೆಡವಿಯೇ ಬಿಡಬೇಕೆನ್ನುವ ಶಕ್ತಿಗಳಿಗೆ ಸದಾ ಪ್ರಚಾರ ನೀಡುವ ಮಾಧ್ಯಮಗಳ ಚಿತ್ರಕ್ಕೆ ವ್ಯತಿರಿಕ್ತವಾದ ನಿಜ ವಾಸ್ತವದೆಡೆಗೆ ಪ್ರತಿನಿಧಿಗಳನ್ನು ಕೊಂಡೊಯ್ದವರು ಖಯ್ಯಾತಂ ಬೇಗಂ.

ಮಿಡ್ನಾಪುರ ಜಿಲ್ಲೆಯ ಕೇಶಪುರದ ಗೋಪಿನಾಥ ಹಳ್ಳಿಯಲ್ಲಿ ನಡೆದ ದಾರುಣ ಘಟನೆ. ಇವರೆಲ್ಲರೂ ಕೃಷಿ ಕೂಲಿಕಾರರು. ಇದ್ದಕ್ಕಿದ್ದಂತೆ ಬಂದು ನುಗ್ಗಿದ ತೃಣಮೂಲ ಕಾಂಗ್ರೆಸ್ಸಿನ ಗೂಂಡಾಗಳು ಶಸ್ತ್ರ ಸಜ್ಜಿತರಾಗಿ ದಾಳಿ ನಡೆಸಿದರು. ಆಟವಾಡುತ್ತಿದ್ದ ಮೂವರು ಶಾಲಾ ವಿದ್ಯಾರ್ಥಿಗಳು ಬಲಿಯಾದರು. 40 ಜನ ಗಾಯಗೊಂಡರು. ಮನೆಗಳಿಗೆಬೆಂಕಿ ಹಾಕಲಾಯಿತು. ಈ ಮಹಿಳೆಯರು ಭಯಭೀತರಾಗಿ ಮಸೀದಿಗಳಲ್ಲಿ ಅಡಗಿದ್ದರು. ಮುಖ ಮುಚ್ಚಿಕೊಂಡು ನಿಂತಿದ್ದ ಮಹಿಳೆಯರ ಕೈಯಲ್ಲಿದ್ದ 5 ತಿಂಗಳ ಕೂಸನ್ನು ಉರಿವ ಬೆಂಕಿಗೆ ಹಾಕಲಾಯಿತು. ಹೋರಾಡು ಇಲ್ಲವೇ ಸಾಯಿ ಎನ್ನುವ ನಿಶ್ಚಯ ಮಾಡಿ ಕೈಗೆ ಸಿಕ್ಕಿದ ಗೃಹಬಳಕೆಯ ಆಯುಧಗಳನ್ನೇ ಹಿಡಿದ ಮಹಿಳೆಯರು ಗೂಂಡಾಗಳೆಡೆಗೆ ನುಗ್ಗಿ 8 ಮಂದಿಯನ್ನು ಸಾಯಿಸಿದರು. ಗೂಂಡಾಗಳಿಗೆ ತಮ್ಮನ್ನು 1.80 ಲಕ್ಷಕ್ಕೆ ಮಾರಿಕೊಂಡಿದ್ದ ಪೋಲೀಸರು ಇವರ ಮೇಲೆ ಮೊಕದ್ದಮೆ ದಾಖಲಿಸಿಕೊಳ್ಳಲು ಬಂದರಾದರೂ ಆತ್ಮರಕ್ಷಣೆಗಾಗಿ ನಡೆಸಿದ ಹೋರಾಟವಾದ್ದರಿಂದ ಕೇಸು ದಾಖಲಾಗಲಿಲ್ಲ.

ತ್ರಿಪುರಾದ ಗೋದಾವಿ: ವಿಚ್ಛಿದ್ರಕಾರಿ ಶಕ್ತಿಗಳ ಜೊತೆ ದಿನ ನಿತ್ಯ ಸೆಣಸಾಡುವ ತ್ರಿಪುರಾದ ಸಂಗಾತಿಯದು ಮತ್ತೊಂದು ಕಥೆ. 2000 ಇಸ್ವಿಯ ಚುನಾವಣೆಯಲ್ಲಿ ಕುತ್ತಿಗೆಗೆ ಬಂದೂಕನ್ನಿಟ್ಟು ಉಗ್ರವಾದಿಗಳ ಪರವಾಗಿ ಕೆಲಸ ಮಾಡಲು ಕೇಳಿದರು. ಅವರ ಪ್ರಣಾಳಿಕೆ ಏನೆಂದು ವಿಚಾರಿಸಿದಾಗ ಕೊಲ್ಲುವ ಬೆದರಿಕೆ ಹಾಕಲಾಯಿತು. ಎಡರಂಗ ಮತ್ತು ಮಹಿಳಾ ಸಂಘಟನೆಯಲ್ಲಿ ಕೆಲಸ ಮಾಡುತ್ತಿದ್ದ ಕಾರಣದಿಂದಲೇ ಆಕೆಯನ್ನು ಗುರಿ ಮಾಡಲಾಗಿತ್ತು. ಅವರಿಗೆ ಕೆಲಸ ಮಾಡುವುದಾಗಿ ಹೇಳಿ, ಒಳಗಿದ್ದು ಹೊರಗಿನ ಕೆಲಸ ಮಾಡುವ ಯೋಚನೆ ಮಾಡಿದಳು. ಆದರೆ ಸಂಘಟನೆಯಿಂದ ಸಂಶಯಕ್ಕೆ ಒಳಗಾಗಬೇಕಾಯಿತು. ನೇರ ಸಂಪರ್ಕ ಬೆಳೆಸಿದರೆ ಇದೇ ಕುಟುಂಬಕ್ಕೆ ಕೊಲೆ ಬೆದರಿಕೆ, ಅದಕ್ಕೆ ಆಕೆ ಕಂಡುಕೊಂಡ ಮಾರ್ಗ - ತನ್ನ ಟೀ ಅಂಗಡಿಯ ಮುಂದೆ ನಿಂತು ಹಾಡು ಹಾಡುವುದು ಮತ್ತು ಆ ಮೂಲಕ ಸಂಘಟನೆಯ ಸಂಗಾತಿಗಳಿಗೆ ಸಂದೇಶ ನೀಡುವುದು ಮಾರುಕಟ್ಟೆ, ಔಷಧಾಲಯಗಳ ನೆಪದಲ್ಲಿ ಸಂಘಟನೆಯ ಸಭೆಗಳಿಗೆ ಹಾಜರಾಗುವುದು. ಈಗ ಉಗ್ರರಿಗೆ ಆಕೆಯ ಉಪಾಯ ತಿಳಿದು ಹೋಗಿರುವುದರಿಂದ ಇಡೀ ಕುಟುಂಬ ಊರು ಬಿಟ್ಟು ಬೇರೆ ಕಡೆ ಬದುಕುತ್ತಿದ್ದಾರೆ. ಬದುಕಿನ ಪ್ರತಿಕ್ಷಣ ಆತಂಕಕಾರಿಯೇ. ಆದರೆ ಸಂಘಟನೆಯ ಮೇಲೆ ಅಚಲ ನಂಬಿಕೆ, ಅಪಾರ ಶ್ರದ್ಧೆ.


ಇವು ಸಮ್ಮೇಳನವನ್ನು ಸಿಕ್ಕ ಅನುಭವದ, ಸಂಘಟನೆಯ ಸಂಗಾತಿಗಳ ಬದುಕಿನ ತುಣುಕುಗಳು. ಈ ಎಲ್ಲ ಅನುಭವಗಳ ಆಧಾರದಲ್ಲಿ ಪ್ರಸ್ತಾಪಿಸಲ್ಪಟ್ಟ 7 ಆಯೋಗಗಳು - 7ನೇ ವಿಭಾಗ 'ಹಿಂಸೆ'ಯನ್ನು ಮತ್ತೇಳಾಗಿ ವಿಂಗಡಿಸಿ ವಿಸ್ತೃತವಾಗಿ ಚರ್ಚಿಸಲಾಯಿತು. ಜಾಗತೀಕರಣದ ಪರಿಣಾವನ್ನು ವಿವಿಧ ನೆಲೆಗಳಲ್ಲಿ ಚರ್ಚಿಸಿ ಮುಂದಿನ ಕಾರ್ಯಯೋಜನೆಗೆ ಬುನಾದಿ ಹಾಕಲಾಯಿತು.

ಒಟ್ಟಾರೆಯಾಗಿ ಹೇಳಬೇಕೆಂದರೆ ಜನವಾದಿ ಮೂಡಿಸಿದ ಅಳಿಸಲಾರದ ಹೆಜ್ಜೆಯ ಗುರುತುಗಳು - 20 ರ ಸಮ್ಮೇಳನದಲ್ಲಿ ಇನ್ನಷ್ಟು ಗಟ್ಟಿಗೊಂಡವು. ಹೀಗೆ ಬರೆಯುವಾಗ ಬೀಜಿಂಗ್‌ನ ನೆಲದಲ್ಲಿ ನಾವು ಗುನುಗುತ್ತಿದ್ದ ಸಾಲುಗಳು ಮತ್ತೆ ಮತ್ತೆ ನನಗೆ ನೆನಪಾಗುತ್ತಿವೆ.

ನಡೆ ನಡೆ ಮುನ್ನಡೆ
ಹಿಂದಿರುಗದಿರು ಎಂದು
ಎಂದೆಂದಿಗೂ.



ಮುಖಂಡ... ...ದಾ, ಸುಭಾಷಿಣಿ, ಶಾಮಿಲಿ



ದುಡಿವ ಮಹಿಳೆಯರ ಬದುಕು ಬಿಡಿಸಿಟ್ಟ ಪ್ರದರ್ಶನ

ಸಮ್ಮೇಳನದ ಅಂಗವಾಗಿ ಇನ್ನೂ ಹಲವು ವಿಶಿಷ್ಟ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿತ್ತು.

ಗ್ರಾಮೀಣಭಾರತದ ಮಹಿಳೆಯರ ಹೋರಾಟದ ಚಿತ್ರಣ ಸಮ್ಮೇಳನದ ಪ್ರಾಂಗಣದ ಒಳಗೆ ಸಿಕ್ಕರೆ ಗ್ರಾಮೀಣ ಮಹಿಳೆಯರ ಬದುಕಿನ ಚಿತ್ರ ಪ್ರದರ್ಶನ ಸಮ್ಮೇಳನದ ಪೂರ್ವಭಾವಿ ಕಾರ್ಯಕ್ರಮವಾಗಿ ೨೩.೧೧.೦೧ ರಂದು ವಿಶಾಖಪಟ್ಟಣದಲ್ಲಿ ಪ್ರಾರಂಭವಾಯಿತು. ಖ್ಯಾತ ಪತ್ರಕರ್ತ, ದಲಿತ, ಬಡಜನರ ಪರ ಚಿಂತಕ ಪಿ.ಸಾಯಿನಾಥ್ ಭಾರತದ ಹಲವು ರಾಜ್ಯಗಳಲ್ಲಿ, ಹಳ್ಳಿಗಳಲ್ಲಿ ಸಂಚರಿಸಿ ಅಧ್ಯಯನ ನಡೆಸಿದ ಆಧಾರದಲ್ಲಿ ಅವರ ಚಿತ್ರ ಪ್ರದರ್ಶನ ಅತ್ಯಂತ ಅರ್ಥಪೂರ್ಣವಾಗಿತ್ತು. ಬೆಳಗಿನಿಂದ ಸಂಜೆಯರೆಗೆ, ಕತ್ತಲ ರಾತ್ರಿಯವರೆಗೆ ದುಡಿದು ಬೆಂಡಾಗುವ, ಆದರೆ ರಾಷ್ಟ್ರೀಯ ಆದಾಯದ ಲೆಕ್ಕಾಚಾರದಲ್ಲಿ ಗಣನೆಗೆ ಬರದ ಗ್ರಾಮೀಣ ಮಹಿಳೆಯರ ದುಡಿತವನ್ನು ಬಿಂಬಿಸುವ ಚಿತ್ರ ಪ್ರದರ್ಶನವನ್ನು ಉದ್ಘಾಟಿಸಿದವರು ಅವರ ಚಿತ್ರದಲ್ಲಿ ಕಾಣಿಸಿಕೊಂಡ ಆಂಧ್ರದ ಕೃಷಿಕೂಲಿಕಾರ ಮಹಿಳೆ ನಾಗಮ್ಮ . ಇದೂ ಸಮ್ಮೇಳನದ ವಿಭಿನ್ನತೆಗೆ ಒಂದು ನಿದರ್ಶನ.

ಜನವಾದಿಯ ೨೦ ವರ್ಷಗಳನ್ನು ದಾಖಲಿಸಿದ ಫೋಟೋ ಪ್ರದರ್ಶನ, ಸಂಘಟನೆಯ ಹೆಜ್ಜೆಯ ಗುರುತುಗಳನ್ನು ಹೊಸಬರಿಗೆ ಪರಿಚಯಿಸಿತು. ಸ್ವಾತಂತ್ರ್ಯ ಚಳುವಳಿಯ ಸಂಧರ್ಭದಲ್ಲಿಯೇ ತನ್ನ ಬೇರುಗಳನ್ನು ಹೊಂದಿದ್ದ ಜನವಾದಿಯ ಸಂಸ್ಥಾಪಕಿಯರ ಫೋಟೋಗಳು ಅವರ ಹೋರಾಟದ ಯಶೋಗಾಥೆಗಳು ಹೊಸ ಪೀಳಿಗೆಗೆ ನವಚೇತನ ನೀಡಿದವೆಂದರೆ ಅತಿಶಯೋಕ್ತಿಯೇನಲ್ಲ.

ಭಯೋತ್ಪಾದನೆಯ ವಿರುದ್ಧ ಮಹಿಳೆಯರ ಹೋರಾಟ

೨೦ ವರ್ಷಗಳ ಸಂಘಟನೆಯ ಅನುಭವ, ಹೋರಾಟದ ಹಿನ್ನೆಲೆಯಲ್ಲಿ ಸಮ್ಮೇಳನವನ್ನು - ಭಯೋತ್ಪಾದನೆ ಹಾಗೂ (SESSION,) ಹಿಂಸೆಯ ವಿರುದ್ಧದ ಹೋರಾಟ ಮತ್ತು ಸಂಘಟನೆ, ಎತ್ತಿಕೊಂಡ ಸಮಸ್ಯೆಗಳು ಮತ್ತು ಪರಿಣಾಮಕಾರೀ ಮಧ್ಯಪ್ರವೇಶಗಳ ವಿಸ್ತೃತ ವರದಿಯಾಗಿ ವಿಂಗಡಿಸಲಾಗಿತ್ತು.

ಗಡಿಯಾಚೆಯ ಸಬಲ ಮಹಿಳಾ ಧ್ವನಿ ಸಬೀನಾದಾದರೆ, ನಮ್ಮ ನೆಲೆದಲ್ಲಿಯೇ ಪ್ರತಿಕ್ಷಣ ಪ್ರತಿದಿನ ಆತಂಕದ ಕ್ಷಣಗಳಲ್ಲಿಯೇ ಕಳೆಯುತ್ತಿರುವ ಕಾಶ್ಮೀರದ ಜನರ ಧ್ವನಿ ಶಬನಮ್‌ದಾಗಿತ್ತು. ಕಣಿವೆಯ ಜನರ ಬದುಕನ್ನು ಸವಿಸ್ತಾರವಾಗಿ ತೆರೆದಿಟ್ಟರು ಶಬನಮ್. ಪೋಲೀಸರು, ರೈಫಲ್ ಹಿಡಿದವರು, ಭಯೋತ್ಪಾದಕರು, ಪ್ರಭುತ್ವ ಇವರೆಲ್ಲರ ದಬ್ಬಾಳಿಕೆ, ದೌರ್ಜನ್ಯದ ವಿರುದ್ಧ ಪ್ರತಿನಿತ್ಯ ನಡೆಸುತ್ತಿರುವ ಸೆಣಸಾಟ, ಭಯೋತ್ಪಾದನೆಯ ವಿರುದ್ಧದ ಸೆಣಸಾಟವೆಂದರು. ಭಯೋತ್ಪಾದನೆ ನಡೆಯುತ್ತಿರುವ ಪ್ರದೇಶಗಳ ಭಾಷೆ ಬೇರೆ ಇರಬಹುದು, ಆದರೆ ಭಯೋತ್ಪಾದಕರ ಭಾಷೆ ಒಂದೆ. ಉಡುಪ ಸಂಹಿತೆಯ ವಿರುದ್ಧ ಕಾಶ್ಮೀರದ ಸ್ವಾತಂತ್ರ್ಯ ಪ್ರಿಯ ಮಹಿಳೆಯರು ನಡೆಸುತ್ತಿರುವ ಹೋರಾಟವನ್ನು ವಿವರಿಸಿದರು. ಬೂರ್ಖಾ ಧರಿಸಲು ನಿರಾಕರಿಸಿದಳೆಂಬ ಕಾರಣಕ್ಕೆ ಯುವತಿಯೋರ್ವಳ ಮುಖವನ್ನು ಕಲ್ಲಿನಿಂದ ಹೊಡೆದು ಗಾಯಗೊಳಿಸಲಾಗಿತ್ತು. ಆಕೆ ಕಾಶ್ಮೀರಿ ಮಹಿಳೆಯಾಗಿಯೇ ಕಾಣಿಸಿಕೊಂಡು ಮೂಲಭೂತವಾದವನ್ನು ವಿರೋಧಿಸಿದ್ದಾಳೆ ಅಂತಹ ಹಲವಾರು ಮಹಿಳೆಯರು ಕಣಿವೆಯಲ್ಲಿದ್ದಾರೆ. ಮತಾಂಧತೆಯ ವಿರುದ್ಧ ಹೋರಾಟ ನಡೆಸುತ್ತಿದ್ದಾರೆ. ಮತಾಂಧರ ಹಿಂಸೆಗಳ ವಿರುದ್ಧ ಹೋರಾಡುತ್ತೇವೆ. ನಾವು ಅಫ್ಘನ್ನಲ್ಲಿಲ್ಲ, ಪಾಕಿಸ್ತಾನದಲ್ಲಲ್ಲ, ಕಾಶ್ಮೀರದಲ್ಲಿದ್ದೇವೆ. ನಮ್ಮ ಅಸ್ತಿತ್ವವನ್ನು ಅಳಿಸಿಕೊಳ್ಳುವುದಿಲ್ಲವೆಂಬುದು ಕಾಶ್ಮೀರದ ಧ್ವನಿಯಾಗಿ ಬಂತು.

ಈಶಾನ್ಯ ಭಾರತದಲ್ಲಿ ನಿರಂತರವಾಗಿ, ಕೇಂದ್ರ ಸರ್ಕಾರ ಗಡಿಯಾಚೆಗಿನ ವಿಚ್ಛಿದ್ರಕಾರಿ ಶಕ್ತಿಗಳು, ಒಳಗೆಯೇ ಬೆಳೆಯುತ್ತಿರುವ ವಿಷ ಶಕ್ತಿಗಳ ವಿರುದ್ಧ ಹೋರಾಡುತ್ತಿರುವವರ ಧ್ವನಿಯಾಗಿ ಬಂದ ತ್ರಿಪುರಾದ ಊರ್ಮಿಳಾರ ಅನುಭವ ಕೂಡ ಮೇಲಿನವುಗಳಿಗಿಂತ ಭಿನ್ನವಾಗಿರಲಿಲ್ಲ. ಮೂಲತಃ ಆದಿವಾಸಿಗಳಾದ ಈ ಮಹಿಳೆಯರ ಸ್ವಾತಂತ್ರ್ಯ ಹರಣವಾಗುತ್ತಿದೆ. ಗುಡ್ಡಗಾಡು ಜನರೆಂಬ ಕಾರಣಕ್ಕೆ ಅವರಿಗೆ ಸೀರೆ, ಸಿಂಧೂರಗಳನ್ನು ಧರಿಸುವುದರ ಮೇಲೆ ನಿಷೇಧ ಹೇರಲಾಗಿದೆ. ಗಂಡು ಸಂತಾನ ಬೇಕೆಂಬ ಬಯಕೆಯಿಂದ ಕುಟುಂಬ ಯೋಜನೆಗಳ ಮೇಲೆ ನಿಷೇಧ ಹೇರಲಾಗಿದೆ. ಇದುವರೆಗೂ ಚಾಲ್ತಿಯಲ್ಲಿರದ ವರದಕ್ಷಿಣೆ ಪ್ರಾರಂಭವಾಗಿದೆ. ಮಹಿಳಾ ಸಂಘಟನೆಯ ಸದಸ್ಯತ್ವ ತ್ಯಜಿಸುವ ಒತ್ತಡ ಹೇರಿ, ಮಗನನ್ನು ಕದ್ದೊಯ್ಯಲಾಗಿತ್ತು. ೩ ತಿಂಗಳು ಆತನನ್ನು ಬಚ್ಚಿಡಲಾಗಿತ್ತು. ಸಂಘಟನೆಯ ಕಾರ್ಯಕರ್ತನನ್ನು ಸಾಂಪ್ರಾದಾಯಿಕ ಆಚರಣೆಗಳ ಹೆಸರಿನಲ್ಲಿ ಕೊಲ್ಲುವ ಪ್ರಯತ್ನ ನಡೆಯುತ್ತಿದೆ. ಇದೆಲ್ಲ ಕಥೆಯನ್ನು ಬಿಚ್ಚಿಟ್ಟ ಊರ್ಮಿಳಾ ಅಲ್ಲಿನ ಗ್ರಾಮ ಸಮಿತಿಯ ಅಧ್ಯಕ್ಷೆ. ಡಿಸ್ಟ್ರಿಕ್ ಕೌನ್ಸಿಲ್ ಸದಸ್ಯೆ, ಆ ಪ್ರದೇಶದ ಅಭಿವೃದ್ಧಿಗಾಗಿ ಬಂದ ಹಣವನ್ನು ಕೊಡುವಂತೆ ಒತ್ತಡ ಹೇರಲಾಯಿತು. ಅದನ್ನು ನಿರಾಕರಿಸಿದಳೆಂದು ಆಕೆಯ ಮೇಲೆ ತೀವ್ರತರದ ಹಲ್ಲೆ ನಡೆಯಿತು. ಇದು ಊರ್ಮಿಳಾರಂತಹ ಹಲವು ಸಂಗಾತಿಗಳ ಪ್ರತಿದಿನದ ಅನುಭವ.

ಅಸ್ಸಾಂನ ಸಂಗಾತಿ ಸತ್ಯವತಿ ಭುಯ್ಯಾರ ಅನುಭವ ಕೂಡ ಇದಕ್ಕಿಂತ ಭಿನ್ನವಲ್ಲ. ಬೋಡೋ ಭಯೋತ್ಪಾದಕರ ವಿರುದ್ಧದ ಸೆಣಸಾಟದಲ್ಲಿ ಹಲಾವರು ಸಂಗಾತಿಗಳು ಜೀವ ತೆತ್ತಿದ್ದಾರೆ. ಬೋಡೋ ಉಗ್ರವಾದಿಗಳು ತಮ್ಮದೇ ಕಾನೂನು ಜಾರಿಗೆ ತರುವ ನಿಟ್ಟಿನಲ್ಲಿ ತೆರಿಗೆಗಳನ್ನು ವಿಧಿಸುತ್ತಾರೆ. ಇವುಗಳ ವಿರುದ್ಧ ಹೋರಾಟ ನಡೆಸಿದ್ದಕ್ಕಾಗಿ ರೀನಾ ಬಷಾಲ್ ಗಂಡನನ್ನು ಆಕೆಯ ಎದುರೇ ಉಗ್ರರು ಕೊಂದು ಹಾಕಿದರು. ಆದರೆ ಪೋಲೀಸರು ಬಂಧಿಸಿ ಜೈಲಿಗೆ ಕಳಿಸುವುದು ಉಗ್ರರನ್ನಲ್ಲ, ಬದಲಿಗೆ ಅಮಾಯಕ ಜನರನ್ನು.

ಕಡುಬಡವರ, ದಲಿತರ ಮನೆ ನಿರ್ಮಾಣಕ್ಕೆಂದು ಆಶ್ರಯ ಯೋಜನೆ, ಅಂಬೇಡ್ಕರ್ ಯೋಜನೆ ಮತ್ತು 22.5 ದಲಿತರ ಮೀಸಲಾತಿ ಅಡಿಯಲ್ಲಿ ಮನೆಗಳ ನಿರ್ಮಾಣಕ್ಕೆಂದು ಕೇಂದ್ರ-ರಾಜ್ಯ ಸರ್ಕಾರಗಳಿಂದ ಕೋಟಿಗಟ್ಟಲೇ ಹಣ ಮಂಜೂರಾಗುತ್ತಿದೆ. ಈ ಹಣ ನಿಜವಾದ ಫಲಾನುಭವಿಗಳಿಗೆ ತಲುಪದೆ ಮಧ್ಯವರ್ತಿಗಳಿಗೆ, ಜಿಲ್ಲಾ, ತಾಲ್ಲೂಕು-ಗ್ರಾಮಪಂಚಾಯತಿ ಅಧ್ಯಕ್ಷ, ಕಾರ್ಯದರ್ಶಿಗಳಿಗೆ ಹಾಗೂ ಭ್ರಷ್ಟ ನೌಕರ ಜೇಬಿಗೆ ಹೋಗುತ್ತಿದೆ. ಸರ್ಕಾರದಿಂದ ಮನೆ ಕಟ್ಟಲು ಹಣ ಸಿಗುತ್ತದೆಂದು ನಂಬಿ ಬಡ್ಡಿ ಸಾಲ ಮಾಡಿ ಮನೆಗಳನ್ನು ಕಟ್ಟಲಾಗದೆ ಅತಂತ್ರ ಸ್ಥಿತಿಯಲ್ಲಿರುವ ಯಾತನಾಮಯ ಗೋಳಿನ ಕತೆ ಹಾಗೂ ಕರ್ನಾಟಕ ಪ್ರಾಂತ ರೈತ ಸಂಘಟನೆ ಮಧ್ಯ ಪ್ರವೇಶಿಸಿ ಹಗರಣಗಳನ್ನು ಬಯಲಿಗೆಳೆದಿದೆ.


ಆಶ್ರಯ ಮನೆಗಳ ಹಣ ನುಂಗುವ ಬಕಾಸುರರು

ಬಿ.ರಾಜಶೇಖರಮೂರ್ತಿ

ಅಲ್ಲೊಂದು ಪಾಳೇಗಾರಿ ವ್ಯವಸ್ಥೆಯುಳ್ಳ ಊರು. ಶ್ರೀಮಂತ ವರ್ಗದ ಜನರದ್ದೇ ಕಾರುಬಾರು. ಆ ಊರ ಸೆರಗಿನಲ್ಲಿ ದಲಿತರ ಕೇರಿ. ಬರೀ ಅರಕಲು-ಮುರುಕಲು ಗುಡಿಸಲುಗಳೇ. ಕೊಳೆತು ನಾರುತ್ತಿರುವ ಚರಂಡಿಗಳು. ಮಕ್ಕಳು ಸ್ಕೂಲಿನ ಮೆಟ್ಟಿಲು ಹತ್ತದೆ ಮಣ್ಣಿನಲ್ಲಿ ಮಣ್ಣಾಗಿ ಆಡವಾಡುತ್ತಿದ್ದಾರೆ. ಅವರ ಅಪ್ಪ-ಅಮ್ಮಂದಿರು ದಿನಗೂಲಿ-ನಾಲಿ ಮಾಡಿ ಅರೆಹೊಟ್ಟೆ ತುಂಬಿಸಿಕೊಳ್ಳುತ್ತಾರೆ. ಐದು ವರುಷಕ್ಕೊಮ್ಮೆ ರಾಜಕೀಯ ರಾಜರುಗಳು ಇವರ ಮನೆ ಬಾಗಿಲಿಗೆ ಬರುತ್ತಾರೆ. ಅವರ ಮಾತಿಗೆ, ಹೆಂಡ ಸಾರಾಯಿ - ಕಿರುಕಾಸಿಗೆ ತಮ್ಮ ಓಟುಗಳನ್ನು ಕೊಡುತ್ತಾರೆ. ಇವರ ದೇಹಗಳನ್ನು ಮೆಟ್ಟಿಲು ಮಾಡಿ ಸೌಧಗಳ ಕಟ್ಟುತ್ತಾರೆ. ಇಂಥ ಉದಾಹರಣೆಗಳು ನಮ್ಮನಿಮ್ಮ ಮಧ್ಯದಲ್ಲೇ ನಡೆಯುತ್ತಿವೆ.

ಮುಗ್ಧ ಕನಸು ಕಡಿದವರು!

ಮಾನ್ಯ ಮುಖ್ಯಮಂತ್ರಿಗಳು ಬೆಂಗಳೂರನ್ನು ಸಿಂಗಾಪೂರ ಮಾಡಲು ಹೊರಟಿರುವ ಉದ್ಯಾನನಗರಿಯ ಸೆರಗಿನಲ್ಲೇ ಇರುವ ಹೊಸಕೋಟೆ ತಾಲೂಕಿನ ಸಮೇತನಹಳ್ಳಿ ಗ್ರಾಮ ಪಂಚಾಯತಿಗೆ ಸೇರಿದ ಕೊರಳೂರು ಗ್ರಾಮ. ದಲಿತ ಕುಟುಂಬದಲ್ಲಿ ಹುಟ್ಟಿದ ತಪ್ಪಿಗೆ ಭೂಮಾಲೀಕರ ಜಮೀನಿನಲ್ಲಿ ಕೂಲಿ ಮಾಡತ್ತಾ, ತಮ್ಮ ಮಕ್ಕಳ ಜೊತೆ ಜೀವನ ಸಾಗಿಸುತ್ತಿದ್ದ ಗೋಪಿನಾಥ, ಆತನ ಹೆಂಡತಿ ಮಂಜುಳ ಗುಡಿಸಲಿನಲ್ಲಿ ವಾಸವಾಗಿದ್ದರು. ಗ್ರಾಮ ಪಂಚಾಯತಿಯ ಮಾಜಿ ಅಧ್ಯಕ್ಷರು ಮಂಜುಳರವರಿಗೆ ಮನೆ ಕಟ್ಟಿಸಲು ಸರ್ಕಾರದಿಂದ ಹಣ ಕೊಡುತ್ತೇವೆಂದು ಇರುವ ಗುಡಿಸಲನ್ನು ಕಿತ್ತು ಹೊಸ ಮನೆ ಕಟ್ಟಿಕೊಳ್ಳಿ ಎಂದು ತಾಕೀತು ಮಾಡಿದರು. ತನ್ನ ಒಳಹೋಗಿದ್ದ ಕಣ್ಣುಗಳನ್ನು ಅಗಲಿಸಿ 'ರೀ ಮಾಜಿ ಅಧ್ಯಕ್ಷರು ಸರ್ಕಾರದಿಂದ ಹಣ ಕೊಡಿಸುತ್ತಾರಂತೆ. ಹೊಸ ಮನೆ ಕಟ್ಟಿಸಿಕೊಡುತ್ತಾರಂತೆ. ಅರ್ಜೆಂಟಾಗಿ ಗುಡಿಸಲು ಹೊಡದಾಗಿ ತಳಹದಿ ತೋಡುವಾ' ಎಂದು ಶಕ್ತಿ ಇಲ್ಲದ ದೇಹದಾಗ ಮನಸ್ಸಿಗೆ ಶಕ್ತಿ ತುಂಬಿ ಗಂಡನ ಜೊತೆಗೂಡಿ ಮನೆ ಕಟ್ಟುವ ಕನಸು ಕಂಡಳು. ಮನೆಗಾಗಿ ಏರ್ಪಾಡು ಮಾಡತೊಡಗಿದರು. 'ಹೊಸ ಮನೆ ಕಟ್ಟುತ್ತೇವೆ ಸರ್ಕಾರದಿಂದ ಹಣ ಬರುತ್ತಾದಂತ ಮಾಜಿ ಅಧ್ಯಕ್ಷರು ಹೇಳಿಯಾರ ಸಾಲ ಕೊಡಿ' ಎಂದು ಅಕ್ಕಪಕ್ಕದ ಜಮೀನ್ದಾರರ ಹತ್ತಿರ ಪಡೆದು ಮನೆ ಕಟ್ಟಡದ ಕೆಲಸ ಪ್ರಾರಂಭಿಸಿದರು ಬಹಳ ಹುರುಪಿನಿಂದ.


ಹಣವಂಚಿತ ಜಯರಾಮಯ್ಯ

ಮಾಜಿ ಅಧ್ಯಕ್ಷರ ಮನೆಗೆ ಹಣಕ್ಕಾಗಿ ಪ್ರದಕ್ಷಿಣೆ

ಮಾಜಿ ಅಧ್ಯಕ್ಷರ ಮನೆಗೆ ಹಣಕ್ಕಾಗಿ ಅಲೆಯುವುದು, ಈ ದಿನ ತಾಲ್ಲೂಕು ಕಛೇರಿಗೆ ಹೋಗಿಬರುತ್ತೇನೆ, ನಾಳೆ ವಿಚಾರಿಸುತ್ತೇನೆ ಎಂಬ ಸಬೂಬುಗಳು ಮಂಜುಳರವರ ಮುಗ್ಧ ಮನಸ್ಸಿನ ತಲೆಚಿಟ್ಟು ಹಿಡಿಸಿತು. 'ಸಾಮಿ ನಾವು ಎಂಗೋ ಗುಡಿಸಲಲ್ಲೇ ಇದ್ದೆವು. ನೀವ್ ಲೋನ್ ಕೊಡಿಸ್ತೀನಿ ಎಂದೇಳಿ ಇದ್ದ ಮನೆ ಕೆಡವಿ ಹಾಕಿಸಿದ್ದೀರಿ, ಈಗ ಬೀದಿಲಿ ಮಕ್ಕಳಮರಿ ಜೊತೆ ಬಿದ್ಕೊ ಅಣೆಬರ ಬಂದಿದೆ, ದಯಮಾಡಿ ಕೊಡ್ಸಿ ಸಾಮಿ' ಎಂದು ಅಳಲು ತೋಡಿಕೊಂಡಳು. ಈಕೆಯ ಒತ್ತಾಯಕ್ಕೆ ಮಣಿದ ಮಾಜಿ ಅಧ್ಯಕ್ಷರು 1999-2000 ರಲ್ಲಿ ಮಂಜುರಾಗಿದ್ದ ಇಪ್ಪತ್ತು ಸಾವಿರದಲ್ಲಿ ಮೂರು ಸಾವಿರ ಮಾತ್ರ ಮಂಜುಳಾರಿಗೆ ನೀಡಿದರು. ಕೊಟ್ಟ ಹಣದಲ್ಲಿ ಮಾಡಿದ ಸಾಲ ತೀರಿಸಲು ಆಗಲಿಲ್ಲ. ಕೈತುಂಬಾ ಸಾಲವಾಯಿತೆಂದು ಮಂಜುಳರವರ ಗಂಡ ಗೋಪಿನಾಥ್ ಹೆಂಡತಿ ಜೊತೆ ಜಗಳ ಪ್ರಾರಂಭಿಸಿದ "ನಾನು ಸುಮ್ನೆ ಇದ್ದೆ. ನಿನ್ ಮಾತ್ ಕೇಳಿ ಇಂಗಾಯ್ತು' ಇಬ್ಬರ ನಡುವೆ ಮನಸ್ತಾಪವಾಯಿತು. ಮಾಡಿದ ತಪ್ಪಿಗೆ ಕಷ್ಟ ಅನುಭವಿಸುವಂಥ ಪರಿಸ್ಥಿತಿ ಇಬ್ಬರಿಗೆ ಬಂತು.

ಕೆಲವು ತಿಂಗಳುಗಳ ನಂತರ ಮತ್ತೆ ಗ್ರಾಮ ಪಂಚಾಯತಿ ಕಛೇರಿಗೆ ಹೋಗಿ ಮಂಜುಳರವರು ಹಣ ಕೇಳಿದರೆ ಬಿಲ್ ಕಲೆಕ್ಟರ್ ಇನ್ನು ಬಂದಿಲ್ಲ ಈ ವಾರ ಬಾ, ಮುಂದಿನ ವಾರ ಬಾ ಎಂದು ಹೇಳತೊಡಗಿದರು. ಒಮ್ಮೆ ಬಿಡಿಓ ಕಛೇರಿ (ಕಾರ್ಯ ನಿರ್ವಾಹಕ ಅಧಿಕಾರಿ)ಗೆ ಬಾ ಎಂದರು ಮೂರು ಕಡೆ ಸ್ಟಾಂಪ್ ಪೇಪರ್ ಮೇಲೆ ಸಹಿ ಹಾಕಿಸಿಕೊಂಡು ಎರಡು ಸಾವಿರ ಮಾತ್ರ ನೀಡಿದರು. ಮುಂಜುಳವರು 'ನನ್ನ ಹೆಸರಿಗೆ 20,000 ಹಣ ಮಂಜೂರಾಗಿದೆ.ಎರಡು ಸಾವಿರ ಮಾತ್ರ ಕೊಡುತ್ತೀರಿ ಯಾಕೆ?' ಎಂದು ಪ್ರಶ್ನಿಸಿದರೆ 'ಇಲ್ಲಮ್ಮ ಬಂದಿರೋದು ಇಷ್ಟೇ. ಬೇಕಾದರೆ ತಕೋ ಇಲ್ಲಾಂದ್ರೆ ಬೇರೆಯವರಿಗೆ ಕೊಡುತ್ತೇನೆಂಬ ಜೋರು!. ಹೋಗ್ಲಿ ಮತ್ತೆ ಯಾವಾಗ ಬರುತ್ತದೆಂದು ಕೇಳಿದರೆ ಒಂದೆರಡು ತಿಂಗಳ ನಂತರ ಹೇಳುತ್ತೀವಿ ಎಂಬ ಬೇಜವಾಬ್ದಾರಿ ಉತ್ತರ ಬಿಲ್ ಕಲೆಕ್ಟರ್‌ನಿಂದ. ತಿಂಗಳ ನಂತರ ಗಂಡ ಹೆಂಡ್ತಿ ಮಕ್ಕಳು ಕಛೇರಿಗೆ ಹೋಗಿ 'ನಮ್ಮ ಹೆಸರಿಗೆ ಮಂಜೂರಾಗಿರುವ ಹಣ ಕೊಡಿ, ಸಾಲ ಮಾಡಿ ಅರ್ಧ ಮನೆ ಕಟ್ಟಿ ಬಿಟ್ಟಿದ್ದೀವಿ. ಜಮೀನು ಇಲ್ದೆ ಕೂಲಿ ಮಾಡಿ ಬದುಕುತ್ತಿದ್ದು ಮನೆ ಕಟ್ಟಾಕೆ ಹಣ ಕೊಡುತ್ತೀರಿ ಅಂತ ಹೇಳಿದೋರು ನೀವು' ಎಂದು ಗೋಗರೆದರೂ ಏನೂ ಪ್ರಯೋಜನವಾಗಲಿಲ್ಲ. ಕಛೇರಿಗೆ ಅಲೆದು ಅಲೆದು ಬಳಲಿ ಬೆಂಡಾಗಿ ಹೋದರು.

ಕರ್ನಾಟಕ ಪ್ರಾಂತ ರೈತ ಸಂಘ ದಗಾಕೋರರನ್ನು ಬಯಲಿಗೆಳೆಯಿತು

ಅದೇ ಸಮೇತನ ಹಳ್ಳಿ ಗ್ರಾಮ ಪಂಚಾಯಿತಿಗೆ ಸೇರಿದ ನಡುವತ್ತಿ ಗ್ರಾಮದಲ್ಲಿ 1998-1999 ರ ಸಾಲಿನಲ್ಲಿ ಆಶ್ರಯ ಯೋಜನೆ ಅಡಿಯಲ್ಲಿ ತಾಲ್ಲೂಕು ಪಂಚಾಯತಿಯಿಂದ 8 ಜನ ಫಲಾನುಭವಿಗಳು ಆಯ್ಕೆಯಾಗಿದ್ದರು. ವರ್ಷಾನುಗಟ್ಟಲೇ ಅಲೆದಾಡಿಸಿ ಕೊನೆಗೆ ಮಂಜೂರಾದ ತಲಾ ಒಬ್ಬೊಬ್ಬರಿಗೆ ಇಪ್ಪತ್ತೆಷ್ಟು ಸಾವಿರಗಳಲ್ಲಿ ಒಬ್ಬೊಬ್ಬರಿಗೆ ಹತ್ತೊಂಭತ್ತು ಸಾವಿರ ರೂಪಾಯಿಗಳನ್ನು ನೀಡಿದ್ದರು. ಉಳಿದ ಒಂದೊಂದು ಸಾವಿರ ರೂಪಾಯಿಗಳನ್ನು ನಿಮ್ಮ ಹೆಸರಿಗೆ ಗ್ರಾಮ ಪಂಚಾಯಿತಿಗೆ ಕಳಿಸುತ್ತೇವೆ, ಆ ಹಣದಲ್ಲಿ ಶೌಚಾಲಯ ನಿರ್ಮಾಣಕ್ಕೆಂದು ನೀವು ಅಲ್ಲಿಂದ ಪಡೆಯಿರಿ ಎಂದು ತಿಳಿಸಿದರು. ಇದರಂತೆ 8 ಜನ ಫಲಾನುಭವಿಗಳು ಗ್ರಾಮ ಪಂಚಾಯತಿ ಕಾರ್ಯದರ್ಶಿಗಳನ್ನು ಕೇಳಲು ಹೋದರೆ ಇನ್ನು ಬಂದಿಲ್ಲವೆಂಬು ಸಬೂಬು ಹೇಳಿ ಹಿಂದಿರುಗಿಸುತ್ತಿದ್ದರು. ಇದನ್ನು ಮನಗಂಡ ಕರ್ನಾಟಕ ಪ್ರಾಂತರೈತ ಸಂಘವು ತಾಲ್ಲೂಕು ಪಂಚಾಯತಿಯಲ್ಲಿ ಪರಿಶೀಲಿಸಿದಾಗ ಎಂಟು ಜನರ ಸುಳ್ಳು ಸಹಿಗಳನ್ನು ಸೃಷ್ಟಿಸಿ ಗ್ರಾಮ ಪಂಚಾಯತಿ ಕಾರ್ಯದರ್ಶಿ ಮಾಲೂರಯ್ಯ ಹಾಗೂ ಬಿಲ್ ಕಲೆಕ್ಟರ ತಿಮ್ಮೇಗೌಡ ರು ಒಳಸಂಚು ನಡೆಸಿ ಎಂಟುಸಾವಿರ ಹಣ ಲಪಟಾಯಿಸಿದ್ದ ಬಗ್ಗೆ ಗುಮಾನಿ ಬಂತು.

ದಿನಾಂಕ 10.9.2001 ರಲ್ಲಿತಾಲ್ಲೂಕು ಪಂಚಾಯತಿಯಲ್ಲಿ ಸಮೇತನಹಳ್ಳಿ ಗ್ರಾಮ ಪಂಚಾಯತಿಗೆ ಹಣ ಮಂಜೂರಾಗಿರುವ ದಾಖಲೆಗಳನ್ನು ಕೊಟ್ಟರು. ಅದರಲ್ಲಿ ಹಣ ವಿತರಣಾ ಪಟ್ಟಿ ನೋಡಿದಾಗ 8 ಜನರ ಫಲಾನುಭವಿಗಳ ಹಣ ದೋಚಿದ್ದು ಕಂಡು ಬಂತು. ಅದರಲ್ಲಿ ಕರ್ನಾಟಕ ಪ್ರಾಂತ ರೈತ ಸಂಘದ ಮುಖಂಡರಾದ ಹೆಚ್.ಜಯರಾಮಯ್ಯನವರು ಒಬ್ಬರಾಗಿದ್ದರು. ಇವರು ಕರ್ನಾಟಕ ಪ್ರಾಂತ ರೈತ ಸಂಘದ ನೇತೃತ್ವದಲ್ಲಿ ಕಾಡುಗೋಡಿ ಆರಕ್ಷಕ ಠಾಣೆಗೆ ದೂರುಕೊಟ್ಟರು. ಪೋಲೀಸರು ಅವರಿಬ್ಬರನ್ನು ಬಂಧಿಸಿ ನ್ಯಾಯಾಲಯಕ್ಕೆ ಒಪ್ಪಿಸಿದಾಗ ಹೊಸಕೋಟೆ ತಾಲೂಕಿನ ಸರ್ಕಾರಿವಕೀಲರೊಬ್ಬರು ತಪ್ಪು ಹೇಳಿಕೆ ನೀಡಿ ಜಾಮೀನು ಸಿಗುವಂತೆ ಮಾಡಿದರು. ಇವರಿಬ್ಬರ ಹತ್ತಿರ ಲಂಚ ಪಡೆದಿದ್ದಾರೆಂಬ ಸುದ್ದಿ ಇದೆ. ನ್ಯಾಯಾಲಯಕ್ಕೆ ವಂಚಿಸಿ ಹೊರಬಂದ ಈ ಲಂಚಕೋರರನ್ನು ಹೀಗೆ ಬಿಟ್ಟರೆ ಇನ್ನಷ್ಟು ಬಡಜನರ ರಕ್ತ ಹೀರುತ್ತಾರೆಂದು ಕರ್ನಾಟಕ ಪ್ರಾಂತ ರೈತ ಸಂಘ ಜಿಲ್ಲಾ ಪಂಚಾಯತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಈ ಇಬ್ಬರನ್ನು ಅಮಾನತ್ತು ಗೊಳಿಸಬೇಕೆಂದು ಒತ್ತಾಯಿಸಿದೆ. ಸದ್ಯ ಈ ಇಬ್ಬರು ಅಮಾನತ್ತಿಲ್ಲಿದ್ದಾರೆ ಹೊರತು ಕೇಸಿನ ವಿಚಾರದಲ್ಲಿ ಚಾರ್ಜ್ ಷೀಟ್ ಹಾಕಿರುವುದಿಲ್ಲ. ಇವರ ವಿಚಾರದಲ್ಲಿ ತಪಾಸಣೆ ನಡೆದಿಲ್ಲ. ಜಿಲ್ಲಾ ಪಂಚಾಯತಿ ಕೂಡಲೇ ವಿಚಾರಣೆ ನಡೆಸಿ ಇಂಥ ಪ್ರಕರಣಗಳ ವಿರುದ್ಧ ಕ್ರಮ ತೆಗೆದುಕೊಳ್ಳಬೇಕೆಂದು ಒತ್ತಾಯಿಸಲಾಗಿದೆ.


ಆಶ್ರಯ ಮನೆ ದಕ್ಕದ ಮಂಜುಳ

ಇಂಥ ಹಗರಣಗಳು ಒಂದಲ್ಲ - ಎರಡಲ್ಲ ರಾಜ್ಯದ ಉದ್ದಗಲಕ್ಕೂ ನೂರಾರು. ಇದೇ ಹೊಸಕೋಟೆ ತಾಲೂಕಿನ ಲಕೊಂಡನಳ್ಳಿ ಪಂಚಾಯತಿಗೆ ಸೇರಿದ ವೆಂಕಟಾಪುರದ ಮುನಿಯಪ್ಪ ಈತ ದಲಿತ ಜನಾಂಗಕ್ಕೆ ಸೇರಿದ ಕಡು ಬಡತನದಲ್ಲಿರುವಾತ. ಈತನಿಗೆ ಮನೆಯೇ ಕಟ್ಟಿಸಿಕೊಟ್ಟಿಲ್ಲ. ಮನೆ ಆಗಿದೆಯೆಂದು ಸುಳ್ಳು ದಾಖಲೆಗಳನ್ನು ಸೃಷ್ಟಿಸಿ, ಐದು ಸಾವಿರ ಮಾತ್ರ ನೀಡಿ ಉಳಿದ ಹಣವನ್ನು ಭ್ರಷ್ಟರು ನುಂಗಿ ನೀರು ಕುಡಿದಿದ್ದಾರೆ. ಇನ್ನೋರ್ವ ದಲಿತ ಜನಾಂಗದ ಮುನಿಯಪ್ಪ ಸ್ವಂತ ಹೆಂಚಿನ ಮನೆ ನನ್ನದಾಗುತ್ತದೆಂದು ಆಸೆಯಿಂದ ಓಡಾಡಿದ. ಕೊನೆಗೆ ಲಭಿಸಿದ್ದು ಮೂರು ಸಾವಿರ ಮಾತ್ರ. ಉಳಿದ 17 ಸಾವಿರ ಪಂಚಾಯತಿ ಅಧ್ಯಕ್ಷ, ಕಾರ್ಯದರ್ಶಿಗಳ ಹೊಟ್ಟೆ ಸೇರಿತು.

ಅಡಗಿರುವ ಭಾರೀ ಕುಳಗಳು

ಇಂತಹ ಹಗರಣಗಳು ದಿನಂಪ್ರತಿ ಒಂದರ ಹಿಂದೆ ಮತ್ತೊಂದು ತಗುಲಿಹಾಕಿಕೊಂಡು ಹೊರಬರುತ್ತಿವೆ. ಇತ್ತೀಚೆಗೆ ಜಿಲ್ಲಾ ಪಂಚಾಯತ್‌ನಿಂದ ನೇಮಕವಾದ ವಿಚಾರಣಾ ಅಧಿಕಾರಿ ಸಮೇತ ಹಳ್ಳಿಗೆ ಬಂದಾಗ ರಸ್ತೆ ಮಾಡದೇ ರಸ್ತೆಯ ಹೆಸರಿನಲ್ಲಿ ಸಾವಿರಾರು ರೂಪಾಯಿಯನ್ನು ಗುಳುಂ ಮಾಡಿದ್ದು ಹೊರಬಿತ್ತು. ಹೀಗೆ ಹಗರಣದ ಜಾಡು ಹಿಡಿದು ಝಾಡಿಸಿದಾಗ ಇನ್ನು ಸಾವಿರಾರು ಪ್ರಕರಣಗಳು ಉದುರಲಿವೆ. ಅದನ್ನು ಉದುರಿಸುವ ಎದೆಗಾರಿಕೆ ಅಧಿಕಾರಿಗಳಿಗೆ, ಜನಪ್ರತಿನಿಧಿಗಳಿಗೆ ಇರಬೇಕಷ್ಟೆ.

ಈಗ ವಿಚಾರಣೆ ಆಗುತ್ತಿರುವುದು ಕೇವಲ ಕಳೆದ ಐದು ವರುಷದ ಅವಧಿಯವು ಮಾತ್ರ ಎಂಬುದನ್ನು ಗಮನದಲ್ಲಿರಿಸಿ. ಅದೂ ಜನತಾದಳದ ಜೆ.ಹೆಚ್.ಪಟೇಲ್‌ರ ಸರ್ಕಾರದ ಅವಧಿಯಲ್ಲಿನವು. ಇಂತಹ ಆಶ್ರಯ ಸಮಿತಿಯ ಅಧ್ಯಕ್ಷರಾಗಿ ಶಾಸಕರೇ ಇದ್ದದ್ದು, ಇನ್ನೊಂದು ಮುಖ್ಯಅಂಶ. ಹೀಗಾಗಿ, **ಸರಿಯಾಗಿ ಶೋಧನೆಯಾದರೆ** ಹಲವಾರು ಭಾರಿಕುಳಗಳು **ಕರಾಳಮುಖಗಳು ದರ್ಶನವಾಗುತ್ತದೆ. ಕಾರ್ಯನಿರ್ವಾಹಕ ಅಧಿಕಾರಿಯಾಗಿ ಹಿಂದೆ ಮತ್ತು ಈಗಲೂಇರುವ ಸಿದ್ರಾಮಯ್ಯ ಭ್ರಷ್ಟಾತಿ ಭ್ರಷ್ಟನೆಂಬುದು ಜಗಜ್ಜಾಹೀರು.** ಕೆಳಗಿನ ಅಧಿಕಾರಿಗಳು ಮಾಡಿದ ಶಿಫಾರಸುಗಳಿಗೆ ಅಂತಿಮ ಅಂಗೀಕಾರ ನೀಡಬೇಕಾದವರು ಇದೆ EO. ಹೀಗಾಗಿ ಈತನ ಮೇಲೂ ಕ್ರಮ ಜರುಗಿಸಲೇಬೇಕು. ಇಂತಹ ಭ್ರಷ್ಟರನ್ನು ಬಚಾವು ಮಾಡಲು ಕೆಲ ಕಾಂಗ್ರೆಸ್, ದಳದಮುಖಂಡರು ಯತ್ನಿಸುತ್ತಿರುವುದು ನಾಚಿಕೆಗೇಡಿನ ಸಂಗತಿ. ಇವರಿಗೂ ಅದರಲ್ಲಿ ಪಾಲಿದೆಯೇ?

ಅಂತೂ ಇಲ್ಲಿಯುವರೆಗೂ ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಪೋಲೀಸ್ ಇಲಾಖೆ ಪಕ್ಷಪಾತವಿಲ್ಲದೇ ಕ್ರಮ ಜರುಗಿಸಲು ಮುಂದಾಗುತ್ತಿದ್ದಾರೆ. ಆದರೆ ಕೃಷ್ಣ ಸರ್ಕಾರದ ಉನ್ನತ ವಲಯದಿಂದ ಇವರ ಮೇಲೆ ಒತ್ತಡ ಹಾಕುವ ಯತ್ನಗಳು ನಡೆದಿವೆ.

ಒತ್ತಡ, ಅಪಪ್ರಚಾರಗಳಿಗೆ ಧಿಕ್ಕಾರ

ಈ ಸ್ಥಿತಿಯಲ್ಲಿ ಕರ್ನಾಟಕ ಪ್ರಾಂತ ರೈತ ಸಂಘ ಒಟ್ಟು ಸಮಸ್ಯೆ ಮತ್ತು ರಾಜಿ ಇಲ್ಲದೆ ಹೋರಾಟಕ್ಕೆ ಇಳಿದಿದೆ. ಒಡ್ಡಿದ ಹಲವು ಆಮಿಷಗಳನ್ನು ಧಿಕ್ಕರಿಸಿ ನಿಂತಿದೆ. ಇದರಿಂದ ಕಂಗಾಲಾಗಿ, ಹತಾಶರಾದ 'ಭ್ರಷ್ಟರ ಕೂಟ' ರೈತ ಸಂಘ ಹಾಗೂ ಮುಖಂಡರರಾದ ಮನೋಹರ್, ಮಾಜಿ ಶಾಸಕ ಸ್ವಾತಂತ್ರ ಹೋರಾಟಗಾರ ಸೂ.ರಂ. ರಾಮಯ್ಯ ಮತ್ತು ಪ್ರಗತಿಪರ ವಕೀಲರಾದ ಹರೀಂದ್ರರವರ ಮೇಲೆ ಅಪಪ್ರಚಾರದ ಕರಪತ್ರವನ್ನು ಹಾಕಿ ತಮ್ಮ ಮಾನ ತಾವೇ ಕಳೆದುಕೊಳ್ಳುತ್ತಿದೆ. ಈ ಹೋರಾಟವನ್ನು ಇನ್ನೂ ತೀವ್ರಗೊಳಿಸಲು ನಿರ್ಧರಿಸಿರುವ ರೈತ ಸಂಘವು ತಾಲ್ಲೂಕು ಮಟ್ಟದ ಸಮಾವೇಶವನ್ನು ನಡೆಸಿ ಹೋರಾಟವನ್ನು ವಿಶಾಲಗೊಳಿಸಲು ಮುಂದಾಗಿದೆ.

ರಾಜಕೀಯ ಚಳುವಳಿ ಮತ್ತು ಜನಾಂದೋಲನ ವಿಸ್ತರಣೆಗೆ ಆದ್ಯತೆ ಗುರುತಿಸಿದ ಸಮ್ಮೇಳನ

ಸಿಪಿಐ(ಎಂ) 17ನೇ ಕುಂದಾಪುರ ತಾಲೂಕು ಪ್ರತಿನಿಧಿ ಸಮ್ಮೇಳನವು ಡಿಸೆಂಬರ್‌ರಂದು ಕುಂದಾಪುರ 'ಅಕ್ಷತಾ ಹಾಲ್'' ನಲ್ಲಿ ನಡೆಯಿತು. ಬಹಿರಂಗ ಅಧಿವೇಶನವು ಮರುದಿವಸ ನಡೆಯಿತು.

ತಾಲೂಕು ಕಾರ್ಯದರ್ಶಿಯುವರಾದ ಕೆ. ಶಂಕರವರು 16ನೇ ಸಮ್ಮೇಳನದಿಂದ ಈ ವರೆಗಿನ ಅವಧಿಯಲ್ಲಿ ಪಕ್ಷ ಮತ್ತು ಸಾಮೂಹಿಕ ಸಂಘಟನೆ ಬೆಳೆದು ಬಂದ ಬಗ್ಗೆ, ಪಕ್ಷಗಳ ಬಲಾಬಲ ಆರ್ಥಿಕ ಸಾಮಾಜಿಕ ಸ್ಥಿತಿಗಳ ಕುರಿತು ಕೋಮುವಾದ ವಿರುದ್ಧ ಹೋರಾಟ ಸಂಘಟನೆ ಮತ್ತು ಹೋರಾಟ ಪುರಸಭಾ ಆಡಳಿತ ಇತ್ತೀಚಿಗಿನ ಚುನಾವಣೆ ಇತ್ಯಾದಿ ವಿಶ್ಲೇಷಣೆಯನ್ನು ವರದಿಯಲ್ಲಿ ಮಂಡಿಸಿದರು.

ಕುಂದಾಪುರ ತಾಲೂಕಿನಲ್ಲಿ 101 ಗ್ರಾಮಗಳಿದ್ದು 3 ಹೋಬಳಿಗಳು 1 ಪುರಸಭೆ ಹಾಗೂ 2 ವಿಧಾನ ಸಭಾ ಕ್ಷೇತ್ರಗಳಿವೆ. ಬೈಂದೂರು ವಿಧಾನಸಭಾ ಕ್ಷೇತ್ರದ ಸದಸ್ಯರು ಕಾಂಗ್ರೆಸ್ ಪಕ್ಷದವರಾಗಿದ್ದಾರೆ ಹಾಗೂ ಕುಂದಾಪುರ ವಿಧಾನಸಭಾ ಕ್ಷೇತ್ರದ ಸದಸ್ಯರು ಬಿಜೆಪಿ ಪಕ್ಷದವರಾಗಿದ್ದಾರೆ. ಲೋಕಸಭಾ ಸದಸ್ಯರು ಕಾಂಗ್ರೆಸ್ ಪಕ್ಷದವರಾಗಿದ್ದಾರೆ. ಈ ಹಿಂದಿನ ಚುನಾವಣೆಯಲ್ಲಿ ಲೋಕಸಭಾಸದಸ್ಯರು ಬಿಜೆಪಿ ಪಕ್ಷದವರಾಗಿದ್ದರು.

ಕಾಂಗ್ರೆಸ್ ಪಕ್ಷ ಮೊದಲನೆಯದಾಗಿ, ಬಿಜೆಪಿ ಎರಡನೆಯ ಪಕ್ಷವಾಗಿದ್ದು, ಸಿಪಿಐ(ಎಂ) ಮೂರನೆಯದ್ದಾಗಿದೆ. ಜನತಾದಳ ತೀರಾ ದುರ್ಬಲವಾಗಿದೆ. ಪುರಸಭಾ ವ್ಯಾಪ್ತಿಯಲ್ಲಿ ಸಿಪಿಐ(ಎಂ) ಎರಡನೆಯ ಪಕ್ಷವಾಗಿದೆ. ಸಿಪಿಐ(ಎಂ) ಪಕ್ಷಕ್ಕೆ ಮುಂದಿನ ದಿನಗಳಲ್ಲಿ ಬೆಳೆಯುವುದಕ್ಕೆ ಅವಕಾಶಗಳಿವೆ. ಪಕ್ಷ ಮತ್ತು ಸಾಮೂಹಿಕ ಸಂಘಟನೆಗಳು ಕಳೆದ 4 ವರ್ಷಗಳ ಅವಧಿಯಲ್ಲಿ ನಿರ್ಣಾಯಕವಾಗಿ ಬೆಳೆದಿದೆ ಅನ್ನುವುದು ಕಂಡುಬಂದಿದೆ.

ಕೋಮುವಾದದ ವಿರುದ್ಧ ಹೋರಾಟ

ಕೋಮುವಾದದ ವಿರುದ್ಧ ಹಲವಾರು ಬಾರಿ ನಡೆಸಿದ ಚಳುವಳಿ ಹಾಗೂ ಡಿವೈಎಫ್‌ಐ ಮತ್ತು ಸಮುದಾಯದಂತಹ ಸಂಘಟನೆಗಳು ಜಂಟಿಯಾಗಿ ನಡೆಸಿದ ವಿಚಾರ ಸಂಕಿರಣ, ಪ್ರಚಾರ, ರ್‍ಯಾಲಿ ಹಾಗೂ ಸಾರ್ವಜನಿಕ ಸಭೆಗಳು ಸ್ವಲ್ಪ ಪರಿಣಾಮವಾಗಿದೆ. ಸಿಪಿಐ(ಎಂ) ಪಕ್ಷವು ಕೋಮುವಾದದ ವಿರುದ್ಧ ನಡೆಸಿದ ಪ್ರಚಾರ - ಜಾಥಾಗಳಿಂದ ಪರಿಣಾಮವಾಗಿದ್ದು, ಬಿಜೆಪಿಗೆ ಹಿನ್ನಡೆಯಾಯಿತು. ಇದರ ಹೆಚ್ಚಿನ ಲಾಭ ಕಾಂಗ್ರೆಸ್ ಪಕ್ಷ ಗೆಲ್ಲಲು ಕಾರಣವಾಯಿತು. ಪಕ್ಷದ ತೀರ್ಮಾನದಂತೆ ಬಿಜೆಪಿಯನ್ನು ಸೋಲಿಸಲು ಸಿಪಿಐ(ಎಂ) ಪಕ್ಷ ಮತ್ತು ಸಾಮೂಹಿಕ ಸಂಘಟನೆಗಳ ಸದಸ್ಯರು ಶ್ರಮಿಸಿರುತ್ತಾರೆ. ಇತ್ತೀಚಿಗಿನ ರಾಜಕೀಯ ಪರಿಸ್ಥಿತಿಯಲ್ಲಿ ಬಿಜೆಪಿಯ ಕೋಮುವಾದದ ವಿರುದ್ಧ ಹಾಗೂ ಕಾಂಗ್ರೆಸ್ಸಿನ ದುರಾಡಳಿತ ಮತ್ತು ಸರ್ವಾಧಿಕಾರದ ವಿರುದ್ಧ ಕೂಡಾ ಹೋರಾಡುವುದು ಅನಿವಾರ್ಯವಾಗಿದೆ. ತಾಲೂಕು ಮತ್ತು ಜಿಲ್ಲಾ ಪಂಚಾಯತ್ ಹಾಗೂ ಪುರಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಮತ್ತು ಬಿಜೆಪಿ ವಿರುದ್ಧ ಸಿಪಿಐ(ಎಂ) ಅಭ್ಯರ್ಥಿಗಳು ಸ್ಪರ್ಧಿಸಿ ನಿರ್ಣಯಕ ಮತಗಳನ್ನು ಪಡೆಯಲಾಯಿತು.

ರಾಜಕೀಯ ಬಲ

ಪಕ್ಷದ ಸದಸ್ಯರ ಸಂಖ್ಯೆ 672ಕ್ಕೆ ಏರಿದೆ. ಸಾಮೂಹಿಕ ಸಂಘಟನೆಗಳ ಸದಸ್ಯರ ಸಂಖ್ಯೆಯಲ್ಲಿ ಹೆಚ್ಚಳವಾಗಿವೆ. ವಿದ್ಯಾರ್ಥಿ ಮತ್ತು ಯುವಜನ ಸಂಘಟನೆಗಳ ಸದಸ್ಯರ ಸಂಖ್ಯೆ ಈ ಹಿಂದಿಗಿಂತ ಹೆಚ್ಚಾಗಿದ್ದು ಘಟಕಗಳ ಸಂಖ್ಯೆ 7 ರಿಂದ 15ಕ್ಕೆ ಏರಿದೆ. ಚಟುವಟಿಕೆಗಳು, ಸಂಘಟನೆ ಮತ್ತು ಹೋರಾಟಗಳು ಬೆಳೆಯುತ್ತಿವೆ.

ಗ್ರಾಮ ಪಂಚಾಯತ್ ಚುನಾವಣೆಯಲ್ಲಿ 82 ಸ್ಥಾನಕ್ಕೆ ಸ್ಪರ್ಧಿಸಿ 26 ಸ್ಥಾನಗಳಲ್ಲಿ ಜಯಗಳಿಸಲಾಗಿದೆ. 3 ಪಂಚಾಯತಿಗಳಲ್ಲಿ ಪಕ್ಷದ ಬೆಂಬಲಿಗರೇ ಅಧ್ಯಕ್ಷರು. ಬಳ್ಕೂರು ಪಂಚಾಯತಿನಲ್ಲಿ ಬಹುಮತ ಲಭಿಸಿ ಅಧ್ಯಕ್ಷರು ಮತ್ತು ಉಪಾಧ್ಯಕ್ಷರು ನಮ್ಮದಾಗಿದ್ದಾರೆ. ಕೃಷಿ ವ್ಯವಸಾಯ ಸಹಕಾರಿ ಬ್ಯಾಂಕುಗಳಲ್ಲಿ ನಗರದ ಅಭಿವೃದ್ಧಿಯಾಗಿದೆ, ಭ್ರಷ್ಟಾಚಾರ ರಹಿತ ಕೆಲಸವಾಗಿದೆ. ಆದರೆ ಜನಸಾಮಾನ್ಯರ ಮಧ್ಯೆ ಸಂಪರ್ಕ ವಾರ್ಡ್‌ಗಳಲ್ಲಿ ಸ್ಥಳೀಯರ ಅಭಿಪ್ರಾಯ ಸಂಗ್ರಹಿಸದೇ ಸಾಧನೆಗಳ ಬಗ್ಗೆ ವಿವರಿಸದೇ ಪಕ್ಷ ಮತ್ತು ಸಾಮೂಹಿಕ ಸಂಘಟನೆಗಳಿಗೆ ಕೊಟ್ಟ ಆದ್ಯತೆ ಕಡಿಮೆಯಾಗಿ ಹಿನ್ನಡೆಯಾಗಿದೆ. ಇವುಗಳನ್ನೆಲ್ಲಾ ಸರಿಪಡಿಸಿದರೆ ಪುನಃ ಜನಸಾಮಾನ್ಯರ ವಿಶ್ವಾಸಗಳಿಸಲು ಸಾಧ್ಯ. ಜನ ಬೆಂಬಲವಿದೆ. ಅದನ್ನು ಸರಿಯಾಗಿ ತಂತ್ರಬದ್ಧವಾಗಿ ಉಪಯೋಗಿಸಲು ಕಾರ್ಯಕ್ರಮಗಳನ್ನು ರೂಪಿಸಬೇಕಾಗಿದೆ. ಪಕ್ಷ ಮತ್ತು ಸಾಮೂಹಿಕ ಸಂಘಟನೆಗಳನ್ನು ಕಟ್ಟಿ ಬೆಳೆಯಿಸಲು ಹೆಚ್ಚಿನ ಅವಕಾಶಗಳಿವೆ.

ವ್ಯವಸ್ಥೆಯ ಸಹಕಾರಿ ಬ್ಯಾಂಕಿನಲ್ಲಿ 5 ಮಂದಿ ನಿರ್ದೇಶಕರಿದ್ದು, ಅಧ್ಯಕ್ಷರು ಮತ್ತು ಉಪಾಧ್ಯಕ್ಷರು ನಮ್ಮವರಾಗಿದ್ದಾರೆ. ಪಕ್ಷದ ಅಭ್ಯರ್ಥಿಗಳು ಕಡಿಮೆ ಮತಗಳ ಅಂತರದಿಂದ ಕೆಲವು ಸ್ಥಾನಗಳನ್ನು ಕಳಕೊಳ್ಳಬೇಕಾಗಿ ಬಂತು. ಇದೇ ಶಕ್ತಿಯಾಗಿ ಬೆಳೆಯುವ ಅವಕಾಶಗಳು ಹೆಚ್ಚು ಇವೆ. ಪರಿಸ್ಥಿತಿಯನ್ನು ಉಪಯೋಗಿಸಿಕೊಂಡು ಒಂದನೇ ಶಕ್ತಿಯಾಗಲು ಮುಂದಿನ ದಿನಗಳಲ್ಲಿ ತಂತ್ರಗಳನ್ನು ರೂಪಿಸಬೇಕಾಗಿದೆ,

ಪುರಸಭಾ ಚುನಾವಣೆ.

ಈ ಹಿಂದೆ ಪುರಸಭೆಯಲ್ಲಿ ಸಿಪಿಐ(ಎಂ)ಗೆ 9 ಸ್ಥಾನಗಳಿದ್ದು, ಜನತಾದಳದೊಂದಿಗೆ ಚುನಾವಣಾ ಹೊಂದಾಣಿಕೆಯಲ್ಲಿ ಅವರಿಗೂ 6 ಸ್ಥಾನಗಳಿದ್ದು ಜಂಟಿ ಆಡಳಿತಾವಧಿಯಲ್ಲಿ ನಗರದ ಅಭಿವೃದ್ಧಿ ಹಾಗೂ ಭ್ರಷ್ಟಾಚಾರರಹಿತ ಕಾಮಗಾರಿ ಮತ್ತು ಉತ್ತಮ ಗಣಮಟ್ಟದ್ದಾಗಿತ್ತು. ಜನ ಮೆಚ್ಚುಗೆಗಳಿಸಿ, ಸರಕಾರದ ಮೈಸೂರು ವಿಭಾಗದ ಪ್ರಶಸ್ತಿ ಕೂಡಾ ಸಿಕ್ಕಿದ್ದು ಇದೆ.

ಮೊದಲು ವಿ. ನರಸಿಂಹನವರು ಅಧ್ಯಕ್ಷರಾಗಿದ್ದು, ಅನಂತರ ಕಾಂ। ಗುಣರತ್ನ ಅಧ್ಯಕ್ಷರಾದರು.

ನವೆಂಬರ್ 11-2001ದಂದು ಪುರಸಭಾ ಚುನಾವಣೆ ನಡೆಯಿತು. ಸಾಧನೆಗೆ ಮೆಚ್ಚಿ ಸಿಪಿಐ(ಎಂ) ಸ್ಪರ್ಧಿಸಿದ 12 ಸ್ಥಾನಗಳಲ್ಲಿ ಹೆಚ್ಚಿನ ಸ್ಥಾನಗಳಿಸುವ ನಿರೀಕ್ಷೆ ಇತ್ತು. ಕಾಂಗ್ರೆಸ್ ಪಕ್ಷ ರಾಜ್ಯದ ಆಡಳಿತ ಪಕ್ಷವಾಗಿದ್ದು, ಅಪಪ್ರಚಾರ ಹೆಂಡ ಮತ್ತು ಹಣದೊಂದಿಗೆ ಜನಸಾಮಾನ್ಯರ ಮಧ್ಯೆ ಹೊಸಭರವಸೆ ಹಾಗೂ ಆಮಿಷಗಳೊಂದಿಗೆ ಭ್ರಮೆಗೆ ಒಳಪಡಿಸಲಾಯಿತು. ಜನತಾದಳ ಪಕ್ಷ ತೀರಾ ದುರ್ಬಲವಾಗಿದ್ದು ಸ್ಪರ್ಧಿಸಿದ ಎಲ್ಲಾ ಸ್ಥಾನಗಳನ್ನು ಕಳಕೊಳ್ಳುವಂತಾಯಿತು. ಇಂತಹ ಪರಿಸ್ಥಿತಿಯಲ್ಲಿ ಸಿಪಿಐ(ಎಂ) 6 ಸ್ಥಾನಗಳಲ್ಲಿ ಜಯಗಳಿಸಬೇಕಾಗಿ ಬಂತು. ಈ ಹಿಂದಿನ 3 ಸ್ಥಾನಗಳನ್ನು ಕಳೆಕೊಂಡು ಹಿನ್ನಡೆಯಾಗಿದೆ.

ಸಿಪಿಐ(ಎಂ) ಪಕ್ಷ ಮತ್ತು ಸಾಮೂಹಿಕ ಸಂಘಟನೆಗಳು ಬೆಳೆದಂತೆ ತಾಲೂಕಿನಾದ್ಯಂತ ರೈತ - ಕೃಷಿ ಕೂಲಿಕಾರರನ್ನು ಸಂಘಟಿಸಲು ಕಾರ್ಯಕ್ರಮಗಳನ್ನು ಹಾಕಲಾಗಿದೆ. ಸುಮಾರು 12 ಗ್ರಾಮಗಳಲ್ಲಿ ನ್ಯಾಯ ಸಮಿತಿಗಳಿವೆ. ಇನ್ನು ಕೆಲವು ಗ್ರಾಮಗಳಲ್ಲಿ ಸಂಪರ್ಕಗಳಿವೆ. ಚಟುವಟಿಕೆಗಳು ನಡೆಯುತ್ತಿವೆ. ರೈತ ಕೃಷಿಕೂಲಿಗಾರರ ಮಧ್ಯೆ ಹಲವಾರು ಸಮಸ್ಯೆಗಳಿದ್ದರೂ ಅವರು ಸಂಘಟನೆಯಾಗದೇ, ಅವರನ್ನು ಸಂಘಟಿಸಲು ಕಷ್ಟವಾಗಿ ನಿಧಾನವಾಗಿ ಚಟುವಟಿಕೆಗಳು ನಡೆಯುತ್ತಿವೆ.

ಬೆಳೆದ ಹೋರಾಟಗಳು

ಅಕ್ರಮ ಭೂಮಿ ಸಕ್ರಮಗೊಳಿಸಲು, ಟ್ರಿಬ್ಯೂನಲ್‌ಗಳಿಗೆ ಇನ್ನು ಅರ್ಜಿ ಸಲ್ಲಿಸಲು ಬಾಕಿ ಇದ್ದವರ ಅರ್ಜಿ ಸಲ್ಲಿಸಲು, ವಿದ್ಯುತ್ ದರ ಹೆಚ್ಚಳದ ವಿರುದ್ಧ, ಮೀಟರ್ ಅಳವಡಿಸಲು ವಿರೋಧಿಸಿ, ರೈತರ ಬೆಳೆಗಳಿಗೆ ನ್ಯಾಯವಾದ ಬೆಲೆ ಸಿಗುವಂತಾಗಲು ಹಲವಾರು ಬಾರಿ ಹೋರಾಟಗಳು ನಡೆದಿವೆ. ಸಾಲದ ಹೊರೆತಾಳಲಾರದೆ ತಾಲೂಕಿನ ಎರಡು ಗ್ರಾಮಗಳಲ್ಲಿ ರೈತರ ಆತ್ಮಹತ್ಯೆ ಘಟನೆಗಳು ನಡೆದಿವೆ. ಅಂತಹ ಘಟನೆಗಳು ಹೆಚ್ಚಾಗುವ ನಿರೀಕ್ಷೆ ಇದೆ.

ವಾರಾಹಿ ವಿದ್ಯುತ್ ಯೋಜನೆ ಪೂರ್ಣಗೊಂಡಂತೆಯೇ ವಾರಾಹಿ ನೀರಾವರಿ ಯೋಜನೆಯನ್ನು ಪೂರ್ಣ ಜಾರಿಗೊಳಿಸಬೇಕಾಗಿ ಕೇಂದ್ರ ಮತ್ತು ರಾಜ್ಯ ಸರಕಾರವನ್ನು ಒತ್ತಾಯಿಸಿ ರೈತ ಸಂಘ ಸಿಪಿಐ(ಎಂ) 3-4 ಬಾರಿ ಚಳುವಳಿ ನಡೆಸಿಧೆ. ಸರಕಾರದ ವಿಳಂಬ ನೀತಿಯುನ್ನು ವಿರೋಧಿಸಿ ಪ್ರಚಾರ ಸಭೆ ಗಳನ್ನು ನಡೆಸಲಾಗಿದೆ. ಕುಂದಾಪುರ ಮತ್ತು ಉಡುಪಿಯು ಹೆಚ್ಚಿನ ಗ್ರಾಮಗಳಲ್ಲಿ ರೈತರ ಭೂಮಿಗೆ ನೀರು ಹಾಗೂ ಕುಡಿಯುವ ನೀರು ಅಭಾವ ಇದ್ದಲ್ಲಿ, ಅಲ್ಲಿಗೆ ಸರಬರಾಜು ಮಾಡಲು ಈ ನೀರಾವರಿ ಯೋಜನೆ ತುರ್ತಾಗಿ ಪೂರ್ಣಗೊಳಿಸಬೇಕಾಗಿದೆ. ಕುಂದಾಪುರ ಪುರಸಭಾ ವ್ಯಾಪ್ತಿಗೆ ಶುದ್ಧ ನೀರು ಮತ್ತು ಒಳಚರಂಡಿ ವ್ಯವಸ್ಥೆಗೆ ನೀರಿನ ಸರಬರಾಜು ತೀರಾ ಅವಶ್ಯಕವಿದೆ.

ಕುಂದಾಪುರ ತಾಲೂಕಿನಲ್ಲಿ ಹಂಚು, ಬೀಡಿ ಮತ್ತು ಗೋಡಂಬಿ ಉದ್ಯಮಗಳಿವೆ. ಗೋಡಂಬಿ ಮತ್ತು ಕಟ್ಟಿಗೆ ಮಿಲ್‌ಗಳು ಆರ್ಥಿಕ ತೊಂದರೆಯಿಂದ ಮುಚ್ಚಲ್ಪಡುತ್ತಿವೆ. ಸಣ್ಣ ಹೆಂಚು ಉದ್ಯಮ ಸಹ ಸಮಸ್ಯೆ ಎದುರಿಸುತ್ತಿದೆ. ಕೈಗಾರಿಕೆಗಳು ಆರಂಭಿಸಿ, ಮುಚ್ಚುವ ಪರಿಸ್ಥಿತಿ ಇದೆ. ಕೃಷಿಕೂಲಿಗಾರರಿಗೆ ವಾರದಲ್ಲಿ ಎಲ್ಲಾ ದಿವಸಗಳು ಕೆಲಸವಿಲ್ಲ. ಕೂಲಿ ಬಹಳ ಕಡಿಮೆಯಾಗಿದ್ದು ವಾರದಲ್ಲಿ 3-4 ದಿವಸ ಕೆಲಸ. ಮೀನುಗಾರರು ಸಾವಿರಗಟ್ಟಲೆಯಲ್ಲಿ ಇದ್ದಾರೆ. ಅವರಿಗೂ ಮೀನು ಸರಿಯಾಗಿ ಸಿಗದೇ ಕಷ್ಟದಲ್ಲಿದ್ದಾರೆ. ರೈತರ ಸ್ಥಿತಿ ಕೂಡಾ ಕಂಗಾಲಾಗಿದ್ದು, ಒಟ್ಟಾರೆ ತಾಲೂಕಿನ ಆರ್ಥಿಕ ಸ್ಥಿತಿ ತೀರಾ ಹದಗೆಟ್ಟಿದೆ. ಆಳುವ ವರ್ಗದ ಮೇಲೆ ಅತೃಪ್ತಿ ಮೂಡುತ್ತಿದೆ. ಅದನ್ನು ಹೆಚ್ಚು ಮಾಡುವ ನಿಟ್ಟಿನಲ್ಲಿ ಸಂಘಟಿತ ಹೋರಾಟ ರೂಪಿಸಬೇಕಾಗಿದೆ.

ಮೀನುಗಾರರ ಮಧ್ಯೆ ಸಂಘಟನೆ ಮಾಡಬೇಕೆಂಬ ನಿರ್ಧಾರ ಕೈಗೊಂಡು, ಈಗಾಗಲೇ ಕುಂದಾಪುರದಲ್ಲಿ ಮೀನುಗಾರರ ಸಂಘಟನೆ ಆರಂಭವಾಗಿದೆ. ಸುಮಾರು 400 ಮಂದಿ ಸದಸ್ಯರಿದ್ದಾರೆ.

ಕರ್ನಾಟಕ ರಾಜ್ಯದ ಕರಾವಳಿ ಮೀನುಗಾರರ ಸಂಘವೆಂಬ ಹೆಸರಿನಲ್ಲಿ 2002 ನೇ ಇಸವಿಯ ಆರಂಭದಲ್ಲಿ ಸಂಘವನ್ನು ರಚಿಸಿಕೊಂಡು ನೊಂದಾವಣಿ ಮಾಡಿಸಬೇಕೆಂಬ ಸೂಚನೆ ಕೂಡಾ ಇದೆ. ಮೊದಲು ಕಾಂಗ್ರೆಸ್ಸಿನ ಬೆಂಬಲಿಗರಾಗಿದ್ದರು. ಅನಂತರ ಕಾಂಗ್ರೆಸ್, ಬಿಜೆಪಿ ಮತ್ತು ಜನತಾದಳಗಳಿಂದ ಭ್ರಮನಿರಸನಕ್ಕೆ ಒಳಗಾಗಿ ಇತ್ತೀಚೆಗೆ ಪ್ರತ್ಯೇಕ ಸಂಘಟನೆ ಮಾಡುವ ಉದ್ದೇಶದಿಂದ ಪ್ರಯತ್ನಿಸಲಾಗುತ್ತಿದೆ. ಮೀನುಗಾರರಲ್ಲಿ ಲೋಡ್, ಅನ್ ಲೋಡ್ ವಿಭಾಗ, ಫಿಸ್ಸಿಂಗ್ ಲೋಡ್ ವಿಭಾಗ ಹಾಗೂ ಪರ್ ಪೀಸ್ ಲೋಡ್‌ನಲ್ಲಿ ಕೆಲಸ ಮಾಡುವವರು ಅಂತ 3 ವಿಭಾಗಗಳಿವೆ. ಹಾಗೆಯೇ ಹಳೆ ಪರಂಪರಾಗತ ಮೀನು ಹಿಡಿಯುವ ವಿಧಾನಗಳಾದ ಮಾರಿಬಲೆ, ದೋಣಿ, ರಂಪಣಿ ಇತ್ಯಾದಿ ವಿಭಾಗಗಳು ಕಡಿಮೆಯಾಗುತ್ತಿದೆ. ಮೀನು ವ್ಯಾಪಾರಿಗಳಿಂದ ಶ್ರೀಮಂತರಿಂದ ಬೋಟ್ ಮಾಲಕರಿಂದ ನಿರಂತರ ಶೋಷಣೆಗೆ ಮೀನುಗಾರರು ಒಳಗಾಗಿದ್ದಾರೆ. ಸ್ಥಳೀಯ ಸಮಸ್ಯೆಗಳಿಗೆ ಪರಿಹಾರ ಹುಡುಕಲು ಹೋರಾಟ ನಡೆಸಬೇಕಾಗಿದೆ. ◆



ಬಹಿರಂಗಸಭೆಯಲ್ಲಿ ವಿ.ಜೆ.ಕೆ. ನಾಯರ್, ಬಿ. ಮಾಧವ, ಕೆ. ಶಂಕರ್, ಮಹಾಬಲ, ಸಿ. ನಾರಾಯಣ ಮುಂತಾದವರು

ವಿ.ವಿ. ಚುನಾವಣೆ...

ಪುಟ 5 ರಿಂದ

ವಿದ್ಯಾರ್ಥಿ ಸಂಘದ ಅಧ್ಯಕ್ಷೆಯಾಗಿ ಆಯ್ಕೆಯಾಗಿದ್ದಾರೆ. ಕಳೆದ ಬಾರಿ ಇವರು ಉಪಾಧ್ಯಕ್ಷರಾಗಿದ್ದರು. ಪ್ರಧಾನ ಕಾರ್ಯದರ್ಶಿ-ಜಂಟಿ ಕಾರ್ಯದರ್ಶಿ ಸ್ಥಾನವನ್ನು ಎಸ್ಸೆಫ್ಫೈ-ಎಐಎಸ್‌ಎಫ್ ಹಂಚಿಕೊಂಡಿದ್ದವು. ಈ ಬಾರಿ ಈ ನಾಲ್ಕೂ ಪದಾಧಿಕಾರಿಗಳ ಸ್ಥಾನವನ್ನು ಎಸ್ಸೆಫ್ಫೈ-ಎಐಎಸ್‌ಎಫ್ ಕೂಟ ಗೆದ್ದಿದೆ. ಎಸ್‌ಎಫ್‌ಐನ ರೋಹಿಲ್ ಉಪಾಧ್ಯಕ್ಷರಾಗಿ, ಪಿ.ಎಂ.ಸುಧಾಕರ್ ಜಂಟಿ ಕಾರ್ಯದರ್ಶಿಯಾಗಿ, ಎಐಎಸ್‌ಎಫ್ ನ ಗಿನುಜಚಾರ್ಯ ರವರು ಪ್ರಧಾನ ಕಾರ್ಯದರ್ಶಿಯಾಗಿ ಆಯ್ಕೆಯಾಗಿದ್ದಾರೆ.


ಎಲ್ಲಾ ಪದಾಧಿಕಾರಿಗಳ ಸ್ಥಾನವನ್ನು ಎಬಿವಿಪಿಯ ಅಭ್ಯರ್ಥಿಗಳ ವಿರುದ್ಧ ದೊಡ್ಡ ಅಂತರದಲ್ಲಿ ಗೆಲ್ಲುವುದು ಸಾಧ್ಯವಾಗಿದೆ. ವಿದ್ಯಾರ್ಥಿ ಕೌನ್ಸಿಲ್‌ನಲ್ಲಿನ 26 ಸ್ಥಾನಗಳಲ್ಲಿ ಎಸ್‌ಎಫ್‌ಐ-ಎಐಎಸ್‌ಎಫ್ ಒಕ್ಕೂಟ 18 ರಲ್ಲಿ ಗೆಲುವು ಸಾಧಿಸಿದೆ. ಸಮಾಜ ವಿಜ್ಞಾನ ವಿಭಾಗದ ಎಲ್ಲಾ 5 ಸ್ಥಾನಗಳಲ್ಲಿ, ಭಾಷಾ ವಿಜ್ಞಾನದ ಎಲ್ಲಾ 5 ಸ್ಥಾನಗಳಲ್ಲಿ ಅಂತರ್ರಾಷ್ಟ್ರೀಯ ಅಧ್ಯಯನ ವಿಭಾಗದ 5 ರಲ್ಲಿ 3 ಸ್ಥಾನಗಳಲ್ಲಿ ಕಂಪ್ಯೂಟರ್ ವಿಜ್ಞಾನದ ವಿಭಾಗದಲ್ಲಿ 3 ರಲ್ಲಿ 2, ಜೀವ ವಿಜ್ಞಾನದ ಎಲ್ಲಾ ಮೂರು ಸ್ಥಾನಗಳನ್ನು ಒಕ್ಕೂಟ ಗೆದ್ದುಕೊಂಡಿದೆ. ಒಟ್ಟು ಚಲಾವಣೆಯಾದ 3154 ಮತಗಳಲ್ಲಿ ಶೇ 50 ಕ್ಕಿಂತ ಹೆಚ್ಚು ಅಂದರೆ 1,606 ಮತಗಳನ್ನು ಒಕ್ಕೂಟ ಪಡೆದಿದೆ. ಅಧ್ಯಕ್ಷ ಸ್ಥಾನದ ಎಬಿವಿಪಿ ಅಭ್ಯರ್ಥಿಯನ್ನು 589 ದಾಖಲೆ ಮತಗಳ ಅಂತರದಿಂದ ಬಗ್ಗು ಬಡಿಯಲಾಗಿದೆ.

ವಿದ್ಯಾರ್ಥಿಗಳು ದುರ್ಗಾಪೂಜೆಗೆ ಮತ ನೀಡುವರೋ? ರಂಜಾನ್‌ಗೋ ಎಂಬುದು ಎಬಿವಿಪಿಯ ಪ್ರಚಾರವಾಗಿತ್ತು!. ಇಂತಹ ಬೌದ್ಧಿಕ ದಿವಾಳಿತನವನ್ನು ತಿರಸ್ಕರಿಸಿದ ವಿದ್ಯಾರ್ಥಿಗಳು ಜಾತ್ಯಾತೀತ ನೀತಿಗೆ ಮತ ನೀಡಿದ್ದಾರೆ. ಇದು ಬಿಜೆಪಿ ನೇತೃತ್ವದ ಎನ್‌ಡಿಎ ಸರ್ಕಾರ, ಕೋಮುವಾದ, ಜಾಗತೀಕರಣ, ಖಾಸಗೀಕರಣಗಳ ಸ್ಪಷ್ಟ ತಿರಸ್ಕಾರವೂ ಹೌದು.

ರಾಮಕೃಷ್ಣ ಆರ್.

ಆಂಥ್ರಾಕ್ಸ್ ಭೀತಿಗೆ ತಲ್ಲಣಗೊಳ್ಳದವರಿಲ್ಲ. ಪತ್ರಿಕೆ, ಟಿ.ವಿ. ಮಾಧ್ಯಮಗಳು ಇದಕ್ಕೆ ಉಪ್ಪುಖಾರ ಹಾಕಿ ಬೇಕಾದಷ್ಟು ಉನ್ಮಾನದ ಸೃಷ್ಟಿಸಿವೆ. ಭಯೋತ್ಪಾದನೆಯ ವಿರುದ್ಧ ಹೋರಾಡುತ್ತೇನೆಂಬ ಅಮೆರಿಕಾ ಹಿಂದೆ ಜೈವಿಕ ಭಯೋತ್ಪಾದನೆಯ ಈ ಅಸ್ತ್ರ ತಯಾರಿಕೆಯ ನಿಷೇದಕ್ಕೆ ಸಹಿ ಮಾಡಿರಲಿಲ್ಲ. ಈಗ ಔಷಧಿಯ ತಯಾರಿಕೆಯ ಮೇಲೂ ಏಕಸ್ವಾಮ್ಯ ನಿಯಂತ್ರಣ ಸಾಧಿಸಲು ಅವರೇ ತಂದ ಪೇಟೆಂಟ್ ಕಾಯ್ದೆಯಿಂದಾಗಿ ಆಂಥ್ರಾಕ್ಸ್ ನಿರೋಧಕ ಔಷಧಿ ತಯಾರಿಸಲು ಅವರಿಗೆ ತೊಡಕಾಗಿರುವುದು ಒಂದು ವಿಪರ್ಯಾಸ! ತಾನೇ ನೇಯ್ದ ಬಲೆಗೆ ಸಿಕ್ಕಿಹಾಕಿಕೊಂಡ ಪಿಶಾಚಿ ಸ್ಥಿತಿ ಅಮೆರಿಕಾಕ್ಕೆ. ಕೆನಡಾದಂತಹ ದೇಶಗಳಲ್ಲಿ ಅದನ್ನು ಧಿಕ್ಕರಿಸುವ ಪ್ರಯತ್ನಗಳು ಸ್ವಾಗತಾರ್ಹ. ಈ ಕೊಂಚ ಹಿಂದೆ ಏಡ್ಸ್ ರೋಗ ನಿಯಂತ್ರಣದ ಔಷಧಿಯ ಪೇಟೆಂಟ್ ಅನ್ನು ದ. ಆಫ್ರಿಕಾ ಮುರಿದು ಪ್ರತಿಭಟಿಸಿತ್ತು. ಈ ಹಿನ್ನೆಲೆಗಳಿಂದ ಈಗ ಟ್ರಿಪ್ಸ್‌ಗೆ ಒಂದು ತಿದ್ದುಪಡಿ ತರಲಾಗಿದೆ. ತುಂಬಾ ಅನಿವಾರ್ಯ, ಅಗತ್ಯವೆನಿಸಿದರೆ ಅಂತಹ ಔಷದಿಗಳನ್ನು ಯಾವುದೇ ಒಂದು ದೇಶ ತುರ್ತಾಗಿ ತಯಾರಿಸಬಹುದು.

ಆಂಥ್ರಾಕ್ಸ್ ಭೂತ ಮತ್ತು ಪೇಟೆಂಟ್ ಪಿಶಾಚಿ



ಡಾ. ಪ್ರಕಾಶ್ ಸಿ.ರಾವ್

ಅಕ್ಟೋಬರ್ 5, 2001 ರಂದು ಅಮೆರಿಕಾದ ಫ್ಲೋರಿಡಾ ನಗರದ ಮಾಧ್ಯಮದ ಕಛೇರಿಯಲ್ಲಿ ಕಂಡು ಹಿಡಿಯಲಾದ ಆಂಥ್ರಾಕ್ಸ್ ರೋಗದ ಅಂಕುರ ಬೀಜ(Spores),ಈ ಶತಮಾನದ ಮೊದಲನೇ ಜೈವಿಕ ಭಯೋತ್ಪಾದನೆಯ ದಾಳಿಯನ್ನು ಸೂಚಿಸುತ್ತದೆ ಎಂಬುದನ್ನು ಸೆಪ್ಟೆಂಬರ್ 11 ರ ವಿಶ್ವವ್ಯಾಪಾರ ಕೇಂದ್ರದ ಮೇಲೆ ನಡೆದ ದುರ್ಘಟನೆಯ ಹಿನ್ನೆಲೆಯಲ್ಲಿ ಹೇಳಲಾಗುತ್ತಿದೆ. 20ನೇ ಶತಮಾನದಲ್ಲಿ ಆಂಥ್ರಾಕ್ಸ್‌ನ ಭಯೋತ್ಪಾದಕ ದಾಳಿಯಲ್ಲಿ ಒಬ್ಬನೇ ಅಮೇರಿಕನ್ನನು ಮೃತಪಟ್ಟಿದ್ದರೂ, ಜೈವಿಕ ಭಯೋತ್ಪಾದನೆಯನ್ನು (Biological Terror) ಅನೇಕ ಬಾರಿ 1972, 80, 86, 90, 94) ಪ್ರಯತ್ನಿಸಲಾಗಿದೆ. ಈ ಬಾರಿಯ ಆಂಥ್ರಾಕ್ಸ್ ಭಯೋತ್ಪಾದನಾ ಧಾಳಿ ಜನರಲ್ಲಿ ಭಯ, ಭೀತಿ ಮೂಡಿಸಿದೆ.

ಜೈವಿಕ ಯುದ್ಧದ ಭೀತಿ: ನಿಷೇದಕ್ಕೆ ಸಹಿ ಹಾಕದ ಅಮೆರಿಕಾ

ಜೈವಿಕ ಪದಾರ್ಥಗಳನ್ನು ಉಪಯೋಗಿಸಿ ಜೈವಿಕ ಯುದ್ಧದಲ್ಲಿ ತೊಡಗಲು ಹಲವಾರು ದೇಶಗಳು ಮುಂದಾಗುತ್ತಿರುವ ಸಮಯದಲ್ಲಿ ಹಲವಾರು ಸಂಘಟನೆಗಳು ಜೈವಿಕ ಭಯೋತ್ಪಾದನೆಯಿಂದ ಭೀತಿ ಹುಟ್ಟಿಸಲು ಮುಂದಾಗಿವೆ. ಜೈವಿಕ ತಂತ್ರಜ್ಞಾನದ ಸಂಶೋಧನೆಯಿಂದ ಅಮೆರಿಕ, ರಶಿಯಾ, ಇಂಗ್ಲೆಂಡ್, ಜಪಾನ್, ಫ್ರಾನ್ಸ್, ಜರ್ಮನಿಯಲ್ಲಿ ಈಗಾಗಲೇ ಜೈವಿಕ ಭಯೋತ್ಪಾದನೆಯ ಅಸ್ತ್ರವನ್ನು ತಯಾರಿಸಲಾಗಿದೆ. 1944 ರಲ್ಲಿ ಅಮೆರಿಕದ ರಾಷ್ಟ್ರಪತಿ ವಿನ್‌ಸ್ಟನ್ ಚರ್ಚಿಲ್, 5 ಲಕ್ಷ ಪೌಂಡ್ ಆಂಥ್ರಾಕ್ಸ್ ಅಂಕುರ ಬೀಜವನ್ನು ತಯಾರಿಸಿ ಯುದ್ಧದಲ್ಲಿ ಉಪಯೋಗಿಸಲು ಅನುಮತಿ ನೀಡಿದ್ದನು.

> ಆಂಥ್ರಾಕ್ಸ್ ರೋಗಭೀತಿ ಒಂದು ಭ್ರಮೆಯಲ್ಲ - ಆಂಥ್ರಾಕ್ಸ್ ರೋಗ ಹತೋಟಿಗೆ ವೈದ್ಯರಿಗೆ ತರಬೇತಿ, ಔಷಧಿಗಳು, ಲಸಿಕೆ, ಚಿಕಿತ್ಸಾ ವ್ಯವಸ್ಥೆ ಮುಂತಾದವುಗಳ ಅವಶ್ಯಕತೆ ಇದೆ. ಆದರೆ ಈ ಭಯ ಭೀತಿ ಉಂಟು ಮಾಡುವ ಭಯೋತ್ಪಾದನೆಗೆ ಕಾರಣವೇನು ಎಂಬುದನ್ನು ಗುರುತಿಸಿ ಸರಿಪಡಿಸುವುದು ಇನ್ನೂ ಹೆಚ್ಚು ಅಗತ್ಯವಾಗುತ್ತದೆ.

ಅಮೆರಿಕದ ಅಧ್ಯಕ್ಷ ನಿಕ್ಸನ್ ಜೈವಿಕ ಅಸ್ತ್ರದ ತಯಾರಿಕೆ ಹಾಗೂ ಉಪಯೋಗವನ್ನು ನಿಲ್ಲಿಸಲು ಪ್ರಯತ್ನಿಸಿದನು! ಅಂತರ್‌ರಾಷ್ಟ್ರೀಯ ಮಟ್ಟದಲ್ಲಿ 1972 ರಿಂದ ಜೈವಿಕ ಅಸ್ತ್ರದ ಉಪಯೋಗವನ್ನು ನಿಷೇಧಿಸಲಾಯಿತು. ಆದರೆ ಈ ನಿಷೇಧ ಕೇವಲ ಪೇಪರಿನಲ್ಲಿ ಮಾತ್ರ ಉಳಿದಿದೆ. ಸಂಶೋಧನೆಯ ಹೆಸರಿನಲ್ಲಿ ಈ ಅಸ್ತ್ರದ ತಯಾರಿಕೆ, ಅಸ್ತ್ರದ ಉಪಯೋಗವನ್ನು ತಡೆಯಲು ರಾಷ್ಟ್ರಗಳು ಪಾಲಿಸಬೇಕಾದ ಶಿಸ್ತು ಕ್ರಮದ ಚರ್ಚೆಯಲ್ಲಿ ಹಲವಾರು ದೇಶಗಳು ಪಾಲುಗೊಂಡವು ಹಾಗೂ ಸಹಿ ಹಾಕಿದವು. ಆದರೆ ಅಮೆರಿಕಾ ಈ ಚರ್ಚೆಯಲ್ಲಿ ಪಾಲುಗೊಳ್ಳಲಿಲ್ಲ. ಕಾಕತಾಳೀಯವಾಗಿ ಇದೇ ಅಕ್ಟೋಬರ್‌ನಲ್ಲಿ ಅಮೆರಿಕಾ ಜೈವಿಕ ಭಯೋತ್ಪಾದನೆಗೆ ಗುರಿಯಾಗಿರುವುದು ವಿಪರ್ಯಾಸದ ಸಂಗತಿ.

ಸುಲಭದ ಸಾಧನ?

ಭಯೋತ್ಪಾದನೆಯಲ್ಲಿ ರಾಸಾಯನಿಕ, ವಿಕಿರಣ ಹಾಗೂ ಅಣ್ವಸ್ತ್ರಗಳಿಗಿಂತ, ಜೈವಿಕ ಅಸ್ತ್ರಗಳು (Biological Weapons) ಹೆಚ್ಚು ಪರಿಣಾಮಕಾರಿಯಾಗಿವೆ. ಜೈವಿಕ ಅಸ್ತ್ರಗಳಲ್ಲಿ ಸೂಕ್ಷ್ಮಜೀವಿಗಳಾದ ಬ್ಯಾಕ್ಟೀರಿಯಾ, ರಿಕೆಟ್ಸಿಯಾ ವೈರಸ್, ಕ್ಲೇಮೀಡಿಯಾ ಹಾಗೂ ಅಣಬೆಗಳನ್ನು ಬಳಸಲಾಗುತ್ತದೆ. ಈ ರೋಗಾಣುಗಳು ಉಸಿರು, ಆಹಾರ ಹಾಗೂ ಚರ್ಮದ ಮೂಲಕ ದೇಹವನ್ನು ಸೇರಿ ರೋಗ ಉಂಟು ಮಾಡುವುದಲ್ಲದೆ ಸಾವನ್ನೂ ಉಂಟುಮಾಡಬಹುದಾಗಿದೆ. ಸಾವಿರಾರು ಟನ್ ರಾಸಾಯನಿಕ ಅಸ್ತ್ರಗಳನ್ನು ಶೇಖರಿಸಿಡುವ ಬದಲು, ಕೇವಲ ಕೆಲವೇ ಕಿಲೋ ಗ್ರಾಂಗಳಷ್ಟು ಆಂಥ್ರಾಕ್ಸ್ ಅಂಕುರ ಬೀಜವನ್ನು ಉಪಯೋಗಿಸಿ ಹೆಚ್ಚು ಜನರನ್ನು ಸಾಯಿಸಬಹುದಾಗಿದೆ. ಜೈವಿಕ ಅಸ್ತ್ರವನ್ನು ಕಳ್ಳ ಸಾಗಾಣಿಕೆ ಮಾಡಿ, ಬಚ್ಚಿಡಲು ಸಾಧ್ಯವಾಗುವುದರಿಂದ, ಜೈವಿಕ ಭಯೋತ್ಪಾದನೆ ಸಾಧಿಸಲು ಸುಲಭವಾಗುತ್ತದೆ. ಶೈತ್ಯಾಗಾರದಲ್ಲಿ ಒಣಗಿಸಿದ ಅಂಕುರ ಬೀಜಗಳನ್ನು ಅಂಚೆ ಮೂಲಕ ದೇಶದಿಂದ ದೇಶಕ್ಕೆ ಸಾಗಿಸಬಹುದಾಗಿದೆ. ಈ ವಿಧಾನ ಸಿಂಪಡಿಸುವ ವಿಧಾನಕ್ಕಿಂತ ಅಷ್ಟೇನೂ ಪರಿಣಾಮಕಾರಿಯಲ್ಲದಿದ್ದರೂ, ಭಯೋತ್ಪಾದನೆ ಸಾಧಿಸಲು ಪರಿಣಾಮಕಾರಿಯಾಗಿದೆ.

ಮಾಧ್ಯಮಗಳ ಪಕ್ಷಪಾತ

ಮಾಧ್ಯಮಗಳು ಅಮೆರಿಕದ ವೈಟ್‌ಹೌಸ್ (White House) ಹಾಗೂ ಭಾರತ ಸರ್ಕಾರದ ಗೃಹಮಂತ್ರಿಗಳ ಕಛೇರಿಗಳು ಸ್ವೀಕರಿಸಿದ ಅಂಚೆಗಳ ಬಗ್ಗೆ ವರದಿ ಮಾಡಿ, ಭಯೋತ್ಪಾದನೆಗೆ ಅನಗತ್ಯ ಪ್ರಚಾರ ಕೊಡುವ ಪ್ರಯತ್ನ ಮಾಡಿದವು. ಅದೇ ಮಾಧ್ಯಮಗಳು ಅಫಘಾನಿಸ್ತಾನದಲ್ಲಿ ಅಮೆರಿಕನ್ ಬಾಂಬ್ ದಾಳಿಯಲ್ಲಿ ಮೃತಪಟ್ಟ ಸಾವಿರಾರು ಮಕ್ಕಳು ಹಾಗೂ ಮಹಿಳೆಯರ ಬಗ್ಗೆ ವರದಿ ಮಾಡದೆ ಇರುವುದು ಮಾಧ್ಯಮಗಳ ಪಕ್ಷಪಾತ ಧೋರಣೆಯನ್ನು ತೋರಿಸುತ್ತದೆ.

ಜೈವಿಕ ಭಯೋತ್ಪಾದನೆಯನ್ನು ಪತ್ತೆ ಹಚ್ಚುವುದು ಅಷ್ಟೇನೂ ಸುಲಭವಲ್ಲದ ಕಾರಣ ಈ ಪದಾರ್ಥಗಳನ್ನು ತಯಾರಿಸಲು ಔಷಧಿ ಉದ್ಯಮ, ಪ್ರಯೋಗಾಲಯ ಗಳನ್ನು ಬಳಸಬಹುದಾಗಿದೆ. ಈ ಅಸ್ತ್ರಗಳನ್ನು ತಯಾರಿಸಲು ಅಷ್ಟೇನು ಖರ್ಚಾಗುವುದಿಲ್ಲ ಹಾಗೂ ವಿಶೇಷ ತಂತ್ರಜ್ಞಾನದ ಅವಶ್ಯಕತೆಯಿಲ್ಲ.

50 ಕೆ.ಜಿ. ಅಂಕುರ ಬೀಜವನ್ನು 5 ಲಕ್ಷ ಜನಸಂಖ್ಯೆ ಇರುವ ಸ್ಥಳದ ಮೇಲೆ ಸಿಂಪಡಿಸಲಾಗಿ, ಒಂದು ಲಕ್ಷ ಜನರು ಮರಣ ಹೊಂದಬಹುದೆಂದು ವಿಶ್ವ ಆರೋಗ್ಯ ಸಂಸ್ಥೆ ಅಂದಾಜು ಮಾಡಿದೆ. ಅಂದರೆ ಇದು ಹೈಡ್ರೋಜನ್ ಬಾಂಬಿಗಿಂತ ಹೆಚ್ಚು ಪರಿಣಾಮಕಾರಿಯೆಂದು ಹೇಳಬಹುದು!

ಈ ರೋಗ ತಡೆಗಟ್ಟಲು ಲಸಿಕೆಯನ್ನೂ ಬಳಸಬಹುದಾಗಿದೆ. ಈಗ ಅಮೆರಿಕದ ಒಂದೇ ಕಂಪನಿ ಅಮೆರಿಕದ ಶಸ್ತ್ರಾಸ್ತ್ರ ಪಡೆಗೆ ಲಸಿಕೆಯನ್ನು ತಯಾರಿಸುತ್ತಿದೆ. ಲಸಿಕೆ ತಯಾರಿಸುವ ತಂತ್ರಜ್ಞಾನ ಭಾರತದಲ್ಲಿಲ್ಲ. ಆದರೂ ಸರ್ಕಾರದ ಪ್ರಕಾರ ಮುಂದಿನ ವರ್ಷದ ಕೊನೆಯ ಹೊತ್ತಿಗೆ ಭಾರತದಲ್ಲಿ ಲಸಿಕೆ ತಯಾರಾಗುವ ಸಂಭವವಿದೆ. ಆದ್ದರಿಂದ ಈಗ ನಮಗಿರುವ ಒಂದೇ ಸಾಧ್ಯತೆ ರೋಗವನ್ನು ಪತ್ತೇ ಹಚ್ಚಿ ಚಿಕಿತ್ಸೆ ಮಾಡುವುದು. ಭಾರತದಲ್ಲಿ ವೈದ್ಯಕೀಯ ವ್ಯವಸ್ಥೆಯ ಲಭ್ಯತೆ ವಿರಳವಾಗಿರುವುದರಿಂದ ಆಂಥ್ರಾಕ್ಸ್‌ನಿಂದ ನಾವು ಹೇಗೆ ಸಾವನ್ನು ತಡೆಗಟ್ಟಬಹುದೆಂಬುದನ್ನು ಊಹಿಸಬಹುದಾಗಿದೆ.

ತಡೆಯಬಹುದಾದ ರೋಗ ಆದರೆ ಬಿಡಬೇಕಲ್ಲ ಪೇಟೆಂಟ್ ಪಿಶಾಚಿ

ಇತ್ತೀಚಿಗೆ ಅಮೆರಿಕಾದಲ್ಲಿ ಆಂಥ್ರಾಕ್ಸ್ ಚಿಕಿತ್ಸೆ ಮಾಡುವ ಔಷಧಿಯ ಕೊರತೆ ಕಂಡು ಬಂದಾಗ, ಕೆನಡಾ ದೇಶದ ಕಂಪನಿಯನ್ನು ಔಷಧಿ ಪೂರೈಸಲು ಕೇಳಿಕೊಳ್ಳಲಾಯಿತು. ಆದರೆ ಆ ಔಷಧಿಯ ಪೇಟೆಂಟನ್ನು ಅಮೆರಿಕದ ಬಾಯರ್ ಕಂಪನಿಯು ಹತ್ತಿರವಿದ್ದುದರಿಂದ,ಕೆನಡಾ ದೇಶದ ಕಂಪನಿ ಔಷಧಿಯನ್ನು ತಯಾರು ಮಾಡುವಂತಿರಲಿಲ್ಲ. ಆದರೂ ಈ ಪೇಟೆಂಟ್ ಕಾನೂನನ್ನು ಉಲ್ಲಂಘಿಸಿ ಔಷಧಿ ತಯಾರಿಸಲು ಕೆನಡಾ ಕಂಪನಿ ಮುಂದೆ ಬಂದಿತು. ಇಂದು ಈ ಪೇಟೆಂಟ್ ವ್ಯವಸ್ಥೆ ಸಾವು ತಪ್ಪಿಸಲು ಎಂತಹ ಆತಂಕ ತಂದೊಡ್ಡಿದೆ ಎಂದು ತಿಳಿಯಬಹುದಾಗಿದೆ ಹಾಗೂ ಮುಂದುವರಿದ ರಾಷ್ಟ್ರಗಳೇ ಇಂತಹ ಪರಿಸ್ಥಿತಿ ಎದುರಿಸುತ್ತಿರುವಾಗ ಭಾರತದಂತಹ ದೇಶಗಳು ಎಂತಹ ಪರಿಸ್ಥಿತಿಯನ್ನು ಎದುರಿಸಬೇಕಾಗುತ್ತದೆ?

ಆಂಥ್ರಾಕ್ಸ್ ರೋಗಭೀತಿ ಒಂದು ಭ್ರಮೆಯಲ್ಲ - ಆಂಥ್ರಾಕ್ಸ್ ರೋಗ ಹತೋಟಿಗೆ ವೈದ್ಯರಿಗೆ ತರಬೇತಿ, ಔಷಧಿಗಳು, ಲಸಿಕೆ, ಚಿಕಿತ್ಸಾ ವ್ಯವಸ್ಥೆ ಮುಂತಾದವುಗಳ ಅವಶ್ಯಕತೆ ಇದೆ. ಆದರೆ ಈ ಭಯ ಭೀತಿ ಉಂಟು ಮಾಡುವ ಭಯೋತ್ಪಾದನೆಗೆ ಕಾರಣವೇನು ಎಂಬುದನ್ನು ಗುರುತಿಸಿ ಸರಿಪಡಿಸುವುದು ಇನ್ನೂ ಹೆಚ್ಚು ಅಗತ್ಯವಾಗುತ್ತದೆ. ಅಮೆರಿಕಾದ ಸಾಮ್ರಾಜ್ಯಶಾಹಿ ನೀತಿಯನ್ನು ಮಾಧ್ಯಮಗಳು ತಪ್ಪು ರೀತಿಯಲ್ಲಿ ಪ್ರಚಾರ ಮಾಡುತ್ತಾ ಬಂದು, ಜನರ ಮನಸ್ಸಿನಲ್ಲಿ ಭಯೋತ್ಪಾದಕರೆ ನಿಜವಾದ ವೈರಿಗಳೆಂಬ ಭ್ರಮೆ ಹುಟ್ಟಿಸಿವೆ. ಜನರನ್ನು ತಪ್ಪುದಾರಿಗೆ ಎಳೆಯುತ್ತಿವೆ. ಆಂಥ್ರಾಕ್ಸ್ ಭೀತಿ ತಡೆಗಟ್ಟಲು, ನಿಜವಾದ ವೈರಿ ಯಾರೆಂದು ಕಂಡುಹಿಡಿಯಬೇಕಾಗಿದೆ.

ಡಾ. ಪ್ರಕಾಶ್ ಸಿ.ರಾವ್ ಅನಾಹಾರ ಕ್ಲಿನಿಕ್,
ಮೊದಲನೇ ಮುಖ್ಯರಸ್ತೆ, ನಾಲ್ಕನೇ ಅಡ್ಡರಸ್ತೆ,
ಯಶವಂತಪುರ, ಬೆಂಗಳೂರು.
ದೂರವಾಣಿ: 3379016


ಇದು ಸಾಕುಪ್ರಾಣಿಗಳ ರೋಗ ಆದರೆ....?!

ಆಂಥ್ರಾಕ್ಸ್ ಸಾಕು ಪ್ರಾಣಿಗಳ ರೋಗ, ಮಾನವನಿಗೆ ತಗುಲಿದಾಗ ಸಾವು ಉಂಟಾಗಲು ಸಾಧ್ಯ. ಆಂಥ್ರಾಕ್ಸ್ ರೋಗಾಣು ಒಂದು ಬೆಕ್ಟೀರಿಯಂ. ಈ ರೋಗಾಣು ಅಂಕುರ ಬೀಜದ ರೂಪತಾಳಿ, ಹಲವಾರು ದಶಕಗಳವರೆಗೆ ಸುಪ್ತಸ್ಥಿತಿಯಲ್ಲಿ ಜೀವಂತವಿದ್ದು, ನಂತರ ಬೇಕ್ಟರಿಯಂ ರೂಪತಾಳಿ, ರೋಗ ಉಂಟು ಮಾಡುತ್ತದೆ. ಈ ಗುಣವಿರುವುದರಿಂದಲೇ ಈ ರೋಗಾಣುವನ್ನು ಜೈವಿಕ ಅಸ್ತ್ರದಂತೆ ಉಪಯೋಗಿಸಲು ಸಾಧ್ಯವಾಗುತ್ತಿದೆ. ಈ ಗುಣ ಇತರೆ ಅನೇಕ ಬೆಕ್ಟೀರಿಯಂಗೆ ಇರುವುದಿಲ್ಲ. ಈ ರೋಗ ಸಸ್ಯಹಾರಿ ಪ್ರಾಣಿಗಳಲ್ಲಿಯಲ್ಲದೆ (ಕುರಿ, ಹಸು, ಆಡು) ರೈತರಲ್ಲಿ, ಪ್ರಾಣಿ ವಧೆ ಮಾಡುವವರಲ್ಲಿ, ಉಣ್ಣೆ ತಯಾರಿಸುವವರಲ್ಲಿ ಕಂಡುಬರುತ್ತದೆ. ಇತ್ತೀಚಿಗೆ ಈ ರೋಗ ಪ್ರಾಣಿಗಳಲ್ಲೂ ವಿರಳವಾಗಿದೆ.

ಈ ರೋಗಾಣು ಮಾನವನ ಚರ್ಮ, ಮೂಗು, ಗಂಟಲು ಮೂಲಕ ದೇಹ ಸೇರಿ ಧ್ವನಿಪೆಟ್ಟಿಗೆ, ಪುಪ್ಪಸ ಹಾಗೂ ಕರುಳಿನಲ್ಲಿ ವೃದ್ಧಿಸಿ, ರಕ್ತ ಸೇರಿ, ನಂತರ ಮಿದುಳು ಹಾಗೂ ಇನ್ನೂ ಅನೇಕ ಅಂಗಾಂಗಳಿಗೆ ಹರಡುತ್ತದೆ. ರೋಗ ಉಂಟಾಗಲು ಕೆಲವು ದಿವಸವಾಗಬಹುದು. ಚರ್ಮದಲ್ಲಿ ನೋವು ರಹಿತ ಕುರ ಉಂಟಾಗುತ್ತದೆ. ಕ್ರಮೇಣ ರೋಗಿಗೆ ಜ್ವರ ಬಂದು ನಂಜಿನಿಂದ ಸಾವನ್ನಪ್ಪುತ್ತಾನೆ.

ರೋಗಾಣು ಉಸಿರೆಳೆತದಿಂದ ಪುಪ್ಪುಸ ಸೇರಿ ನಿಮೋನಿಯಾ ಹಾಗೂ ನಂಜು ಉಂಟಾಗುತ್ತದೆ. ಈ ಮಾರ್ಗದಿಂದ ಉಂಟಾದ ರೋಗ ಮರಣಾಂತಿಕವಾಗಿ ಪರಿಣಮಿಸಬಹುದು. ಅನ್ನನಾಳದ ಮಾರ್ಗವಾಗಿ ರೋಗಾಣು ದೇಹ ಸೇರಿ ವಾಂತಿಭೇದಿ ಉಂಟು ಮಾಡುತ್ತದೆ. ಈ ಮಾರ್ಗದಿಂದ ಉಂಟಾಗುವ ರೋಗ ಅಷ್ಟೇನು ಸಾಮಾನ್ಯವಲ್ಲ.

ಈ ರೋಗ ಬೆಕ್ಟೀರಿಯಂ ಅಲ್ಲದೆ, ಸುಮಾರು



2500 ಅಂಕುರ ಬೀಜದ ಸೇವನೆಯಿಂದಲೂ ಉಂಟಾಗಬಹುದು. ಅಂಕುರ ಬೀಜಗಳಿಗೆ ದೇಹದಲ್ಲಿ ಸರಿಯಾದ ವಾತಾವರಣವಿರುವುದರಿಂದ, ಅಂಕುರ ಬೀಜಗಳು ಬೆಕ್ಟೀರಿಯಾಗಳಾಗಿ ಕೂಡಲೇ ರೋಗ ಉಂಟು ಮಾಡುತ್ತದೆ. ಈ ರೋಗಾಣು ಸಂಪರ್ಕ ಬಂದ ಶೇ 50 ರಷ್ಟು ಜನರು ಸಾವನ್ನಪ್ಪುತ್ತಾರೆ. ರೋಗ ಕಂಡು ಹಿಡಿಯುವುದನ್ನು ತಡ ಮಾಡಿದಲ್ಲಿ ಸಾವು ಉಂಟಾಗಬಹುದು. ಚಿಕಿತ್ಸೆಗೆ ಆಂಟಿಬಯಾಟಿಕ್‌ಗಳನ್ನು ಬಳಸಬಹುದಾಗಿದೆ.

ಅರಿವು-ಅಸ್ತಿತ್ವದ ಅಂಗಳ ಅಗಲಿಸಿದ 'ಅಕ್ಕ' ನಾಟಕೋತ್ಸವ

ವರದಿ : ಬಿ.ಕೆ. ಗಿರಿಜ



ವಿಚಾರ ಸಂಕಿರಣದಲ್ಲಿ ಶಬಾನಾಜ್ಮಿ

ರಂಗಾಯಣ ನವೆಂಬರ್ 18 ರಿಂದ 25 ರವರೆಗೆ ಒಂದು ವಾರ 'ಅಕ್ಕ' ರಾಷ್ಟ್ರೀಯ ಮಹಿಳಾ ನಾಟಕೋತ್ಸವವನ್ನು ಏರ್ಪಡಿಸಿತ್ತು. ಮಹಿಳಾ ಸಶಕ್ತೀಕರಣ ವರ್ಷದಲ್ಲಿ ಮಹಿಳೆಯ ಸಾಧನೆಯನ್ನು ಗುರುತಿಸುವ ಹಾಗೂ ಗೌರವಿಸುವ ಒಂದು ಉತ್ತಮ ಪ್ರಯತ್ನವಾಗಿತ್ತು. ಈ ನಾಟಕೋತ್ಸವ ಉತ್ಸವಕ್ಕೆ 'ಅಕ್ಕ' ಎಂದು ಹೆಸರಿಸಿರುವುದಕ್ಕೆ ರಂಗಾಯಣ ಕೊಡುವ ಕಾರಣ ಹೀಗಿದೆ 'ಅಕ್ಕ' ಎಂದರೆ ಹಿರಿಯ ಸಹೋದರಿ, ಅಕ್ಕ ಎಂದರೆ ಕನ್ನಡ ಸಾಹಿತ್ಯದ ವಚನ ಯುಗದಲ್ಲಿ ಭಕ್ತಿಯ ಅನುಭಾವದಲ್ಲಿ ಸಾರಿದ ಅಕ್ಕ 'ಮಹಾದೇವಿಯೂ' ಹೌದು.

ಅಕ್ಕ ಭಾರತೀಯ ಕುಟುಂಬ ವ್ಯವಸ್ಥೆಯಲ್ಲಿ ಅಕ್ಕ, ಅಣ್ಣ, ಅಮ್ಮ, ಅಪ್ಪ, ತಂಗಿ..... ಎಲ್ಲರೂ ಹೌದು.

ಇತರೆ ಎಲ್ಲರಿಗಿಂತ ಹೆಚ್ಚಾಗಿ ಹೆಣ್ಣು ನಮ್ಮ ಸಮಾಜದ ನಿಜವಾದ ಸಾಂಸ್ಕೃತಿಕ ವಾರಸುದಾರಳು. ಕನ್ನಡದ ಹೆಚ್ಚಿನ ಜಾನಪದ ಕಾವ್ಯಗಳು, ಹೆಚ್ಚಿನ ಚಿತ್ತಾರಗಳು, ಜೀವನ ಶೈಲಿ, ಊಟ, ಉಪಚಾರ, ನಡೆನುಡಿ, ಹಬ್ಬಹರಿದಿನ, ಸೌಜನ್ಯ ಎಲ್ಲವನ್ನು ಜೀವಂತವಾಗಿವುದು ಹೆಣ್ಣೆ ಹೌದು. ಹಾಗಾಗಿ ಮಹಿಳೆಯರ ಮಟ್ಟಿಗೆ ಹೇಳುವುದಾದರೆ ಸಂಸ್ಕೃತಿ ಎಂಬುದು ಚಳುವಳಿಯೂ ಹೌದು, ಅಭಿವ್ಯಕ್ತಿ ಎಂಬುದು ಬದಲಾವಣೆಯ ಅಸ್ತ್ರವೂ ಹೌದು.

ದುರ್ದೈವವೆಂದರೆ ಪುರುಷಪ್ರಧಾನ ಸಮಾಜ ಆಕೆಯನ್ನು ಬಂದಿಸಿಟ್ಟಿರುವುದೂ ಕೂಡ ಇವೇ ಸಾಂಸ್ಕೃತಿಕ ಪಾತ್ರಗಳನ್ನು ಬಳಸಿ. ಸಂಸ್ಕೃತಿ ಎಂಬುದು ಶಾಸ್ತ್ರಗಳಾಗಿ, ಸಿದ್ಧಾಂತಗಳಾಗಿ, ಹಾಡು, ಕತೆ, ಪುರಾಣಗಳ ಕಂತೆ, ಕಂತೆಗಳಾಗಿ ಆಕೆಯನ್ನು ಹದ್ದುಬಸ್ತಿನಲ್ಲಿಟ್ಟಿದೆ. ಅಷ್ಟೇ ಏಕೆ ದೇವರ ಕಲ್ಪನೆಯೂ ಕೂಡ ಎಷ್ಟೋ ಬಾರಿ ಹೆಂಗಸರನ್ನು ಹದ್ದುಬಸ್ತಿನಲ್ಲಿಡುವ ಅಸ್ತ್ರವಾದದ್ದಿದೆ.

ನಗುಮೊಗದ ಸಂಕಟ

ದೈಹಿಕ ಹಲ್ಲೆ ಎಂಬುದು ಹೆಣ್ಣಿಗೆ ಆಗಾಗ ಒದಗುವ ಅಪವಾದ ಅಥವಾ ಅಪಮಾನ ಮಾತ್ರ. ಆದರೆ ಮಾನಸಿಕ ಹಿಂಸೆ ಹಾಗೂ ಸಾಂಸ್ಕೃತಿಕ ಕಟ್ಟುಪಾಡು ಎಂಬುದು ಸಾರ್ವತ್ರಿಕವಾದ ಹಾಗೂ ನಗುಮುಖದ ಸಂಕಟವಾಗಿದೆ. ಆಕೆಗೆ ಸಾಂಸ್ಕೃತಿಕ ಹಲ್ಲೆಯ ವಿರುದ್ಧ ಮೊದಲು ಬಂಡೆದ್ದ ಕವಿಯತ್ರಿ ಅಕ್ಕಮಹಾದೇವಿ. ಅನಂತರ ಹಲವು ಅಕ್ಕಂದಿರುವ ಅಂಗಳವನ್ನು ಅಷ್ಟಷ್ಟು ವಿಸ್ತರಿಸಲು ಹೆಣಗಿದ್ದಾರೆ. ಕಳೆದ ಮೂರು ದಶಕಗಳಲ್ಲಿ ಭಾರತೀಯ ರಂಗಭೂಮಿಯಲ್ಲಿ ಹೆಂಗಸರು ಸಾಧಿಸಿರುವ ಪ್ರಗತಿ ಅಸಾಧಾರಣವಾದದ್ದು.

ಅಭಿವ್ಯಕ್ತಿ ಸ್ವಾತಂತ್ರ್ಯ

ರಂಗಭೂಮಿಯು ಅಭಿವ್ಯಕ್ತಿಯ ಪ್ರಮುಖ ಮಾಧ್ಯಮ. ವ್ಯಾಪಾರೀ ಮಾಧ್ಯಮಗಳಲ್ಲಿ ನಡೆಯುತ್ತಿರುವ ಹೆಣ್ಣಿನ ದುರ್ಬಳಕೆಗೆ ಹೋಲಿಸಿದಾಗ ತನ್ನದೇ ಸೀಮಿತ ರೀತಿಯಲ್ಲಿ ಸತ್ಯ ಚಿತ್ರಿಸಲು ಹೆಣಗಿರುವ ಮಾಧ್ಯಮ ರಂಗಭೂಮಿ. ಹೆಣ್ಣು ರಂಗ ಮಾಧ್ಯಮದಲ್ಲಿ ಸಾಧಿಸಿರುವ ಹಿರಿಮೆ ಇಡೀ ಸಮಾಜದಲ್ಲಿ ಆಕೆ ಸಾಧಿಸಬೇಕಾಗಿರುವ ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೆ ದಾರಿ ಕೊಡುತ್ತದೆ ಎಂಬ ನಂಬಿಕೆ. ಹಾಗಾಗಿಯೇ 'ಅಕ್ಕ' ಉತ್ಸವ.

'ಅಕ್ಕ' ಉತ್ಸವದ ಉದ್ಘಾಟನೆಯ ಗೌರವ ದೊರಕಿದ್ದು ಹಿರಿಯ ಜ್ಞಾನಪೀಠ ಪ್ರಶಸ್ತಿ ವಿಜೇತ ಕಾದಂಬರಿಗಾರ್ತಿ ಶ್ರೀಮತಿ ಕೃಷ್ಣಾ ಶೋಬ್ತಿ ಅವರಿಗೆ. ಉದ್ಘಾಟನಾ ದಿವಸದ ನಾಟಕ ಕೂಡ ಅವರದೇ ಕಾದಂಬರಿ ಆಧಾರಿತ 'ಎ ಲಡ್ಕಿ'.

ಸರಸಮ್ಮನ ಸಮಾಧಿ: ಥಿಯೇಟ್ರಿಕಲ್ ಎಫೆಕ್ಟ್

ರಂಗಾಸಕ್ತರಲ್ಲಿ ಬಹಳಷ್ಟು ಆಸಕ್ತಿಯನ್ನು ಕೆರಳಿಸಿದ್ದ 'ಸರಸಮ್ಮನ ಸಮಾಧಿ' ನಾಟಕ ಅವರನ್ನು ನಿರಾಸೆಗೊಳಿಸಲಿಲ್ಲ. ಉತ್ತಮ ನಿರ್ದೇಶನ, ರಂಗಕೌಶಲ್ಯ, ಪ್ರಬುದ್ಧ ಅಭಿನಯದಿಂದ ಕೂಡಿ ಒಂದ ಚೇತೋಹಾರಿ ಅನುಭವವನ್ನು ನೀಡಿತು. ಡಾ|| ಶಿವರಾಮ ಕಾರಂತರ ಅದೇ ಹೆಸರಿನ ಕಾದಂಬರಿಯನ್ನಾದರಿಸಿದ್ದ ಈ ನಾಟಕದಲ್ಲಿ ಅಕ್ಕನವರ ವಚನಗಳನ್ನು ಸಮರ್ಥವಾಗಿ ಬಳಸಿ ಒಂದು 'ಥಿಯೇಟ್ರಿಕಲ್ ಎಫೆಕ್ಟ್' ಕೊಡುವಲ್ಲಿ ನಿರ್ದೇಶಕಿ ಯಶಸ್ವಿಯಾಗಿದ್ದಾರೆ.

ಸಿಂಗಾರವ್ವ ಮತ್ತು ಅರಮನೆ

ಶ್ರೀ ಚಂದ್ರಶೇಖರ ಕಂಬಾರ ವಿರಚಿತ ನಾಟಕವನ್ನು ಕುಮಾರಿ ಸೌಮ್ಯ ವರ್ಮರವರ ನಿರ್ದೇಶನದಲ್ಲಿ ಏಕವ್ಯಕ್ತಿ ಪ್ರದರ್ಶನ ನೀಡಿದವರು ಶ್ರೀಮತಿ ಲಕ್ಷ್ಮಿ ಚಂದ್ರಶೇಖರ್. ಲಕ್ಷ್ಮಿ ತಮ್ಮ ಅತ್ಯುತ್ತಮ ಅಭಿನಯದಿಂದ ಮತ್ತು ಉತ್ತರ ಕರ್ನಾಟಕದ ಕಡೆಯ ಆಡು ಭಾಷೆಯಲ್ಲಿರುವ ಸಂಭಾಷಣೆಗಳನ್ನು ಕರಗತ ಮಾಡಿಕೊಂಡವರಂತೆ ಸಂಭಾಷಣೆ ಹೇಳಿ ಪ್ರೇಕ್ಷಕರ ಮೈ ಮರೆಸಿದರು. ಜಮೀನ್ದಾರಿ ವ್ಯವಸ್ಥೆಯ ಶಿಥಿಲತೆಯನ್ನು, ಧನ ದಾಹವನ್ನು ಹೇಳುವಾಗಲೇ, ಅದರ ಕ್ರೌರ್ಯದ ಚಕ್ರದಲ್ಲಿ ನಜ್ಜುಗುಜ್ಜಾಗಿರುವ ಹೆಣ್ಣಿನ ಬದುಕು ಅನಾವರಣಗೊಳ್ಳುತ್ತದೆ ಈ ಕಥೆಯಲ್ಲಿ. ಸಾತ್ವಿಕ ಗೃಹಿಣಿಯೊಬ್ಬರ ಬಂಡಾಯದ ಕಥೆ 'ಸಿಂಗಾರವ್ವ ಮತ್ತು ಅರಮನೆ'.

ಸಕ್ಕೂಬಾಯಿ: ದಿನವೂ ನಡೆಸುತ್ತಿರುವ ಯುದ್ಧ

ಮುಂಬಯಿಯ 'ಏಕ್ ಜೂಟೇ' ತಂಡದ ಶ್ರೀಮತಿ **ನಾದಿರಾ ಬಬ್ಬರ್ ನಿರ್ದೇಶನದಲ್ಲಿ ಸರಿತಾ ಜೋಷಿಯವರ** ಏಕವ್ಯಕ್ತಿ ಪ್ರದರ್ಶನದ ಹಿಂದಿ ನಾಟಕ **'ಸಕ್ಕುಬಾಯಿ'** ಎಲ್ಲರ ಗಮನ ಸೆಳೆದದ್ದು ಸರಿತಾಜೋಷಿಯವರ ಚುರುಕಾದ ಅಭಿನಯದಿಂದ. ಅರವತ್ತೆರಡ ಈ ನಟಿ ಎಂಬತ್ತು ನಿಮಿಷಗಳ ಕಾಲ ಭಾವನೆಗಳ ಏರಿಳಿತ ಪ್ರದರ್ಶಿಸುತ್ತಾ ಪ್ರೇಕ್ಷಕರ ಚಪ್ಪಾಳೆ ಗಿಟ್ಟಿಸುವಲ್ಲಿ ಯಶಸ್ವಿಯಾದರು.

ಮುಂಬಯಿಯಲ್ಲಿ ಮನೆ ಕೆಲಸದವರನ್ನು 'ಬಾಯಿ' ಎನ್ನುತ್ತಾರೆ. ಹಾಗಾಗಿ ಶಕುಂತಲ ಎಲ್ಲರ ಬಾಯಲ್ಲಿ ಸಕ್ಕೂ ಬಾಯಿ ಆಗುತ್ತಾಳೆ. ಶಕುಂತರ ಮುಂಬಯಿ ಸಮೀಪದ ಗ್ರಾಮವೊಂದರಲ್ಲಿ ಕೃಷಿ ಕಾರ್ಮಿಕರ ಕುಟುಂಬದಲ್ಲಿ ಹುಟ್ಟಿ, ಹೊಟ್ಟೆ ಪಾಡಿಗಾಗಿ ಮುಂಬಯಿಯ ಮಾವನ ಮನೆಗೆ ಸೇರುತ್ತಾಳೆ. ಅಪ್ರಾಪ್ತ ವಯಸ್ಸಿನಲ್ಲಿಯೇ ಸ್ವಂತ ಸೋದರಮಾವನದಿಂದ ಅತ್ಯಾಚಾರಕ್ಕೊಳಗಾಗಿ ತಾಯಿಯೊಡನೆ ಮನೆಯಿಂದ ಹೊರಹಾಕಿಸಿಕೊಂಡು ಆಶ್ರಯಕ್ಕೆ ಬಂದ ಟ್ಯಾಕ್ಸಿ ಡ್ರೈವರನ ಕೋಣೆಯಲ್ಲಿದ್ದುಕೊಂಡು ಧನಿಕರ ಮನೆಗಳಲ್ಲಿ ದುಡಿಯತೊಡಗುತ್ತಾಳೆ. ನಾಟಕದಲ್ಲಿ ಸಕ್ಕೂ ಬಾಯಿ ತನ್ನ ಅನುಭವಗಳನ್ನು ನಮ್ಮೊಂದಿಗೆ ಬಿಚ್ಚಿಡುತ್ತಾ ಹೋಗುತ್ತಾಳೆ.

ಈ ನಾಟಕದ ಕೊನೆಯ ಭಾಗ ಗಮನಾರ್ಹ. ಸಕ್ಕೂ ಮಗಳು ಚೆನ್ನಾಗಿ ಓದಿದ್ದಾಳೆ. ಬಿ.ಕಾಂ. ಪದವಿಯಲ್ಲಿ ರ್ಯಾಂಕ್ ಪಡೆದಿದ್ದಾಳೆ ಮತ್ತು ಕವನಗಳನ್ನು ಬರೆಯುತ್ತಾಳೆ. ಮಗಳು ದೊಡ್ಡ ಸಮಾರಂಭದಲ್ಲಿ ಸನ್ಮಾನಿತಳಾದದ್ದನ್ನು ಸಕ್ಕು ಹಿಗ್ಗಿನಿಂದ ವರ್ಣಿಸುತ್ತಾಳೆ. ಸಕ್ಕು ತನ್ನ ಮಗಳ ಒಂದು ಕವನದ ಸಾಲುಗಳನ್ನು ಪ್ರೇಕ್ಷಕರ ಮುಂದೆ ವಿವರಿಸುವುದರೊಂದಿಗೆ ನಾಟಕಕ್ಕೆ ತೆರೆ ಬೀಳುತ್ತದೆ. ಸಾಲುಗಳು ಹೀಗಿವೆ "ತಾಯಿ ಎದ್ದೇಳು. ನೀನು ಕಷ್ಟಪಟ್ಟದ್ದುಸಾಕು, ಈಗ ಕಾಲ ಬದಲಾಗಿದೆ. ಸೂರ್ಯ ಹುಟ್ಟಿದ್ದಾನೆ. ಸಮಯ ನಮಗಾಗಿ ಕಾಯುತ್ತಿದೆ' ಸಕ್ಕೂ ಪ್ರಶ್ನಿಸುತ್ತಾಳೆ ಒಂದುಯುದ್ಧ ಮಾಡಿದ ಲಕ್ಷ್ಮಿಬಾಯಿ ವೀರಾಗ್ರಣಿ ಎನಿಸಿದಳು. ಆದರೆ ದಿನದಿನವೂ ಇಂತಹ ಎಷ್ಟೊಂದು ಯುದ್ಧ ಮಾಡುತ್ತಾ ಬಂದಿರುವ ನನ್ನ ನಿಮ್ಮಂತಹ ಸ್ತ್ರೀಯರನ್ನೆಲ್ಲಾ ಏನನ್ನಬೇಕು ಎಂದು.

ಬೀದಿ ನಾಟಕಗಳು ಹೇಗೆ ಒಂದು ಸಂದೇಶದ ವಾಹಕವಾಗಿ ಸಮಾಜವನ್ನು ಮುಟ್ಟಬಲ್ಲವು ಎಂಬುದಕ್ಕೆ ಸಾಕ್ಷಿಯಾಗಿದ್ದವು. ಉತ್ಸವದ ಸಮಯದಲ್ಲಿ ಪ್ರದರ್ಶಿತವಾದ ಹಲವಾರು ಬೀದಿ ನಾಟಕಗಳು.

ಬಂಡೆದ್ದ ಕ್ರಾಂತಿಕಾರಿ

'ಅಕ್ಕ' - ಭಾವೈಕ್ಯತಾ ವೇದಿಕೆ, ಹೊಸಪೇಟೆಯವರು ಮೈಮ್ ರಮೇಶ್ ಅವರ ನಿರ್ದೇಶನದಲ್ಲಿ ಪ್ರದರ್ಶಿಸಿದ ಅಕ್ಕ ಬೀದಿ ನಾಟಕ 12ನೇ ಶತಮಾನದ ಸಮಾಜ ಸುಧಾರಕಿ ಅಕ್ಕನನ್ನು ಸೂತ್ರಧಾರನ ಮೂಲಕರಂಗಕ್ಕೆ ಬರಮಾಡಿಕೊಂಡಿತು. ಮಹಿಳೆಯರ ಮೇಲೆ ನಡೆಯುವ ವರದಕ್ಷಿಣೆ ಸಾವು, ದೇವದಾಸಿ ಪದ್ಧತಿ, ಬಾಲ್ಯ ವಿವಾಹ ಮುಂತಾದ ಸಾಮಾಜಿಕ ಪಿಡುಗುಗಳಿಗೆ ಮೂಕ ಪ್ರೇಕ್ಷಕಳಾಗುವ ಅಕ್ಕ ವಿಶ್ವ ಸುಂದರಿಯನ್ನು ನೋಡುವ ಆಸೆ ವ್ಯಕ್ತಪಡಿಸುತ್ತಾಳೆ. ವಿಶ್ವಸುಂದರಿ ಸ್ಪರ್ಧೆಗಳ ಹಿಂದಿರುವ ಬಲಿಷ್ಠ ರಾಷ್ಟ್ರಗಳ ಕುರೂಪಿ ಜಾಲವನ್ನು, ಹೆಣ್ಣನ್ನು ಒಂದು ವ್ಯಾಪಾರೀ ಸರಕನ್ನಾಗಿ ಉಪಯೋಗಿಸುವ ಪರಿಯನ್ನು ಕಂಡು ದಂಗಾದ ಅಕ್ಕ ಕೊನೆಯಲ್ಲಿ ತಾನೂ ಒಂದು ಪಾತ್ರವಾಗಿ ಮಹಿಳೆಯರ ಮೇಲೆ ನಡೆಯುವ ದೌರ್ಜನ್ಯದ ವಿರುದ್ಧ ಬಂಡೆದ್ದು ಕ್ರಾಂತಿ ಸಂದೇಶವನ್ನು ಮಹಿಳೆಯರಿಗೆ ಮತ್ತು ಸಮಾಜಕ್ಕೆ ಕೊಡುತ್ತಾಳೆ. ಎಲ್ಲ ರಂಗಭೂಮಿಯ ತತ್ವಗಳನ್ನು ಒಳಗೊಂಡ ನಾಟಕ ಜನರನ್ನು ಸೆಳೆಯುವಲ್ಲಿ ಯಶಸ್ವಿಯಾಯಿತು.

ಧಾರಕ ಧಾರವಾಡ ಅವರಹೆಣ್ಣು, ಮಹಿಳಾ ಸಮಖ್ಯಾ, ರಾಯಚೂರು ಅವರ ಅವ್ವ, ಜನನಾಟ್ಯ ಮಂಚ್ ಅವರ ಔರತ್ ಮತ್ತು ಓ ಬೋಲ್ ಉಡೀ, ಪ್ರಜಾನಾಟ್ಯ ಮಂಡಳಿ ಹೈದರಾಬಾದ್‌ರವರ ಬಂಜಾರಿನ್ ಬೀದಿ ನಾಟಕಗಳು ಹೆಣ್ಣು ಎದುರಿಸುತ್ತಿರುವ ಹೆಣ್ಣು ಭ್ರೂಣ ಹತ್ಯೆ, ಬಾಲ್ಯ ವಿವಾಹ, ಸಮದುಡಿಮೆಗೆ ವೇತನ ತಾರತಮ್ಯ, ಹೆಣ್ಣು ಮತ್ತು ಗಂಡು ಮಕ್ಕಳ ನಡುವೆ ಪಾಲನೆಯಲ್ಲಿ ತಾರತಮ್ಯ, ವರದಕ್ಷಿಣೆ ಸಮಸ್ಯೆ, ಕೆಲಸ ಮಾಡುವ ಸ್ಥಳದಲ್ಲಿನ ಕಿರುಕುಳಗಳು, ಮುಂತಾದ ಹೆಣ್ಣು ಎದುರಿಸುತ್ತಿರುವ ಸಮಸ್ಯೆಗಳನ್ನು ಅತ್ಯಂತ ಸಮರ್ಥವಾಗಿ ಪ್ರದರ್ಶಿಸಿದವು.

ಶೋಷಿತರ ಧ್ವನಿ

ಶತಶತಮಾನಗಳಿಂದ ಹೆಣ್ಣಿಗೆ ಬಾಯಿ ಮುಚ್ಚಿಕೊಂಡು ಎಲ್ಲವನ್ನು ಸಹಿಸುವುದೇ ಮರ್ಯಾದೆ ಎಂದು ಬೋಧಿಸುತ್ತಾ ಬಂದಿರುವಸಮಾಜದಲ್ಲಿ ಮಹಿಳೆ ಧ್ವನಿ ಎತ್ತುವುದೇ ನಾಟಕದ ವಸ್ತು. ಮನೆಯಲ್ಲಿ ಹುಡುಗಿಯೊಬ್ಬಳು ಪಾಲಕರು ಬೋಧಿಸುವ ತನಗೊಂದು ನೀತಿ, ತನ್ನ ಸಹೋದರನಿಗೊಂದು ನೀತಿ ಎಂಬ ತಾರತಮ್ಯವನ್ನು ವಿರೋಧಿಸಲು ಎತ್ತುವ ಧ್ವನಿ. ಮಹಿಳೆಯರಿಗೆ ಕುಟುಂಬ ಯಾವ ನಿರ್ಧಾರದಲ್ಲಿಯೂ ಭಾಗಿಯಾಗಲು ಬಿಡದ ಒಂದು ಕುಟುಂಬದ ಹೆಣ್ಣು ತನ್ನ ಮಗಳ ಮದುವೆಯ ವಿಚಾರದಲ್ಲಿಯೂ ತನಗೆ ನಿರ್ಧಾರದಲ್ಲಿ ಭಾಗಿಯಾಗುವ ಸ್ವಾತಂತ್ರ್ಯವಿಲ್ಲದಾಗ ಧ್ವನಿ ಎತ್ತುವುದು ಮತ್ತು ತಾನು ಕೆಲಸಮಾಡುವ ಕಾರ್ಖಾನೆಯಲ್ಲಿರುವ ಕಾರ್ಮಿಕ-ಸಂಘದ ಸದಸ್ಯಳಾದರೂ ಸಹ ಮಹಿಳಾ ಕಾರ್ಮಿಕರೆಲ್ಲರ ಬೇಡಿಕೆಯಾದ ಪ್ರತ್ಯೇಕ ಶೌಚಾಲಯದ ಬೇಡಿಕೆಯನ್ನು ಬೇಡಿಕೆಗಳ ಪಟ್ಟಿಯಲ್ಲಿ ಸೇರಿಸಲು ನಿರಾಕರಿಸುವ ಕಾರ್ಮಿಕ ನಾಯಕರುಗಳ ವಿರುದ್ಧ ಧ್ವನಿ ಎತ್ತುವುದು, ಹೀಗೆ ಮೂರು ಭಾಗದಲ್ಲಿ ಪ್ರದರ್ಶಿತವಾದ **'ಓ ಬೋಲ್ ಉಡೀ'** ಬೀದಿ ನಾಟಕಕ್ಕೊಂದು ಮಹತ್ವದ ಸ್ಥಾನ ದೊರಕಿಸಿಕೊಟ್ಟ ದಿ|| ಸಪ್ದರ್ ಹಶ್ಮಿಯವರ ಪತ್ನಿ ಮಾಲಾಶ್ರೀ ಹಷ್ಮಿಯರ ಮುಂದಾಳತ್ವದಲ್ಲಿ ನಡೆಯುತ್ತಿರುವ ದೆಹಲಿಯ ಜನನಾಟ್ಯ ಮಂಚ್ ಅವರ ಕೊಡುಗೆ.

ನ್ಯಾಯಕ್ಕಾಗಿ ಕಾದಿರುವ ಭಾಂಬ್ರಿ:

ಸಮುದಾಯ ಬೆಂಗಳೂರು ತನ್ನ ಬೀದಿ ನಾಟಕಗಳ ಮೂಲಕ ಸಮಾಜವನ್ನು ಎಚ್ಚರದಿಂದಿಡಲು ಶ್ರಮಿಸುತ್ತಿದೆ. ನ್ಯಾಯಕ್ಕಾಗಿ ಕಾದಿರುವ ಭಾಂಬ್ರಿ ರಾಜಸ್ಥಾನದ ಬಟೇರಿ ಗ್ರಾಮದ ಒಂದು ಬಡ ಕುಂಬಾರ ಕುಟುಂಬದಲ್ಲಿ ಜನಿಸಿದ ಭಾಂವ್ರಿ ದೇವಿ ಎಂಬ ಹೆಣ್ಣಿನ ಸತ್ಯ ಹೋರಾಟದ ಕಥೆ. ಈ ನಾಟಕ ಬೆಂಗಳೂರು ಮುಂತಾದ ಕಡೆ ಹಲವಾರು ಅತ್ಯಂತ ಯಶಸ್ವಿ ಪ್ರದರ್ಶನ ನೀಡಿ ಗಮನಸೆಳೆದಿದೆ.

ನನ್ನಂತಹ ನಾಟಕದ ಪ್ರೇಕ್ಷಕರಿಗೆ ಅಕ್ಕ ಒಂದು ಹೊಸ ಅನುಭವವನ್ನೇ ನೀಡಿತು. ಆದರೆ ಕೆಲವು ಒಳ್ಳೆಯ ನಾಟಕಗಳನ್ನು ನೋಡಲಾಗದ ಕೊರಗು ಹಾಗೆಯೇ ಉಳಿಯಿತು. ನಾಟಕೋತ್ಸವದ ಬಗ್ಗೆ ಶ್ರೀ ಲಿಂಗದೇವರು ಹಳೇಮನೆ ಅವರು ಲೇಖನವೊಂದರಲ್ಲಿ ಹೀಗೆ ಪ್ರಸ್ತಾಪಿಸುತ್ತಾರೆ - ಪದವನರ್ಪಿಸ ಹುದಲ್ಲವೇ ಪದಾರ್ಥವನರ್ಪಿಸಬಾರದು' ಎಂಬ ಅಲ್ಲಮನ ವಚನವೊಂದಿದೆ. ಅಕ್ಕ ರಾಷ್ಟ್ರೀಯ ಮಹಿಳಾ ನಾಟಕೋತ್ಸವದ ಬಗ್ಗೆ ಬರೆಯುವಾಗ ಈ ವಚನದ ಸಾಲು ನೆನಪಿಗೆ ಬರುತ್ತದೆ. ನಾಟಕೋತ್ಸವದ ವಿವರಗಳನ್ನು ಪದಗಳಲ್ಲಿ ವಿವರಿಸಬಹುದಲ್ಲದೇ ಅದರ ಅನುಭವಗಳನ್ನು ಪದಗಳಲ್ಲಿ ಹಿಡಿಸಿಡಲಾಗದು. ಅಂತಹ ಒಂದು ಅದ್ಭುತವಾದ ಅನುಭವವನ್ನು 'ಅಕ್ಕ' ನಾಟಕೋತ್ಸವ ಅದನ್ನು ವೀಕ್ಷಿಸಿದವರಿಗೆಲ್ಲ ನೀಡಿದೆ. ರಂಗಭೂಮಿಯಲ್ಲಿರುವವರು ಮತ್ತು ಪ್ರೇಕ್ಷಕರು ಸದಾ ಮೆಲುಕು ಹಾಕುವಂತಹ ಅನುಭವ ಅದು.

ಅಕ್ಕ ನಾಟಕೋತ್ಸವ ಏನನ್ನು ಸಾಧಿಸಬೇಕೆಂದು ಬಯಸುತ್ತದೆ? ಈ ಪ್ರಶ್ನೆಯನ್ನು ಉತ್ಸವದ ಸಂದರ್ಭದಲ್ಲಿ ಅನೇಕ ಜನ ಕೇಳಿದ್ದಾರೆ. ನಾಟಕೋತ್ಸವ ಇದರಿಂದ ನೇರವಾಗಿ ಸಾಧಿಸಬೇಕಾದ್ದು ಏನೂ ಇಲ್ಲ. ಈ ನಾಟಕೋತ್ಸವ ಆದ ತಕ್ಷಣ ಮಹಿಳೆಯ ಸಮಸ್ಯೆಯೂ ಪರಿಹಾರವಾಗುವುದಿಲ್ಲ. 'ಅಕ್ಕ' ಮಹಿಳಾ ಸಮಸ್ಯೆಗಳನ್ನು ಚರ್ಚಿಸುವುದಕ್ಕೆ, ಪ್ರದರ್ಶಿಸುವುದಕ್ಕೆ ವೇದಿಕೆ ಒದಗಿಸಿಕೊಟ್ಟಿದೆ. ಇಲ್ಲಿನ ಚರ್ಚೆ, ಪ್ರದರ್ಶನ, ಬೇರೆ ಬೇರೆ ಕಡೆ ಚರ್ಚಿತವಾಗಬಹುದು. ಅದರಿಂದ ಹೊಸ ಚಿಂತನೆಗಳು, ಕ್ರಿಯೆಗಳು ಮೂಡಬಹುದು. ಅದಾದರೆ 'ಅಕ್ಕ' ಸಾರ್ಥಕ. ಆದರೆ ರಂಗಭೂಮಿಯ ದೃಷ್ಟಿಯಿಂದ ಸಾಧಿಸಿದ್ದು ಅಪಾರ. ಅಷ್ಟೊಂದು ಜನ ಬಂದರಲ್ಲ! ಅದೇನು ಸಾಮಾನ್ಯ ಸಾಧನೆಯಲ್ಲ. ಅಕ್ಕ ನಾಟಕೋತ್ಸವ ಮುಗಿದೇ ಹೋಯಿತಲ್ಲಾ ಎಂದು ಬೇಸರ ಪಟ್ಟುಕೊಂಡರಲ್ಲ! ಅದು ಸಾಮಾನ್ಯ ವಿಚಾರ ಅಲ್ಲ. 'ಅಕ್ಕ'ನ ಸಾಧನೆಯಿರುವುದು ಅಲ್ಲಿ.


ಹಲವು ಆಯಾಮಗಳಲ್ಲಿ ಹರಡಿದ್ದ ಉತ್ಸವ

ಅಕ್ಕ ಬರೀ ನಾಟಕೋತ್ಸವವಾಗಿಯಷ್ಟೇ ಮೂಡಿ ಬರಲಿಲ್ಲ. ನಾಟಕೋತ್ಸವ ಮಧ್ಯ ಆಕರ್ಷಣೆಯಾದರೂ, ಸುತ್ತಲಿನ ಆಕರ್ಷಣೆಗಳು ಅನೇಕ, ವಿಚಾರಸಂಕಿರಣ, ಪುಸ್ತಕಮೇಳ, ಚಲನಚಿತ್ರ ಪ್ರದರ್ಶನ, ಮುಖಾಮುಖಿ ಸಂವಾದ ಮತ್ತು ಕರಕುಶಲ ವಸ್ತುಗಳ ಪ್ರದರ್ಶನ ಇಡೀ ನಾಟಕೋತ್ಸವಕ್ಕೆ ಹೆಚ್ಚಿನ ಆಕರ್ಷಣೆ ತುಂಬಿದ್ದವು. ನಾಟಕ ತಂಡಗಳಲ್ಲದೆ ದೇಶದ ಬೇರೆ ಬೇರೆ ಭಾಗದಿಂದ ಮಹಿಳಾ ಸಂಘಟನೆಯಲ್ಲಿ ತೊಡಗಿರುವಅನೇಕ ಚಿಂತಕರು ವಿಚಾರ ಸಂಕಿರಣಗಳಲ್ಲಿ ಭಾಗವಹಿಸಿದ್ದರು.. ಕೃಷ್ಣಾ ಸೋಬ್ರಿ, ಶಬಾನಾಅಜ್ಮಿ, ರತಿ ಭಾರ್ಥಲೊಮೆ, ತ್ರಿಪುರಾರಿ ಶರ್ಮ, ಸಾವಿತ್ರಿ ಕನ್ನಯ್ಯ ಲಾಲ್, ಕಾವಾಲಂ ನಾರಾಯಣ ಪಣಿಕ್ಕರ್, ಲಕ್ಷ್ಮಿ ಕೃಷ್ಣಮೂರ್ತಿ ಮುಂತಾ ದವರು ನಾಟಕೋತ್ಸವದಲ್ಲಿ ಭಾಗವಹಿ ಸಿದ್ದು, ಇಡೀ ಉತ್ಸವಕ್ಕೆ ಶೋಭೆ ತರುವು ದರ ಜೊತೆಗೆ ಮಹತ್ವವನ್ನೂ ತಂದಿತ್ತು.

ಇತ್ತೀಚಿನ ವರ್ಷಗಳಲ್ಲಿ ರಂಗ ನಿರ್ದೇಶಕರು, ನಟರು ರಂಗಭೂಮಿಯನ್ನು ತೊರೆದು ಟಿ.ವಿ. ಕಡೆ ಧಾವಿಸತೊಡಗಿದ್ದಾರೆ. ಹವ್ಯಾಸಿ ತಂಡಗಳಲ್ಲಿ ವೃತಿವಂತಿಕೆ ಕಡಿಮೆಯಾಗುತ್ತಿದೆ ಎಂಬ ಕೊರಗೂ ಇತ್ತು. ಈ ಹಿನ್ನೆಲೆಯಲ್ಲಿ ಈ ನಾಟಕೋತ್ಸವಕ್ಕೆಮಹತ್ವ ಪ್ರಾಪ್ತವಾಗಿತ್ತು. ಸಂಘಟಕರಿಗೆ ಆತಂಕ ಜೊತೆಗೆ ಎಲ್ಲೋ ಒಂದು ಕಡೆ ಆಸೆಯ ನಿರೀಕ್ಷೆ.

ಎಲ್ಲಾ ಆತಂಕಗಳನ್ನು ದೂರ ಮಾಡುವಂತೆ ಪ್ರೇಕ್ಷಕರು ಬಂದರು. ಸಂಘಟಕರಿಗೆ ಆಶ್ಚರ್ಯವಾಗುವಂತೆ ಬಂದರು. ಜನರಿಗೆ ಆಶ್ಚರ್ಯವಾಗುವಂತೆ ಬಂದರು.

ಟಿಕೆಟ್ ಸಿಗದಿದ್ದಾಗ ಮರುಪ್ರದರ್ಶನ ಹಾಕುವಂತೆ ಒತ್ತಾಯ ಒಡ್ಡಿದರು. ಒಂದೇ ಅವಧಿಯಲ್ಲಿ ಮೂರು ಕಡೆ ನಾಟಕ ನಡೆಯುತ್ತಿದ್ದರೆ ಜಾಗ ಸಿಕ್ಕಿದ ಕೂಡಲೇ ನುಸುಳಿಕೊಂಡರು. ಕೂರಲು ಕುರ್ಚಿಗಳೇ ಬೇಕಿರಲಿಲ್ಲ. ನಿಂತು ನೋಡುತ್ತೇವೆಂದು ನಿಂತೇ ನೋಡಿದರು. ಒಂದೆರಡು ಕಳಪೆ ನಾಟಕಗಳು ಪ್ರದರ್ಶನವಾದರೂ ಶಿಳ್ಳೆ ಹೊಡೆಯಲಿಲ್ಲ. ಮಾರನೇ ದಿನ ಮುಖಾಮುಖಿಗೆ ಬಂದುಅಲ್ಲಿ ತಮ್ಮ ಅತೃಪ್ತಿಯನ್ನು ವ್ಯಕ್ತಪಡಿಸಿದರು. ನಮ್ಮ ಪ್ರೇಕ್ಷಕ ಬದಲಾಗಿದ್ದಾನೆಯೇ? ಸದಾಶಯದ ರಂಗಭೂಮಿಗೆ ಭಿನ್ನವಾಗಿ ಪ್ರತಿಕ್ರಿಯಿಸಲಾರಂಭಿಸಿದ್ದಾನೆಯೇ? ರಂಗಭೂಮಿಯ ಮೂಲಕ ಸಮಸ್ಯೆಗಳನ್ನು ಅರಿಯಲು ಪ್ರಯತ್ನಿಸುತ್ತಿದ್ದಾರನೆಯೇ? ಅಥವಾ ಸದಭಿರುಚಿಯ ನಾಟಕ ವೀಕ್ಷಣೆಗೆ ಹಸಿದು ಕುಳಿತಿದ್ದಾನೆಯೇ? ಯಾಕೆ ಇಷ್ಟೊಂದು ದೊಡ್ಡ ಪ್ರಮಾಣದಲ್ಲಿ ಪ್ರೇಕ್ಷಕರು ಬಂದರು? ಯಾಕೆ ಇಷ್ಟೊಂದು ಒಳ್ಳೆಯ ರೀತಿಯಲ್ಲಿ ವರ್ತಿಸಿದರು? ಇಂಥ ಪ್ರಶ್ನೆಗಳು ರಂಗಕರ್ಮಿಗಳ ತಲೆ ತಿನ್ನತೊಡಗಿವೆ. ಅಂಥದೊಂದು ಅದ್ಭುತ ವಾತಾವರಣವನ್ನು ಎಂಟು ದಿನಗಳವರೆಗೆ ಈ ನಾಟಕೋತ್ಸವ ಸೃಷ್ಟಿಸಿಕೊಟ್ಟಿತ್ತು.



ಸದಾ ತುಂಬಿ ತುಳುಕಿದ ಪ್ರೇಕ್ಷಕರು

PRB DECR 319-79/79 AIKYARANGA WEEKLY Reg. No. 17015/64 KRNM/BGS-405 MAG(2)

ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಎಸ್. ಸೂರ್ಯನಾರಾಯಣ ರಾವ್
ಸಂಪಾದಕರು: ಎಸ್ ವೈ ಗುರುಶಾಂತ್ ಸಂಪಾದಕೀಯ ಕಛೇರಿ: ನಂ. 12, 18ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು-27 ಫೋನ್ ನಂ. 2236462,
ಮುದ್ರಣ: ಹನಿ ಪ್ರಿಂಟರ್ಸ್, ಕ್ವೀನ್ ರಸ್ತೆ, ಬೆಂಗಳೂರು.

Printed & Published by Communist Party of India(Marxist), Karnataka State Committee. Editor : S.Y.GURUSHANTH